# ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ

ಸ್ಕೂಲ್ ಲೀಡರ್‌ಶಿಪ್ ಅಕಾಡೆಮಿ (SLA-SISLEP), ಧಾರವಾಡ

(ನ್ಯಾಶನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (NCSL-NIEPA), ನವದೆಹಲಿ ಇವರ ಸಹಯೋಗದಲ್ಲಿ)

## ತರಬೇತಿ ಸಾಹಿತ್ಯ ಕೈಪಿಡಿ

## ರಕ್ಷಾ

## "ಮಕ್ಕಳ ಸುರಕ್ಷತೆಯ ವಿನೂತನ ಮಾರ್ಗೋಪಾಯಗಳು"



ಸಹಕಾರ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಮಣ್ಣೂರು, ಬೆಳಗಾವಿ

# ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಹಾಗೂ ನಿರ್ವಹಣಾ ಸಂಸ್ಥೆ (ಸಿಸ್ಲೆಪ್) ಕರ್ನಾಟಕ, ಧಾರವಾಡ.

**ಸ್ಕೂಲ್ ಲೀಡರ್ ಶಿಪ್ ಅಕಾಡೆಮಿ (SLA SISLEP),ಧಾರವಾಡ**

**(ನ್ಯಾಶನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್ ಶಿಪ್ (NCSL-NIEPA),**

**ನವ ದೆಹಲಿ ಇವರ ಸಹಯೋಗದಲ್ಲಿ)**

## ತರಬೇತಿ ಸಾಹಿತ್ಯ ಕೈಪಿಡಿ

# "ಮಕ್ಕಳ ಸುರಕ್ಷತೆಯ ವಿನೂತನ ಮಾರ್ಗೋಪಾಯಗಳು"

**ಸಹಕಾರ**

## ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಣ್ಣೂರು, ಬೆಳಗಾವಿ

**2023–24**

# ಸಾಹಿತ್ಯ ರಚನಾ ತಂಡ

## ಪರಿಕಲ್ಪನೆ

**ಡಾ. ಬಿ.ಕೆ.ಎಸ್.ವರ್ಧನ್**
**ನಿರ್ದೇಶಕರು,**
ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣ ಸಂಸ್ಥೆ, ಕರ್ನಾಟಕ (ಸಿಸ್ಲೆಪ್)
ರೊದ್ದ ರಸ್ತೆ, ಡಯಟ್ ಆವರಣ, ಧಾರವಾಡ.

## ಮಾರ್ಗದರ್ಶನ

ಶ್ರೀ ಎಸ್.ಡಿ.ಗಾಂಜಿ ಪ್ರಾಚಾರ್ಯರು/ಉಪ ನಿರ್ದೇಶಕರು (ಅ)
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಡಯಟ್ ಮಣ್ಣೂರ, ಬೆಳಗಾವಿ

## ತರಬೇತಿ ಸಾಹಿತ್ಯ ರಚನಾ ಸಂಪನ್ಮೂಲ ತಂಡ:

**1) ಶ್ರೀ ಆಂಜಿನೇಯ ಆರ್.ಕೆ.ಹಿರಿಯ ಉಪನ್ಯಾಸಕರು**
**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಮಣ್ಣೂರ**

**2) ಶ್ರೀಮತಿ ಭಾರತಿ ದಾಸೋಗ,ಉಪನ್ಯಾಸಕರು**
**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)**

**2) ರಮೇಶ್ ವೀ ಗೋಣಿ ಸಹ ಶಿಕ್ಷಕರು**
**ಸ.ಕಿ.ಪ್ರಾ.ಕನ್ನಡ ಶಾಲೆ ಜೋಗೆನಟ್ಟಿ ಬೆಳಗಾವಿ(ತಾ) (ಜಿ)**

**4) ಶ್ರೀಮತಿ ಜ್ಯೋತಿಕೊಟಗಿ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು**
**ಪ್ರಾಥಮಿಕ ವಿಭಾಗ , ಚನ್ನಮ್ಮನಕಿತ್ತೂರು (ತಾ)**

**5) ಶ್ರೀಮತಿ ಕಾಂಚನಮಾಲಾ.ಎ.ಕದ್ದು ಗಣಿತ ಅಧ್ಯಾಪಕರು**
**ಕೆ.ಪಿ.ಮೊಖಾಶಿ ಸ. ಪ್ರೌ. ಹೂಲಿಕಟ್ಟೆ (ತಾ)ಚನ್ನಮ್ಮನಕಿತ್ತೂರು**

**6) ಶ್ರೀ ವ್ಹಿ.ಜಿ.ಕಾಜಗಾರ ಗಣಿತ ಅಧ್ಯಾಪಕರು**
**ಕೆ.ಪಿ.ಎಸ್.ಪ್ರೌಢವಿಭಾಗ ಹುಣಶೀಕಟ್ಟೆ (ತಾ)**

**7) ಶ್ರೀಮತಿ ತೀರ್ಥಾಆರ್.ನಾಯಕ ಗಣಿತ ಅಧ್ಯಾಪಕರು**
**ಸರಕಾರಿ ಪ್ರೌಢಶಾಲೆ ವೀರಾಪೂರ ಚನ್ನಮ್ಮನಕಿತ್ತೂರು (ತಾ)**

**8) ಶ್ರೀ ಚಂದ್ರಶೇಖರ ಕೋಲಾಕಾರ ಸಹ ಶಿಕ್ಷಕರು**
**ಸ.ಕಿ.ಪ್ರಾ.ಕನ್ನಡಶಾಲೆ ರಾಜಹಂಸ ಗಡ (ತಾ) (ಜಿ)**

**9) ಶ್ರೀಮತಿ ಸುಮಾಮರಡಿ ಆಂಗ್ಲ ಭಾಷಾ ಶಿಕ್ಷಕರು**
**ಸ.ಹಿ.ಪ್ರಾ.ಕನ್ನಡ ಶಾಲೆ, ಹೊಸಕಾದರವಳ್ಳಿ**

**10) ಶ್ರೀ ದಿಲೀಪಕಾಳೆ ಚಿತ್ರಕಲಾ ಉಪನ್ಯಾಸಕರು**
**ಡಯಟ್ ಮಣ್ಣೂರು ಬೆಳಗಾವಿ**

**11) ಶ್ರೀ ಬಸವಪ್ರಭು ಪಾಟೀಲ ಸಹ ಶಿಕ್ಷಕರು**
**ವಿಜ್ಞಾನಶಿಕ್ಷಕರು**
**ಸ.ಹಿ.ಪ್ರಾ.ಕನ್ನಡಶಾಲೆ, ಕೊಟಬಾಗಿ ಚನ್ನಮ್ಮನಕಿತ್ತೂರು (ತಾ)**

**12) ಶ್ರೀಮತಿ ಉಮಾಚವ್ಹಾಣ ಗಣಿತ ಮತ್ತು**
**ಸ.ಮಾ.ಹಿ.ಪ್ರಾ.ಕನ್ನಡ ಶಾಲೆ ತುರಕರಶೀಗಿಹಳ್ಳಿ**

## ಎಸ್.ಎಲ್.ಎ – ಸಿಸ್ಲೆಪ್ ತಂಡ

- **ಶ್ರೀಮತಿ ಎ.ಎನ್ ಶೀಲಾ, ಹಿರಿಯ ಸಹಾಯಕ ನಿರ್ದೇಶಕರು**
- **ಶ್ರೀಮತಿ ಸ್ವರೂಪಶೀಲಾ ಹೆಚ್ ವಿ, ಉಪನ್ಯಾಸಕರು**
- **ಶ್ರೀ ಮಹಾವೀರ ಹಂಚಿನಾಳ, ಸಹಾಯಕ ನಿರ್ದೇಶಕರು**
- **ಡಾ. ಪೂರ್ಣಿಮಾ ಮುಕ್ಕುಂದಿ, ಉಪನ್ಯಾಸಕರು**
- **ಡಾ. ಎನ್ ಹೆಚ್ ಪೂಜಾರ, ಉಪನ್ಯಾಸಕರು**
- **ಶ್ರೀಮತಿ ದೇವಿರಮ್ಮ ಎಸ್, ಉಪನ್ಯಾಸಕರು**

# ನಿರ್ದೇಶಕರ ಆಶಯ ನುಡಿಗಳು



ಡಾ.ಬಿ.ಕೆ.ಎಸ್.ವರ್ಧನ್
ನಿರ್ದೇಶಕರು
ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು
ನಿರ್ವಹಣಾ ಸಂಸ್ಥೆ (ಸಿಸ್ಲೆಪ್),
ಕರ್ನಾಟಕ, ಧಾರವಾಡ

ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ–2009 ರ ಪ್ರಕಾರ ದೇಶದ ಪ್ರತಿಯೊಂದು ಅರ್ಹ ಮಗುವಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಖಚಿತ ಪಡಿಸುವುದು ಸಾಂವಿಧಾನಿಕ ಹೊಣೆಗಾರಿಕೆಯಾಗಿದೆ. ಅರ್ಹ ವಯೋಮಾನದ 6 ರಿಂದ 14 ವರ್ಷದ ಎಲ್ಲಾ ಮಕ್ಕಳಿಗೆ ಎಂಟು ವರ್ಷಗಳ ಗುಣಾತ್ಮಕ ಶಿಕ್ಷಣವನ್ನು ನಮ್ಮ ಶಾಲೆಗಳಲ್ಲಿ ಖಾತರಿಪಡಿಸುವುದು ಶಾಲಾ ಶಿಕ್ಷಣ ವ್ಯವಸ್ಥೆಯ ಹೊಣೆಗಾರಿಕೆಯಾಗಿದೆ. ಈ ಹಿನ್ನಲೆಯಲ್ಲಿ ಕರ್ನಾಟಕ ಸರಕಾರವು ಅನೇಕ ಉಪಕ್ರಮಗಳನ್ನು ಜಾರಿಗೆ ತಂದಿದೆ. ಶಿಕ್ಷಕರಿಗೆ ಬೆಂಬಲ ವ್ಯವಸ್ಥೆಯಾಗಿ ಕಾರ್ಯ ನಿರ್ವಹಿಸುವ ಶೈಕ್ಷಣಿಕ ಆಡಳಿತಗಾರರ ಮಾರ್ಗದರ್ಶನ, ಹಿಮ್ಮಾಹಿತಿ ಹಾಗೂ ಅನುಪಾಲನೆಯು ಕಾರ್ಯಕ್ಷೇತ್ರದಲ್ಲಿ ಅಗತ್ಯವಾಗಿದೆ. ಇರುವುದನ್ನು ಸರಿಯಾಗಿ ಅನುಷ್ಠಾನವಾಗುವಂತೆ ಮಾಡಬೇಕಾದರೆ ಇಲಾಖಾ ಕಾರ್ಯಕ್ರಮಗಳ ಕುರಿತಂತೆ ನಮ್ಮ ಅರ್ಥೈಸಿಕೊಳ್ಳುವಿಕೆ ಹೇಗಿರಬೇಕು ಎಂದು ಅರಿಯುವುದು ಮುಖ್ಯವಾಗಿದೆ. ಈ ಪ್ರಯುಕ್ತ ಶೈಕ್ಷಣಿಕ ಆಡಳಿತಗಾರರು ಇಲಾಖಾ ಕಾರ್ಯಕ್ರಮಗಳ ಮೂಲ ಆಶಯ ಹಾಗೂ ಕಾಳಜಿಯನ್ನು ಅರ್ಥೈಸಿಕೊಂಡು ಶಿಕ್ಷಣದ ಗುಣಾತ್ಮಕತೆಯ ನೆಲೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಶಿಕ್ಷಣದ ಗುರಿಗಳನ್ನು ಶಾಲೆಗಳಲ್ಲಿ ಸಾಕಾರಗೊಳಿಸುವ ಮೂಲಕ ನ್ಯಾಯಯುತ, ಸಮಾನತೆಯ, ಮಾನವೀಯ ಮತ್ತು ಸುಸ್ಥಿರ ಸಮಾಜ ನಿರ್ಮಾಣ ಮಾಡಬೇಕಾಗಿದೆ.

ಶೈಕ್ಷಣಿಕ ಆಡಳಿತಗಾರರಿಗೆ ನಾಯಕತ್ವ ತರಬೇತಿ ನೀಡುವ ಜವಾಬ್ದಾರಿಯನ್ನು ಸರ್ಕಾರವು ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ – ಈ ಸಂಸ್ಥೆಗೆ ನೀಡಿದೆ. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಆಡಳಿತಗಾರರಿಗೆ ಜ್ಞಾನ, ಕೌಶಲ, ಶೈಕ್ಷಣಿಕ ದೃಷ್ಟಿಕೋನ ಹಾಗೂ ಮನೋಭಾವದ ಅಂಶಗಳನ್ನು ಒಳಗೊಂಡಂತೆ ಹಲವಾರು ಆಯಾಮಗಳುಳ್ಳ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿಯ ಒಟ್ಟು ಹನ್ನೆರೆಡು ತರಬೇತಿ ಸಾಹಿತ್ಯಗಳನ್ನು ಪ್ರಸಕ್ತ ಸಾಲಿನಲ್ಲಿ ಸಿದ್ಧಪಡಿಸಲಾಗಿದೆ. ಶೈಕ್ಷಣಿಕ ಆಡಳಿತಗಾರರು ತಮ್ಮ ಕಾರ್ಯಕ್ಷಮತೆ, ದಕ್ಷತೆಯೊಂದಿಗೆ ಎಲ್ಲರಿಗೂ ಮಾರ್ಗದರ್ಶನ ಮಾಡುವ ಸಾಮರ್ಥ್ಯ ಹೊಂದಿರಬೇಕಾದುದು ಅಗತ್ಯವಾಗಿದೆ. ಗುಣಾತ್ಮಕ ಕಲಿಕೆಯ ಮೂಲಕ ವಿದ್ಯಾರ್ಥಿಗಳ ಉಜ್ವಲ ಭವಿಷ್ಯ

ರೂಪಗೊಳ್ಳುವಂತೆ ಮಾಡಲು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ಸಹಾಯಕವಾಗಿವೆ.

2023–24 ನೇ ಸಾಲಿನಲ್ಲಿ ನ್ಯಾಷನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (ಓಅಖಐ), ದೆಹಲಿ ಇವರು ಮಾಡ್ಯೂಲ್‌ಗಳ ರಚನೆಗಾಗಿರೂ. 65000/– ಗಳನ್ನು ಬಿಡುಗಡೆ ಮಾಡಿದ್ದು, ಈ ಅನುದಾನದಲ್ಲಿ ಶಾಲಾ ಶಿಕ್ಷಣ ಇಲಾಖೆಯ ವಿವಿಧ ಸ್ತರದ ಅಧಿಕಾರಿಗಳಿಗೆ ನಾಯಕತ್ವ ಹಾಗೂ ಶೈಕ್ಷಣಿಕ ಕ್ಷೇತ್ರಗಳಿಗೆ ಅವಶ್ಯವಿರುವ ಹನ್ನೆರೆಡು ವಿಷಯಗಳ

ಮಾಡ್ಯೂಲ್‌ಗಳನ್ನು ರಚಿಸಲು ನಿರ್ಧರಿಸಲಾಯಿತು. ಈ ಮಾಡ್ಯೂಲ್‌ಗಳ ರಚನೆಗಾಗಿ ಧಾರವಾಡ, ಬೆಳಗಾವಿ, ಹಾವೇರಿ, ಗದಗ,ಇಳಕಲ್, ವಿಜಯಪುರ, ತುಮಕೂರು, ಚಿಕ್ಕಮಗಳೂರು, ಬೆಂಗಳೂರು ಗ್ರಾಮೀಣ, ಮೈಸೂರು, ಕೊಲಾರ ಡಯೆಟ್‌ಗಳನ್ನು ಆಯ್ಕೆ ಮಾಡಿಕೊಂಡು ಪ್ರತಿಯೊಂದು ಡಯೆಟ್‌ಗೆ ತಲಾ ರೂ.5000/– ಗಳನ್ನು ಬಿಡುಗಡೆ ಮಾಡಿ, ಒಂದೊಂದು ವಿಷಯದ ತರಬೇತಿ ಸಾಹಿತ್ಯ ರಚನೆಯ ಜವಾಬ್ದಾರಿಯನ್ನು ನೀಡಲಾಯಿತು. ಅವರಿಂದ ಸಿದ್ಧಪಡಿಸಲಾದ ಮಾಡ್ಯೂಲ್‌ಗಳನ್ನು ಸಿಸ್ಲೆಪ್‌ನ ಅಧಿಕಾರಿ ವೃಂದ, ವಿಷಯ ಪರಿಣಿತರು ಹಾಗೂ ಸಂಬಂಧಿಸಿದ ಡಯೆಟ್‌ನ ಸಿಬ್ಬಂದಿಗಳೊಂದಿಗೆ ಚರ್ಚಿಸಿ ಪುನರ್ ಪರಿಶೀಲಿಸುವ ಮೂಲಕ ಇನ್ನಷ್ಟು ಉತ್ತಮೀಕರಿಸಿ ಅಂತಿಮಗೊಳಿಸಲಾಯಿತು.

ಪ್ರಸ್ತುತ ತರಬೇತಿ ಸಾಹಿತ್ಯಗಳು ಅಂತಿಮ ರೂಪವನ್ನು ಪಡೆಯಲು ಕಾರಣೀಭೂತರಾದ ಶಾಲಾ ಶಿಕ್ಷಣ ಇಲಾಖೆಯ ಎಲ್ಲ ಅಧಿಕಾರಿಗಳ, ಸಂಪನ್ಮೂಲ ವ್ಯಕ್ತಿಗಳ, ಶಿಕ್ಷಕರ ಹಾಗೂ ಬೋಧಕೇತರ ವೃಂದದವರ ಸಹಕಾರ ಹಾಗೂ ಪ್ರಯತ್ನವು ಅಭಿನಂದನಾರ್ಹವಾಗಿದೆ. ಎಲ್ಲ ಅರ್ಹ ಮಕ್ಕಳಿಗೂ ಗುಣಾತ್ಮಕ ಶಿಕ್ಷಣವನ್ನು ಖಾತರಿಪಡಿಸಲು, ಶಿಕ್ಷಣದ ದೂರಗಾಮಿ ಗುರಿಗಳನ್ನು ಸಾಕಾರಗೊಳಿಸಲು, ಸುಸ್ಥಿರ ಹಾಗೂ ಸಮಾನತೆಯ ಸಮಾಜ ನಿರ್ಮಾಣ ಮಾಡಲು, ಹೊಸ ಸಾಧ್ಯತೆಗಳನ್ನು ಸೃಷ್ಟಿಸಲು ನಮ್ಮ ಮೇಲ್ವಿಚಾರಕ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ನೆರವಾಗುತ್ತವೆಂದು ಆಶಿಸುತ್ತೇನೆ.

**ದಿನಾಂಕ: 25, ಮಾರ್ಚ, 2025** **(ಡಾ.ಬಿ.ಕೆ.ಎಸ್.ವರ್ಧನ್)**

## ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (SISLEP) ಯ ಪರಿಚಯ:

ಕರ್ನಾಟಕ ಸರಕಾರವು ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ಜಾರಿಗೆ ತರಲು ಶಿಕ್ಷಣಾಧಿಕಾರಿಗಳ ಹಾಗೂ ಶಾಲಾ ಮುಖ್ಯಸ್ಥರ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರುವ ಉದ್ದೇಶದಿಂದ ಶಾಲಾ ಮಟ್ಟದಿಂದ ರಾಜ್ಯ ಮಟ್ಟದವರೆಗಿನ ಅಧಿಕಾರಿಗಳಿಗೆ ಅಗತ್ಯವಾದ ಸಾಮರ್ಥ್ಯಾಭಿವೃದ್ಧಿಯನ್ನು ಮಾಡುವ ಸಲುವಾಗಿ 1986 ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ 1992 ರ ಕಾರ್ಯಾನುಸರಣ ಯೋಜನೆ (Programme of action -POA) ಗಳ ಶಿಫಾರಸ್ಸುಗಳನ್ವಯ 2010ರಲ್ಲಿ 'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (State Institute of School Leadership, Educational Planning and Management (SISLEP) ಯನ್ನು ಸ್ಥಾಪಿಸಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿಯಲ್ಲಿ ಈ ಸಂಸ್ಥೆಯನ್ನು ನೋಂದಾಯಿಸಲಾಗಿದ್ದು, 'ಕನ್ನಡದ ದೀಪ'ಎಂದು ಹೆಸರಾಗಿರುವ ಡೆಪ್ಯೂಟಿ ಚನ್ನಬಸಪ್ಪನವರು ಕಟ್ಟಿ ಬೆಳೆಸಿದ ಧಾರವಾಡದ ಜಿಲ್ಲಾ ಶಿಕ್ಷಕರ ತರಬೇತಿ ಸಂಸ್ಥೆ, ಡಯಟ್ ಆವರಣದಲ್ಲಿ ಪ್ರಸ್ತುತ ಈ ಸಂಸ್ಥೆಯು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.



### ಸಂಸ್ಥೆಯ ದೂರದರ್ಶಿತ್ವ:

**" ಶಾಲಾ ನಾಯಕತ್ವದಲ್ಲಿ ಮಾರ್ಗದರ್ಶಿ ಅಧಿಕಾರಿಗಳ ಬಲವರ್ಧನೆ "**

**ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ ಡಯಟ್ ಆವರಣ, ಕಾಲೇಜು ರಸ್ತೆ, ಧಾರವಾಡ – 580008**

**ದೂರವಾಣಿ: 08362441129 ಇ–ಮೇಲ್:** sislepdirector.dwd@gmail.com

ನಮ್ಮ ದೇಶದ ಶಾಲಾ ಶಿಕ್ಷಣ ಕ್ಷೇತ್ರವು ಇಡೀ ಜಗತ್ತಿನಲ್ಲಿಯೇ ವಿಸ್ತೃತವಾದುದಾಗಿದೆ. ಶಾಲಾ ಹಂತದಿಂದ ರಾಜ್ಯ ಮಟ್ಟದವರೆಗೆ ಶಿಕ್ಷಕರು, ವಿವಿಧ ಸ್ತರದ ಇಲಾಖಾ ಮೇಲ್ವಿಚಾರಕರು ಮತ್ತು ಅಧಿಕಾರಿಗಳು ಸಮುದಾಯದ ಸಹಭಾಗಿತ್ವದ ಮೂಲಕ ಶಾಲಾ ಶಿಕ್ಷಣದ ಗುರಿಯನ್ನು ತಲುಪುವಲ್ಲಿ ಶ್ರಮಿಸುತ್ತಿದ್ದಾರೆ. ಕರ್ನಾಟಕ ರಾಜ್ಯವೊಂದರಲ್ಲಿಯೇ 2024–25 ನೇ

ಸಾಲಿನಲ್ಲಿ ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಅಂದಾಜು ಒಂದು ಕೋಟಿಗೂ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.ಈ ಬೃಹತ್ತಾದ ಶಿಕ್ಷಣ ವ್ಯವಸ್ಥೆಯು ಪರಿಣಾಕಾರಿಯಾಗಿ ಕೆಲಸ ಮಾಡುವಂತಾಗಲು, ಸ್ಥಳೀಯ ಅಗತ್ಯತೆಗಳು ಮತ್ತು ಜಾಗತಿಕ ಚಿಂತನೆಗಳಿಗೆ ಸೇತುವೆಯನ್ನು ಕಟ್ಟಲು ಸ್ವಾಯತ್ತತೆಯುಳ್ಳ, ಕ್ರಿಯಾಶೀಲವಾದ ಹಾಗೂ ಸಮರ್ಥ ಸಮುದಾಯದ ಅಗತ್ಯವಿದ್ದು, ಇಂತಹ ಒಂದು ಸಮುದಾಯವನ್ನು ಆಡಳಿತ ವಿಕೇಂದ್ರೀಕರಣದ ಮೂಲಕ ರೂಪಿಸಬೇಕು ಎನ್ನುವುದು ಸಂವಿಧಾನದ ಆಶಯವಾಗಿದೆ.

ಜಾಗತಿಕ ಹಂತದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪೂರಕವಾಗಿ ಕೆಲಸ ಮಾಡುತ್ತಿರುವ ಯುನೆಸ್ಕೊ, ಶೈಕ್ಷಣಿಕ ಯೋಜನೆಗಳನ್ನು ರೂಪಿಸಲು ಮತ್ತು ನಿರ್ವಹಣೆ ಮಾಡಲು ವಿಶಿಷ್ಟವಾದ ಹಾಗೂ ವಿಭಿನ್ನವಾದ ಸಾಮರ್ಥ್ಯಗಳ ಅಗತ್ಯವಿದೆ ಎಂಬುದನ್ನು ತಿಳಿಸುವುದಲ್ಲದೇ, 'ಇಲಾಖೆ' ಮತ್ತು 'ಸಮುದಾಯದ ಸಹಭಾಗಿತ್ವ' ದಲ್ಲಿ 'ಯೋಜನೆ ಮತ್ತು ನಿರ್ವಹಣೆ ' ಯನ್ನು ನಿಭಾಯಿಸಬೇಕು ಎನ್ನುವುದು ಇದರ ನಿಲುವಾಗಿದೆ.

ಈ ಹಿನ್ನೆಲೆಯಲ್ಲಿ 1986 ಹಾಗೂ 1992 ರ ರಾಷ್ಟ್ರೀಯ ಶಿಕ್ಷಣ ನೀತಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ನಿರ್ವಹಣೆಗೆ ಪ್ರಾಮುಖ್ಯತೆಯನ್ನು ನೀಡಿವೆ. ಇದರನ್ವಯ ಎಲ್ಲ ರಾಜ್ಯಗಳಲ್ಲಿ ರಾಜ್ಯ ಹಂತದಲ್ಲಿ SIEMAT (State institute for Educational Management, Administration and Training) ನ್ನು ಸ್ಥಾಪನೆ ಮಾಡಲು ಶಿಫಾರಸ್ಸು ಮಾಡಲಾಯಿತು. ಕರ್ನಾಟಕ ರಾಜ್ಯದಲ್ಲಿ 'SIEMAT' ಹೆಸರಿನ ಬದಲಾಗಿ 2010–11 ರಲ್ಲಿ ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (SISLEP-State Institute for School Leadership Educational Planning and Management) ಎಂಬ ಹೆಸರಿನಲ್ಲಿ ಸಂಸ್ಥೆಯು ಪ್ರಾರಂಭವಾಯಿತು. 'ಸಿಸ್ಲೆಪ್' ಕರ್ನಾಟಕ ಸೊಸೈಟಿಗಳ ಕಾಯ್ದೆಯ ಅಡಿಯಲ್ಲಿ

ನೋಂದಣಿಯಾಗಿರುವ ಸ್ವಾಯತ್ತ ಸಂಸ್ಥೆಯಾಗಿದ್ದು, ಇದರ ವ್ಯವಸ್ಥಾಪನೆ ಹಾಗೂ ಕಾರ್ಯಕ್ರಮಗಳ ರೂಪುರೇಷೆಗಳನ್ನು ಆಡಳಿತ ಮಂಡಳಿ ಹಾಗೂ ಕಾರ್ಯ ನಿರ್ವಾಹಕ ಮಂಡಳಿಗಳ ಮೇಲುಸ್ತುವಾರಿಯಲ್ಲಿ ನಿರ್ವಹಿಸಲಾಗುತ್ತದೆ. ಸಂಸ್ಥೆಯಲ್ಲಿ ಪ್ರಮುಖವಾಗಿ ಐದು ವಿಭಾಗಗಳಲ್ಲಿ ಕ್ರಿಯಾಯೋಜನೆಯನ್ನು ರೂಪಿಸಿ ಶಾಲಾ ನಾಯಕತ್ವ ತರಬೇತಿ, ಸಂಶೋಧನೆ ಮತ್ತು ನಾವಿನ್ಯತಾ ಉಪಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ತಾತ್ವಿಕ ಹಿನ್ನೆಲೆ ಹಾಗೂ ಕಾರ್ಯವ್ಯಾಪ್ತಿ:**

- ಶೈಕ್ಷಣಿಕ ಆಡಳಿತವನ್ನು ವಿಕೇಂದ್ರೀಕರಿಸುವುದು.
- ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಯ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆ.
- ದೇಶದ ಅಭಿವೃದ್ಧಿ ಹಾಗೂ ಅಗತ್ಯತೆಗಳಿಗನುಸಾರವಾಗಿ ಶೈಕ್ಷಣಿಕ ದೃಷ್ಟಿಕೋನವನ್ನು ರೂಪಿಸುವುದು ಮತ್ತು ದೀರ್ಘಕಾಲಿಕ ಶೈಕ್ಷಣಿಕ ಯೋಜನೆಗಳನ್ನು ಸಿದ್ಧಪಡಿಸುವುದು.
- ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ನಡುವೆ ಸಂಪರ್ಕ ಸಾಧಿಸುವುದು.
- ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಆಡಳಿತಗಾರರಲ್ಲಿ ನಾಯಕತ್ವ ಕೌಶಲ್ಯ ಮತ್ತು ನಿರ್ವಹಣಾ ಸಾಮರ್ಥ್ಯಗಳನ್ನು ಬೆಳೆಸುವುದು

ಮೇಲ್ಕಂಡ ಕಾರ್ಯಗಳನ್ನು ನಿರ್ವಹಣೆ ಮಾಡಲು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು 'ಶೈಕ್ಷಣಿಕ ಆಡಳಿತಗಾರರ ಸಾಮರ್ಥ್ಯ ಅಭಿವೃದ್ಧಿ ಸಂಸ್ಥೆ' (SIEMAT) ಯನ್ನು ಸ್ಥಾಪಿಸಲು ತೊಂಭತ್ತರ ದಶಕದಲ್ಲಿ ನಿರ್ಧರಿಸಿತು. ಆರಂಭದಲ್ಲಿ 'ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ' (ಡಿ.ಪಿ.ಇ.ಪಿ) ಇದ್ದ ರಾಜ್ಯಗಳಿಗೆ ಮಾತ್ರ ಸೀಮಿತವಾಗಿದ್ದ SIEMAT ಗಳನ್ನು 2001–02 ರಲ್ಲಿ ಸರ್ವ ಶಿಕ್ಷಣ ಅಭಿಯಾನದ ವ್ಯಾಪ್ತಿಗೆ ತಂದು ದೇಶದ ಎಲ್ಲ ರಾಜ್ಯಗಳಲ್ಲಿ ಸ್ಥಾಪನೆ ಮಾಡಲು ನಿರ್ದೇಶಿಸಲಾಯಿತು.

ಕರ್ನಾಟಕ ರಾಜ್ಯವು ತನ್ನ ಅನುಭವಗಳು, ಕಲಿಕೆಗಳು ಹಾಗು ಅಧ್ಯಯನ ವರದಿಗಳ ಮೂಲಕ ಶೈಕ್ಷಣಿಕ ನಿರ್ವಹಣೆಯ ಅಗತ್ಯವನ್ನು ಕಂಡುಕೊಂಡಿತ್ತು. 2000ರಲ್ಲಿ ಮುಖ್ಯ ಮಂತ್ರಿಗಳ ಟಾಸ್ಕ್ ಫೋರ್ಸ್ ವರದಿ, 2000ರಲ್ಲಿ ಆಡಳಿತ ಸುಧಾರಣೆ ಆಯೋಗದ ವರದಿ, 2002ರಲ್ಲಿ ಶೈಕ್ಷಣಿಕ ದೃಷ್ಟಿಕೋನ ವರದಿಗಳು ಶೈಕ್ಷಣಿಕ ವಿಕೇಂದ್ರೀಕರಣ ಮತ್ತು ಅದಕ್ಕೆ ಬೇಕಾದ ಸಾಮರ್ಥ್ಯಾಭಿವೃದ್ಧಿಯ ಅಗತ್ಯಗಳನ್ನು ಸ್ಪಷ್ಟವಾಗಿ ಗುರುತಿಸಿದವು. ಅಷ್ಟೇ ಅಲ್ಲ ಜಾಗತಿಕ ಮಟ್ಟದಲ್ಲಿ ಪ್ರಯೋಗಗಳ ಮೂಲಕ ಪರಿಣಾಮಕಾರಿ ಎಂದು ಸಾಬೀತಾಗಿದ್ದ 'ಸ್ವಯಂ ಆಡಳಿತ ಶಾಲೆ (Autonomous Schools)' ಗಳ ಪರಿಕಲ್ಪನೆಯನ್ನು ಈ ವರದಿಗಳು ಬೆಂಬಲಿಸಿದ್ದವು.

2003ರಲ್ಲಿ ಶೈಕ್ಷಣಿಕ ಉತ್ಕೃಷ್ಟತೆ ಸಾಧಿಸಲು ನೀತಿ ನಿರೂಪಣೆಗೆ ಬೆಂಬಲ ಒದಗಿಸುವುದಕ್ಕೆ ಸಂಬಂಧಿಸಿದಂತೆ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡ ರಾಜ್ಯ ಸರಕಾರ, ಶಿಕ್ಷಣ ಇಲಾಖೆಯಲ್ಲಿ ಪಾಲಿಸಿ ಪ್ಲ್ಯಾನಿಂಗ್ ಘಟಕವನ್ನು ಸ್ಥಾಪಿಸಿತು. ಶೈಕ್ಷಣಿಕ ನಾಯಕತ್ವ ಮತ್ತು ನಿರ್ವಹಣೆ, ಅಭಿವೃದ್ಧಿ ಯೋಜನೆಗಳನ್ನು, ಶಿಕ್ಷಣ ವ್ಯವಸ್ಥೆಯಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಹೆಚ್ಚಿಸುವಂತಹ ಕಾರ್ಯಕ್ರಮಗಳನ್ನು, ಇಲಾಖಾ ಯೋಜನೆಯ ಪರಿಣಾಮಗಳನ್ನು ಕುರಿತು ಅಧ್ಯಯನಗಳನ್ನು ಹಮ್ಮಿಕೊಂಡಿತು. ಶೈಕ್ಷಣಿಕ ವಿಕೇಂದ್ರೀಕರಣಕ್ಕೆ ಪೂರಕವಾದ ಶಿಫಾರಸ್ಸುಗಳನ್ನು ಮಾಡಿತು. 2008 ರಲ್ಲಿ ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ 2010ರಲ್ಲಿ ' ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ' (**SISLEP**) ಯನ್ನು ಸ್ಥಾಪಿಸಲಾಯಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿಯಲ್ಲಿ ಈ ಸಂಸ್ಥೆಯು ನೋಂದಾಯಿಸಲ್ಪಟ್ಟಿದ್ದು, ತದನಂತರದಲ್ಲಿ NIEPA / NCSL ನವದೆಹಲಿಯಿಂದ 2017–18 ರಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ 'ಶಾಲಾ ನಾಯಕತ್ವ ಅಕಾಡಮಿ' (SLA) ಯನ್ನು ಸ್ಥಾಪಿಸಲಾಗಿದೆ. ಈ ಅಕಾಡಮಿಯು ಉತ್ತಮ ಶೈಕ್ಷಣಿಕ ಅಭ್ಯಾಸಗಳ ವಿಡಿಯೋ ಹಾಗೂ ಯಶೋಗಾಥೆಗಳ ದಾಖಲೀಕರಣ, ಮಾಡ್ಯೂಲ್‌ಗಳ ರಚನೆ ಮತ್ತು ಭಾಷಾಂತರ, ಶೈಕ್ಷಣಿಕ ಮೇಲ್ವಿಚಾರಕರಿಗೆ ಶಾಲಾ ನಾಯಕತ್ವದ ಕುರಿತು ವೆಬಿನಾರ್/ಕಾರ್ಯಾಗಾರಗಳ ಆಯೋಜನೆ ಮುಂತಾದ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ.

❖ **ಸಂಸ್ಥೆಯ ಗುರಿ ಮತ್ತು ಉದ್ದೇಶಗಳು:**

ಶಿಕ್ಷಣದ ನಿರ್ವಹಣೆಯನ್ನು ಸರ್ಕಾರದ ನಿಯಂತ್ರಣದಿಂದ ನಿಧಾನವಾಗಿ ಮತ್ತು ಸ್ಥಿರವಾಗಿ ಸಮರ್ಥ ಸಮುದಾಯಕ್ಕೆ ವರ್ಗಾಯಿಸುವುದು ಸಿಸ್ಲೆಪ್ ಸಂಸ್ಥೆಯ ಪ್ರಮುಖ ಗುರಿಯಾಗಿದೆ. ಈ ಗುರಿಯ ಸಾಧನೆಗೆ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ಭಾಗೀದಾರರ ದೃಷ್ಟಿಕೋನ ಮತ್ತು ಮನೋಭಾವದಲ್ಲಿ ಬದಲಾವಣೆ ಅತ್ಯಗತ್ಯ. ಇದಕ್ಕಾಗಿ ಶಾಲಾ ಹಂತದಿಂದ ರಾಜ್ಯ ಹಂತದವರೆಗಿನ ಮೇಲುಸ್ತುವಾರಿ ಅಧಿಕಾರಿಗಳಿಗೆ, ಸಮುದಾಯದ ನಾಯಕರುಗಳಿಗೆ ಸಾಮರ್ಥ್ಯಾಧಾರಿತ ತರಬೇತಿ ನೀಡುವುದು, NIEPA, NCSL, NCERT, DSERT ಮುಂತಾದ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವುದು, ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಉತ್ತಮ ಅಭ್ಯಾಸಗಳನ್ನು ದಾಖಲೀಕರಿಸುವುದು ಸಂಸ್ಥೆಯ ಜವಾಬ್ದಾರಿಗಳಾಗಿವೆ.

- **ಶಿಕ್ಷಣ ನೀತಿ:** ಸಂಶೋಧನೆಗಳ ಫಲಿತಾಂಶವನ್ನು ಆಧರಿಸಿ ಶಿಕ್ಷಣ ನೀತಿ ರೂಪಿಸಲು ಹಾಗೂ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆ ಮಾಡಲು ರಾಜ್ಯ ಸರ್ಕಾರಕ್ಕೆ ಪರಿಣಿತರ ನೆರವು ನೀಡುವುದು.

- **ಸಾಂಸ್ಥಿಕ ವಿನ್ಯಾಸ ಮತ್ತು ಶೈಕ್ಷಣಿಕ ಪ್ರಕ್ರಿಯೆ:** ಈಗಿರುವ ಶೈಕ್ಷಣಿಕ ವ್ಯವಸ್ಥೆ ಮತ್ತು ಪ್ರಕ್ರಿಯೆಗಳನ್ನು ಅಧ್ಯಯನ ಮಾಡಿ, ಶಿಕ್ಷಣದ ಉದ್ದೇಶದ ಈಡೇರಿಕೆಗೆ ಇವುಗಳಲ್ಲಿ ಅಗತ್ಯ ಬದಲಾವಣೆಗಳನ್ನು ಸೂಚಿಸುವುದು.

**ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಪ್ರಕ್ರಿಯೆಗಳು:** ಶಾಲೆಯಿಂದ ರಾಜ್ಯ ಮಟ್ಟದವರೆಗೆ ಶಿಕ್ಷಣ ವ್ಯವಸ್ಥೆಯಲ್ಲಿರುವ ಎಲ್ಲಾ ಭಾಗೀದಾರರಿಗೂ ನಾಯಕತ್ವ, ನಿರ್ವಹಣೆ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಎಸ್.ಡಿ.ಎಂ.ಸಿ. ಸದಸ್ಯರು, ಗ್ರಾಮ ಪಂಚಾಯತಿ ಸದಸ್ಯರು ಮತ್ತು ಸಮುದಾಯದ ಇತರರಿಗೆ ಯೋಜನೆ, ಸಹಭಾಗಿತ್ವ ಪ್ರಕ್ರಿಯೆ, ಶಾಲಾಭಿವೃದ್ಧಿ ಯೋಜನೆ ಮೊದಲಾದ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಶೈಕ್ಷಣಿಕ ನಿರ್ವಾಹಕರಲ್ಲಿ ಸೇವಾ ಮನೋಭಾವ, ಉತ್ತಮ ಆಡಳಿತ, ಪಾರದರ್ಶಕತೆ ಹಾಗೂ ಹೊಣೆಗಾರಿಕೆ ಮೂಡಿಸಲು ಸೂಕ್ತವಾದ ವಿಧಾನಗಳನ್ನು ಶಿಫಾರಸ್ಸು ಮಾಡುವುದು. ಶೈಕ್ಷಣಿಕ ಯೋಜನೆಗಳ ವೆಚ್ಚ ನಿಗದಿಪಡಿಸುವುದು, ಸಂಪನ್ಮೂಲ ಕ್ರೋಢೀಕರಣ ಮತ್ತು ಬಳಕೆಗೆ ಸಂಬಂಧಿಸಿದಂತೆ ಮಾರ್ಗದರ್ಶನ ಮಾಡುವುದು.

- **ಸಂಶೋಧನೆ ಮತ್ತು ಮೌಲ್ಯಮಾಪನ:** ಶೈಕ್ಷಣಿಕ ನಿರ್ವಹಣಾ ಕ್ಷೇತ್ರವು ನಿರಂತರ ಅಧ್ಯಯನ ಬಯಸುವುದರಿಂದ ಸಂಶೋಧನೆಯು ಸಿಸ್ಲೆಪ್‌ನ ಪ್ರಾಥಮಿಕ ಕಾರ್ಯಗಳಲ್ಲಿ ಒಂದು. ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿಭಿನ್ನ ಕಾರ್ಯಕ್ರಮಗಳೂ ಸೇರಿದಂತೆ ಇಲಾಖೆಯ ಬೇರೆ ಬೇರೆ ಕ್ಷೇತ್ರಗಳನ್ನು ಕುರಿತು ಸಂಶೋಧನೆ ಕೈಗೊಳ್ಳುವುದು ಮತ್ತು ಮೌಲ್ಯಮಾಪನ ಮಾಡುವುದು ಸಿಸ್ಲೆಪ್‌ನ ಪ್ರಮುಖ ಉದ್ದೇಶವಾಗಿದೆ.

- **ಶಿಕ್ಷಣದ ಗುಣಮಟ್ಟ:** ಶಿಕ್ಷಣ ಇಲಾಖೆಯು ತನ್ನ ಎಲ್ಲ ಕಾರ್ಯಕ್ರಮಗಳ ಮೂಲಕ ಗುಣಾತ್ಮಕ ಶಿಕ್ಷಣ ಮತ್ತು ಗುಣಾತ್ಮಕ ಆಡಳಿತ ನೀಡಲು ಗಮನಹರಿಸಬೇಕು. ಗುಣಮಟ್ಟ ಸುಧಾರಣೆಗೆ ಅಗತ್ಯವಾದ ಸಂಶೋಧನೆಗಳು ಮತ್ತು ತರಬೇತಿಗಳನ್ನು ಸಿಸ್ಲೆಪ್ ಹಮ್ಮಿಕೊಳ್ಳುತ್ತದೆ. ಶೈಕ್ಷಣಿಕ ವರದಿಗಳನ್ನು ಆಧರಿಸಿ ಪ್ರಚಲಿತ ಶೈಕ್ಷಣಿಕ ಸೂಚ್ಯಯಾಂಕಗಳನ್ನು ವಿಶ್ಲೇಷಿಸುವ ಕೌಶಲ್ಯ ಹಾಗೂ ಸಾಮರ್ಥ್ಯವನ್ನು ಮೇಲ್ವಿಚಾರಕ ಅಧಿಕಾರಿಗಳಲ್ಲಿ ಅಭಿವೃದ್ಧಿಪಡಿಸುವುದು. ಗುಣಾತ್ಮಕ ಶಿಕ್ಷಣದ ಸಾಧನೆಗೆ ಕ್ಷೇತ್ರ ಮಟ್ಟದಲ್ಲಿ ಸೂಕ್ತ ಹೊಳಹುಗಳನ್ನು ಸೃಷ್ಟಿಸುವುದು ಈ ಸಂಸ್ಥೆಯ ಪ್ರಮುಖ ಕಾರ್ಯವಾಗಿದೆ.

❖ **ಧಾರವಾಡದಲ್ಲಿ ಸಂಸ್ಥೆಯ ಸ್ಥಾಪನೆಯ ಹಿನ್ನೆಲೆ:**

ಶೈಕ್ಷಣಿಕ ವಿಕೇಂದ್ರೀಕರಣದ ಆಶಯಕ್ಕೆ ಪೂರಕವಾಗಿ ಹಾಗೂ ರಾಜ್ಯ ಮಟ್ಟದ ಸಂಸ್ಥೆಯೊಂದು ರಾಜಧಾನಿ ಕೇಂದ್ರದಿಂದ ಹೊರಗಡೆ ಬೆಳೆದು ಬರುವುದರಿಂದ ರಾಜ್ಯದ ಎಲ್ಲ ಭಾಗಗಳ ಶೈಕ್ಷಣಿಕ ಭಾಗೀದಾರರ ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತದೆಯೆಂಬ ಆಶಯದಿಂದ 'ಸಿಸ್ಲೆಪ್' ಸಂಸ್ಥೆಯನ್ನು ಶೈಕ್ಷಣಿಕ ಕೇಂದ್ರವಾಗಿರುವ ಧಾರವಾಡದಲ್ಲಿ ಸ್ಥಾಪಿಸಲಾಗಿದೆ. ಇದಕ್ಕಾಗಿ ಧಾರವಾಡದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಆವರಣದಲ್ಲಿ ನಿರ್ಮಾಣವಾದ ಸಂಸ್ಥೆಯ ಸ್ವಂತ ಕಟ್ಟಡದಲ್ಲಿ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ.

**ಸಿಸ್ಲೆಪ್ ಸಂಸ್ಥೆಯ ಪ್ರಮುಖ ತರಬೇತಿ ಕಾರ್ಯಕ್ರಮಗಳು:**

ಶಾಲಾ ಮುಖ್ಯಸ್ಥರಲ್ಲಿ ನಾಯಕತ್ವದ ಗುಣಗಳನ್ನು ಅಭಿವೃದ್ಧಿ ಪಡಿಸಲು ಸಿಸ್ಲೆಪ್ ಸಂಸ್ಥೆಯಲ್ಲಿ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳ ಬಲವರ್ಧನೆಗೆ ಪೂರಕವಾದ ತರಬೇತಿಗಳನ್ನು ಹಮ್ಮಿಕೊಳ್ಳಲು 2010–11 ರಿಂದ 2022–23 ರ ವರೆಗೆ ರಾಜ್ಯದ ಉಪನಿರ್ದೇಶಕರ ಕಛೇರಿಯ ವಿಷಯ ಪರಿವೀಕ್ಷಕರಿಗೆ, ಡಯಟ್ ಉಪನ್ಯಾಸಕರಿಗೆ ಹಾಗೂ ಬಿ.ಆರ್.ಪಿ, ಶಿಕ್ಷಣ ಸಂಯೋಜಕರು, ಸಿ.ಆರ್.ಪಿ. ಗಳಿಗಾಗಿ ಶೈಕ್ಷಣಿಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ಆಯೋಜಿಸಲಾಗುತ್ತಿದೆ ಸರಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರಿಗೆ, ಬಿ.ಆರ್.ಸಿ. ಸಮನ್ವಯಾಧಿಕಾರಿಗಳು ಹಾಗೂ ಇತರ 'ಬಿ' ವೃಂದದ ಅಧಿಕಾರಿಗಳಿಗೆ ಶೈಕ್ಷಣಿಕ ನಾಯಕತ್ವ ಅಭಿವೃದ್ಧಿ ತರಬೇತಿ, ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕರಿಗೆ ಶಾಲಾ ನಾಯಕತ್ವ ಅಭಿವೃದ್ಧಿ ತರಬೇತಿ (ಎಸ್.ಎಲ್.ಡಿ.ಪಿ), ಸಹನಿರ್ದೇಶಕರು ಮತ್ತು ತತ್ಸಮಾನ ವೃಂದ ಹಾಗೂ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ತರಬೇತಿ, 'ಅಧಿಕಾರದಿಂದ ಉತ್ತರದಾಯಿತ್ವದೆಡೆಗೆ ತರಬೇತಿ, ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಬೋಧಕೇತರ ವೃಂದದ ವ್ಯವಸ್ಥಾಪಕರಿಗೆ ಆಡಳಿತಾತ್ಮಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿ' ಎಲ್ಲ ಮೇಲ್ವಿಚಾರಕ ಅಧಿಕಾರಿಗಳಿಗೆ ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ– 2009ರ ಅಡಿಯಲ್ಲಿ ಗುಣಾತ್ಮಕ ಶಿಕ್ಷಣದ ಸೂಚ್ಯಾಂಕಗಳ ಬಗ್ಗೆ ಒತ್ತು ನೀಡಿ ಪರಿಣಾಮಕಾರಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ತರಬೇತಿ ಕಾರ್ಯಕ್ರಮಗಳಿಗೆ ಅವಶ್ಯಕವಿರುವ ವಿಷಯಗಳಲ್ಲಿ ನುರಿತ ತಜ್ಞರಿಂದ ಹಾಗೂ ಕ್ಷೇತ್ರ ಮಟ್ಟದ ಪ್ರಯೋಗಶೀಲ ಪರಿಣಿತರಿಂದ ತರಬೇತಿ ವಿನ್ಯಾಸ (Training Modules) ಗಳನ್ನು ರಚಿಸಲಾಗಿದೆ.

ಪ್ರಸ್ತುತ ಸಾಲಿನಲ್ಲಿ 'ವಿದ್ಯಾರ್ಥಿಗಳೊಂದಿಗೆ ಆಪ್ತಸಮಾಲೋಚನೆ ಹಾಗೂ ಮಾನಸಿಕ ಆರೋಗ್ಯದ ಉಪಕ್ರಮಗಳು', 'ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ನಾವೀನ್ಯತಾ ಉಪಕ್ರಮಗಳು ಗುಣಾತ್ಮಕ ಶಿಕ್ಷಣದಲ್ಲಿ ಭಾಗೀದಾರರ ಪಾತ್ರ, ಮನೋವೈಜ್ಞಾನಿಕ, ವೈಚಾರಿಕ ದೃಷ್ಟಿಕೋನದ ಅಭಿವೃದ್ಧಿ' ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗಾಗಿ, 'ಬಹುತ್ವದ

ಭಾರತ ಮತ್ತು ವ್ಯಕ್ತಿಘನತೆ', 'ಗ್ರಂಥಾಲಯ ಬಳಕೆ ಮತ್ತು ನಿರ್ವಹಣೆ', 'ಮಕ್ಕಳ ಹಕ್ಕುಗಳ ಸಂರಕ್ಷಣೆ ಮತ್ತು ಪ್ರಚಲಿತ ಕಾನೂನುಗಳು', 'ಮಕ್ಕಳ ಸುರಕ್ಷತೆಯ ವಿನೂತನ ಮಾರ್ಗೋಪಾಯಗಳು', 'ಭಾಷಾವನ' (Language Garden) ಮತ್ತು ಭಾಷಾ ಕೌಶಲ್ಯಗಳ ಅಭಿವೃದ್ಧಿ, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಶಾಲಾ ಮುಖ್ಯಸ್ಥರ ಪಾತ್ರ,

ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣ ಮತ್ತು ಸೌಲಭ್ಯಗಳ ನಿರ್ವಹಣೆ', ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶಗಳ ವಿಶ್ಲೇಷಣೆ' 'ಶಾಲೆಯಿಂದ ಹೊರಗುಳಿದ ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಕರೆತರಲು ಅನುಸರಿಸಬಹುದಾದ ಮಾರ್ಗೋಪಾಯಗಳು', 'ಶಿಕ್ಷಣದಲ್ಲಿ ರಂಗಕಲೆ' ಈ ಕುರಿತಾದ ತರಬೇತಿ ವಿನ್ಯಾಸಗಳನ್ನು ಅವಶ್ಯಕತೆಗಳಿಗನುಸಾರವಾಗಿ ಹೊಸದಾಗಿ ರೂಪಿಸಲಾಗಿದೆ.

ಗುಣಾತ್ಮಕ ಶಿಕ್ಷಣದ ಸಾಧನೆಯ ಹಿನ್ನೆಲೆಯಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ ಶಿಕ್ಷಣ ಇಲಾಖೆಯ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳಿಗೆ ಐದು ದಿನಗಳ **ಆಡಳಿತಾತ್ಮಕ ತರಬೇತಿ** ಹಾಗೂ ಮೂರು ದಿನಗಳ **ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿ** ತರಬೇತಿಗಳನ್ನು ನಡೆಸಲಾಗುತ್ತಿದ್ದು, ಈ ತರಬೇತಿಗಳಲ್ಲಿ 'ಶಾಲಾ ನಾಯಕತ್ವದ ಹೊಸ ಸವಾಲುಗಳು ಮತ್ತು ವಿನೂತನ ಆಚರಣೆಗಳು', ಕಛೇರಿ ಕಾರ್ಯವಿಧಾನ, ಸಂವಹನ ಕೌಶಲ್ಯಗಳು, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು–2021, ಕರ್ನಾಟಕ ನಾಗರೀಕ ಸೇವಾ ನಿಯಮಗಳು.–1957, ಮಾಹಿತಿ ಹಕ್ಕು ಅಧಿನಿಯಮ–2005, ಕೆ ಸಿ ಎಸ್ ಆರ್ ನಿಯಮಗಳು, ರಜಾ ನಿಯಮಗಳು / ಸೇವಾ ಪುಸ್ತಕ ನಿರ್ವಹಣೆ , ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ, ಖಜಾನೆ–2, ಹಣಕಾಸು ನಿರ್ವಹಣೆ. ವಿವಿಧ ಬಿಲ್ಲುಗಳ ತಯಾರಿ, ಕೆ ಟಿ ಪಿ ಪಿ ಕಾಯ್ದೆ 1999/2000, ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಶಿಕ್ಷಣ ಸೌಲಭ್ಯಗಳು ಹಾಗೂ ಪ್ರಚಲಿತ ಕಾನೂನುಗಳು, ಎಸ್.ಎ.ಟಿ.ಎಸ್. (Student Achievement Tracking System) ಮುಂತಾದ ವಿಷಯಾಂಶಗಳ ಕುರಿತಾಗಿ ತರಬೇತಿಯನ್ನು ನೀಡಲಾಗುತ್ತಿದೆ.

ಪ್ರಸ್ತುತ ಸಿಸ್ಲೆಪ್ ಸಂಸ್ಥೆಯಲ್ಲಿ 8206 ಹಾಗೂ ಕ್ಯಾಸ್ಕೇಡ್ ವಿಧಾನದಲ್ಲಿ ಡಯಟ್ ಹಂತದಲ್ಲಿ 9500 ವಿವಿಧ ಸ್ತರದ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗಿದೆ. ಅವಶ್ಯಕತೆಗಳಿಗನುಗುಣವಾಗಿ ಇನ್ನಷ್ಟು ತರಬೆತಿ ವಿನ್ಯಾಸಗಳನ್ನು ರಚಿಸಲು ಹಾಗೂ ತರಬೇತಿಗಳನ್ನು ಆಯೋಜಿಸುವಲ್ಲಿ ಸಂಸ್ಥೆಯು ನಿರಂತರ ಕ್ರಿಯಾಶೀಲವಾಗಿದೆ. ಆ ಮೂಲಕ ಕರ್ನಾಟಕ ರಾಜ್ಯದ ಶಾಲೆಗಳಲ್ಲಿ ದಾಖಲಾಗುವ ಅರ್ಹ ವಯೋಮಾನದ ಎಲ್ಲ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಖಾತರಿಪಡಿಸಲು ಆಶಿಸಲಾಗಿದೆ. ಶಾಲಾ ಶಿಕ್ಷಣ ಇಲಾಖೆಯಲ್ಲಿ ಐವತ್ತು ಸಾವಿರ ಪ್ರಾಥಮಿಕ ಶಾಲೆಗಳು ಹಾಗೂ ಇಪ್ಪತ್ತೈದು ಸಾವಿರಕ್ಕಿಂದ ಹೆಚ್ಚು ಪ್ರೌಢಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ಸಂಸ್ಥೆಗಳ ಮುಖ್ಯಸ್ಥರುಗಳು ಅತ್ಯುತ್ತಮ ಮೇಲ್ವಿಚಾರಕ ಕೌಶಲಗಳನ್ನು ಹಾಗೂ ಉತ್ತಮ ನಾಯಕತ್ವ ಗುಣಗಳನ್ನು ಹೊಂದಿರಬೇಕಾಗುತ್ತದೆ. ಇಷ್ಟು ಬೃಹತ್ ಸಂಖ್ಯೆಯ ಮೇಲ್ವಿಚಾರಕ ಅಧಿಕಾರಿಗಳ ಸಾಮರ್ಥ್ಯಾಭಿವೃದ್ಧಿಯ ಸಂಕಲ್ಪದೊಂದಿಗೆ ಈ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ. ಈ ಭಾಗದಲ್ಲಿ ಒಂದು ಅತ್ಯುತ್ತಮ ಶಾಲಾ ನಾಯಕತ್ವ ಹಾಗೂ ನಿರ್ವಹಣಾ ಸಂಸ್ಥೆಯು ಅಭಿವೃದ್ಧಿ ಹೊಂದುತ್ತಿರುವುದು ಒಂದು ಆಶಾದಾಯಕ ವಿಷಯವಾಗಿದೆ. ಆ ಮೂಲಕ ಗುಣಾತ್ಮಕ ಶಿಕ್ಷಣದ ಗುರಿ ಸಾಧನೆಗೈದು ಸಾಂವಿಧಾನಿಕ ಆಶಯಗಳನ್ನು ಇಡೇರಿಸುವ ಪ್ರಯತ್ನಕ್ಕೆ ಇಂಬು ದೊರೆತಿದೆ. ಪ್ರಸ್ತುತ ಈ ಸಂಸ್ಥೆಯಲ್ಲಿ ಯೋಜನೆ ಮತ್ತು ನೀತಿ ನಿರೂಪಣೆ ವಿಭಾಗ, ಶಾಲಾ ನಿರ್ವಹಣಾ ವಿಭಾಗ, ಶೈಕ್ಷಣಿಕ ಹಣಕಾಸು ವಿಭಾಗ, ಸಂಶೋಧನೆ, ಮೌಲ್ಯಾಂಕನ ಮತ್ತು ಶೈಕ್ಷಣಿಕ ನಾವೀನ್ಯತಾ ವಿಭಾಗ, ಶೈಕ್ಷಣಿಕ ದತ್ತಾಂಶ ಮತ್ತು ಮಾಹಿತಿ ನಿರ್ವಹಣಾ ವಿಭಾಗಗಳಿವೆ. ಶಾಲೆಗಳ

ತರಗತಿ ಕೋಣೆಗಳಲ್ಲಿ ದೇಶದ ಭವಿಷ್ಯವು ನಿರ್ಮಾಣವಾಗುತ್ತದೆ ಎಂಬ ಆಶಯಕ್ಕೆ ಪೂರಕವಾಗಿ ಹಾಗೂ ದೇಶಕ್ಕೆ ಬೇಕಾದ ಅತ್ಯುತ್ತಮ ನಾಗರಿಕರನ್ನು ನಿರ್ಮಾಣ ಮಾಡುವ ಮಹತ್ಕಾರ್ಯದಲ್ಲಿ ರಾಜ್ಯದ ಎಲ್ಲ ಹಂತದ ಜನಪ್ರತಿನಿಧಿಗಳು, ಶಿಕ್ಷಣ ತಜ್ಞರು, ಸಾಹಿತಿಗಳು, ಶಿಕ್ಷಣ ಪ್ರೇಮಿಗಳು, ಮತ್ತು ಉದ್ಯಮಗಳ ನೇತಾರರು ಈ ಸಂಸ್ಥೆಯ ಪ್ರಯತ್ನಗಳಲ್ಲಿ ಪಾಲುದಾರಿಕೆ ವಹಿಸಿ ಸಹಕಾರ ನೀಡುತ್ತಾರೆಂದು ಆಶಿಸಲಾಗಿದೆ.

**"ಬಿಂಕಕ್ಕೆ ಡೊಳ್ಳಿವುದು ವಿದ್ಯೆಯೇ?,**
**ಅವಿದ್ಯೆ ತವಿಪುದಾವುದೋ ಅಹಂಕಾರಮಂ ಅದು ವಿದ್ಯೆ.**
**ಮಿಕ್ಕುದೆಲ್ಲಂ ಅವಿದ್ಯೆ"**
**-- ರಾಷ್ಟ್ರಕವಿ ಕುವೆಂಪು.**

## ಪರಿವಿಡಿ

| ಕ್ರ.ಸಂ | ವಿವರ | | | ಪುಟ ಸಂ |
|---|---|---|---|---|
| 1 | ಸುರಕ್ಷತಾ ಗೀತೆ | | | 1 |
| 2 | ಪ್ರತಿಜ್ಞಾ ವಿಧಿ | | | 2 |
| 3 | ಸಂಪನ್ಮೂಲ ಸಾಹಿತ್ಯ ಹಾಗೂ ಅರ್ಥ ವಿವರಣೆ | | | 3 |
| 4 | ತರಬೇತಿ ಮಾಡ್ಯೂಲ್ ನ ಉದ್ದೇಶಗಳು | | | 4 |
| 5 | ಅಧ್ಯಾಯ-1 | | ಮಕ್ಕಳು ಎಂದರೆ ಯಾರು ? | 5-8 |
| | | 1.1 | ಮಕ್ಕಳ ವಿಕಾಸ ಹಾಗೂ ಬೆಳವಣಿಗೆ | |
| | ಅಧ್ಯಾಯ-2 | | ಮಕ್ಕಳ ಸುರಕ್ಷತೆ ಎಂದರೇನು ? | 9-11 |
| | | 2.1 | ಮಕ್ಕಳ ಸುರಕ್ಷತೆಯ ಅರ್ಥ ವ್ಯಾಪ್ತಿ | |
| | | 2.2 | ಮಕ್ಕಳ ಸುರಕ್ಷತೆಯ ಕೆಲವು ಕ್ಷೇತ್ರಗಳು | |
| | ಅಧ್ಯಾಯ-3 | | ಮಕ್ಕಳ ಸುರಕ್ಷತಾ ಸಮಿತಿಗಳು ಮತ್ತು ಕಾನೂನುಗಳು | 12-17 |
| | | 3.1 | ಪೀಠಿಕೆ | |
| | | 3.2 | ಮಕ್ಕಳಿಗೆ ಇರುವ ಕಾನೂನಾತ್ಮಕ ಸೌಲಭ್ಯಗಳು | |
| | | 3.3 | ಮಕ್ಕಳ ಹಕ್ಕು ಒಡಂಬಡಿಕೆಯ ಅರ್ಥ ಹಾಗೂ ಪ್ರಮುಖ ಅಂಶಗಳು | |
| | | 3.4 | ಮಕ್ಕಳ ದಿನಾಚರಣೆ | |
| | ಅಧ್ಯಾಯ-4 | | ಮಕ್ಕಳ ಸುರಕ್ಷತೆಯ ವಿಧಗಳು | 18-20 |
| | | 4.1 | ಶಾಲೆ ಸಮುದಾಯಗಳಲ್ಲಿ ಮಕ್ಕಳ ಸುರಕ್ಷತೆ | |
| | | 4.2 | ಪರಿಚಿತರಿಂದ ಮತ್ತು ಅಪರಿಚಿತರಿಂದ ಅಪಾಯ | |
| | | 4.3 | ಮನೋದೈಹಿಕ ಸುರಕ್ಷತೆ | |
| | ಅಧ್ಯಾಯ-5 | | ಮಕ್ಕಳ ಸುರಕ್ಷತೆ ಎಲ್ಲಿ ? | 21-28 |
| | | 5.1 | ಅಗ್ನಿ ಅವಗಡಗಳು | |
| | | 5.2 | ಸುರಕ್ಷಿತ ಶಾಲಾ ಕಟ್ಟಡ | |
| | | 5.3 | ಸುರಕ್ಷಿತ ಶಾಲಾ ವಾಹನ | |
| | | 5.4 | ರಸ್ತೆ ಸುರಕ್ಷತೆ | |
| | | 5.5 | ಮಳೆಗಾಲದಲ್ಲಿ ಮಕ್ಕಳ ಸುರಕ್ಷತೆ | |
| | | 5.6 | ಸುರಕ್ಷಿತ ಶಾಲಾ ಪ್ರವಾಸ | |
| | | 5.7 | ವಿದ್ಯುತ್ ಸುರಕ್ಷತೆ | |
| | ಅಧ್ಯಾಯ-6 | | ಸುಸ್ಥಿರ ಆರೋಗ್ಯ | 29-32 |
| | | 6.1 | ಸ್ವಚ್ಛ ಗಾಳಿ | |
| | | 6.2 | ಪೌಷ್ಠಿಕ ಹಾರ | |
| | | 6.3 | ಶುಚಿತ್ವ | |
| | | 6.4 | ವ್ಯಾಯಾಮ ಮತ್ತು ಯೋಗ | |
| | | 6.5 | ಸರಿಯಾದ ಶಾರೀರಿಕ ಭಂಗಿ | |
| | ಅಧ್ಯಾಯ-7 | | ಸಂತುಲಿತ ಆಹಾರ | 33-34 |
| | | 7.1 | ಆರೋಗ್ಯಕರ ಆಹಾರ | |
| | | 7.2 | ಅನಾರೋಗ್ಯಕರ ಆಹಾರ | |
| | ಅಧ್ಯಾಯ-8 | | ಅಂತರ್ಜಾಲ | 35-39 |
| | | 8.1. | ಸೈಬರ್ ಬುಲ್ಲಿಂಗ್ | |
| | | 8.2 | ದೈಹಿಕ ಆರೋಗ್ಯದ ಮೇಲೆ ಪರಿಣಾಮ | |
| | | 8.3 | ಆರಂಭಿಕ ಲೈಂಗಿಕತೆ | |

| | | | | |
|---|---|---|---|---|
| | | 8.4 | ಪರಭಕ್ಷಕರು | |
| | | 8.5 | ಆನ್ ಲೈನ್ ವಂಚನೆಗಳು | |
| | | 8.6 | ಮಕ್ಕಳು ಮತ್ತು ಮಾದ್ಯಮದ ಬಳಕೆ | |
| | | 8.7 | ವಿಡಿಯೋ ಗೇಮ್ ಗಳ ಋಣಾತ್ಮಕ ಪರಿಣಾಮಗಳು | |
| | ಅಧ್ಯಾಯ-9 | | ಮೂಢನಂಬಿಕೆಗಳು | 40-42 |
| | | 9.1 | ನಂಬಿಕೆಗಳು ಮತ್ತು ಮೂಢನಂಬಿಕೆಗಳು | |
| | | 9.2 | ಮೂಢನಂಬಿಕೆ ವಿರೋಧಿ ಕಾನೂನುಗಳು | |
| | ಅಧ್ಯಾಯ-10 | | ಸ್ವ ರಕ್ಷಣಾ ತಂತ್ರಗಳು | 43-44 |
| | ಅಧ್ಯಾಯ-11 | | ಮಕ್ಕಳ ಸುರಕ್ಷತಾ ಪರಿಕರಗಳು | 45-47 |
| | ಅಧ್ಯಾಯ-12 | | ಘೋಷವಾಕ್ಯಗಳು | 48 |
| | | | ತರಬೇತಿ ಪ್ರಕ್ರಿಯೆ | 49 |
| | | | ತರಬೇತಿ ವೇಳಾಪಟ್ಟಿ | 50 |
| | | | ಆಕರ ಗ್ರಂಥಗಳು | |

# ಸುರಕ್ಷತಾ ಗೀತೆ

ನಾವು ನಾವಾಗಿರಲು ಬಿಡಿ
ಯಾಕೆಂದರೆ, ನಾವು ಎಳೆಯರು ..

ನಮಗೂ ಕೊಡಿ ನಿಮ್ಮ ಸಮಯ
ಸ್ನೇಹ ಪ್ರೀತಿ ತುಂಬಿದ ಒಲುಮೆಯ
ನಿಮ್ಮ ಒತ್ತಡಗಳಿಗೆ ನಮ್ಮ ನೂಕದಿರಿ
ನಮ್ಮ ಬಾಲ್ಯವ ನಮಗೆ ಕೊಟ್ಟು ಬಿಡಿ
ಯಾಕೆಂದರೆ, ನಾವು ಎಳೆಯರು ..

ನಮ್ಮ ಭಾವನೆಗಳಿಗೂ ಬೆಲೆ ಕೊಡಿರಿ
ನಿಮ್ಮ ಆಸೆಗಳಿಗೆ ಬಲಿ ತೆಗೆದುಕೊಳ್ಳದಿರಿ
ತೋಟದಲ್ಲಿರುವ ಮೊಗ್ಗುಗಳು ನಾವು
ಬಿರಿವ ಮುನ್ನ ಹಿಸುಕದಿರಿ
ಯಾಕೆಂದರೆ, ನಾವು ಎಳೆಯರು ..

ಹಾರಾಡುವ ಹಕ್ಕಿಗಳು ನಾವು
ರೆಕ್ಕೆ ಕತ್ತರಿಸುವುದ ಬಿಟ್ಟುಬಿಡಿ
ನಿಮ್ಮ ಹಾರಾಟಕ್ಕೆ ಏಣಿಯನುಮಾಡಿ
ಮನಬಂದಂತೆ ಏರಿಳಿಯಬೇಡಿರಿ
ಯಾಕೆಂದರೆ, ನಾವು ಎಳೆಯರು ..

ಅರಿವೇ ಇಲ್ಲದ ವಯಸ್ಸಿನಲ್ಲಿ
ಪರಿಪರಿಯಾಗಿ ಪೀಡಿಸದಿರಿ
ಬದುಕಲು ಬಿಡಿ ಸರಳತೆಯಲ್ಲಿ
ದೊಡ್ಡಸ್ತಿಕೆಯನೆಂದೂ ಹೇರದಿರಿ
ಯಾಕೆಂದರೆ, ನಾವು ಎಳೆಯರು ..

ಭಾವೀ ಭವಿಷ್ಯದ ನಾಯಕರು ನಾವು
ಚಿಗುರೊಡೆವ ಮುಂಚೆ ಚಿವುಟದಿರಿ
ಉತ್ತಮ ಸಂಸ್ಕಾರ ನೀಡುತಲಿ
ಬೆಂಗಾವಲಾಗಿ ನಮ್ಮನು ರಕ್ಷಿಸಿರಿ
ಯಾಕೆಂದರೆ, ನಾವು ಎಳೆಯರು ..

ಅವರ ಮಕ್ಕಳು ಇವರ ಮಕ್ಕಳು
ಎಂದೆನ್ನುತ ನಿಷ್ಕಾಳಜಿಯ ಮಾಡದಿರಿ
ಎಲ್ಲ ಮಕ್ಕಳೂ ನಮ್ಮವರೇ ಎನ್ನುತ
ಕಾಳಜಿಯ ನೀವು ಮಾಡಿರಿ
ಇದೇ ನಮ್ಮಯ ಕೋರಿಕೆ ನಿಮ್ಮಲಿ
ಯಾಕೆಂದರೆ, ನಾವು ಎಳೆಯರು
ನೀವು ಹಿರಿಯರು.........

ರಚನೆ: ಶ್ರೀಮತಿ, ಜ್ಯೋತಿ ಕೋಟಗಿ
ಬಿ.ಆರ್.ಪಿ ಚ.ಕಿತ್ತೂರ

# ಪ್ರತಿಜ್ಞೆ

ನಾನು .........ಮನೆಯಲ್ಲಿ,

ಸಮುದಾಯದಲ್ಲಿ ಮತ್ತು ಇತರೆ ಸ್ಥಳಗಳಲ್ಲಿ

ಮಕ್ಕಳನ್ನು ಹಾನಿಕಾರಕ ವಸ್ತುಗಳಿಂದ,

ಅಪರಿಚಿತ ವ್ಯಕ್ತಿಗಳಿಂದ

ಹಾಗೂ ಅಪಘಾತಗಳಿಂದ

ದೂರವಿರುವಂತೆ ನೋಡಿಕೊಳ್ಳುತ್ತೇನೆ.

ಮತ್ತು ಯಾರಿಗೂ ದೈಹಿಕ ಮತ್ತು ಮಾನಸಿಕ

ಹಿಂಸೆ ನೀಡುವುದಿಲ್ಲ.

ಮಗುವಿಗೆ ಅಪಾಯದ ಸಂದರ್ಭಗಳು

ಎದುರಾದಾಗ ಪರಿಸ್ಥಿತಿಯನ್ನು

ಎದುರಿಸಲು ಮಾರ್ಗದರ್ಶನ ನೀಡುತ್ತೇನೆ.

ಮಗುವಿಗೆ ದೈಹಿಕ,ಮಾನಸಿಕ ಮತ್ತು

ಭಾವನಾತ್ಮಕ ರಕ್ಷಣೆಯು

ಎಲ್ಲ ಪರಿಸರದಲ್ಲಿ

ದೊರೆಯುವಂತೆ

ನೋಡಿಕೊಳ್ಳುತ್ತೇನೆ.

# ಸಾಹಿತ್ಯ ಕುರಿತು.

"ಆಡಿ ಬಾ ಎನ ಕಂದ ಅಂಗಾಲ ತೊಳೆದೇನ, ತೆಂಗಿನಕಾಯಿ ತಿಳಿನೀರ ತಕ್ಕೊಂಡು ಬಂಗಾರದ ಮಾರಿ ತೊಳದೇನ" ಎನ್ನುವ ಮಗುವಿನ ಜೋಗುಳದ ಹಾಡಿನಲ್ಲಿ ವಿವರಿಸಿದಂತೆ ಮಗು ಹೊರಗಡೆ ಮಣ್ಣಿನಲ್ಲಿ ಆಡಿ ಬಂದಾಗ ತಾಯಿ ತನ್ನ ಮಗು ಸುರಕ್ಷಿತವಾಗಿ ಇರಬೇಕು.ಅದಕ್ಕೆ ಯಾವುದೇ ಅಪಾಯ ಆಗಬಾರದು ಎಂದು ತೆಂಗಿನಕಾಯಿ ತಿಳಿನೀರಿನಿಂದ ಅದರ ಮುಖವನ್ನು ತೊಳೆಯುತ್ತಾಳೆ.

ಈ ಹಾಡಿನ ತಾತ್ಪರ್ಯ ಕೂಡಾ ಮಗುವಿನ ಸುರಕ್ಷತೆಯಾಗಿದೆ ಮಕ್ಕಳ ಸುರಕ್ಷತೆ ಎನ್ನುವುದು ಕೇವಲ ಬಾಹ್ಯವಾಗಿ ಇರುವ ವಿಚಾರವಾಗಿರದೇ ಅದು ಮಗುವಿನ ಆಂತರಿಕ ಸುರಕ್ಷತೆಗೆ ಒತ್ತು ನೀಡುವುದಾಗಿದೆ. ಮಕ್ಕಳು ನಿತ್ಯ ಜೀವನದಲ್ಲಿ ಬೆಳೆಯುತ್ತಾ.ಆಡುತ್ತಾ ನಲಿಯುತ್ತಾ, ಸಂಸ್ಕಾರವನ್ನು ಕಲಿಯುತ್ತಾ, ಜ್ಞಾನವನ್ನು ಪಡೆಯುತ್ತಾ, ಹಂಚುತ್ತಾ ಭವ್ಯ ಭಾರತದ ಪ್ರಜೆಗಳಾಗಿ ರೂಪುಗೊಳ್ಳುತ್ತಾರೆ.

ಇಂತಹ ಮಕ್ಕಳನ್ನು ಸುರಕ್ಷಿತವಾಗಿ ರೂಪುಗೊಳಿಸುವಲ್ಲಿ ಸಮಾಜ, ಸಮುದಾಯ, ಶಾಲೆ, ಮನೆ, ವಾತಾವರಣ, ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮಕ್ಕಳನ್ನು ಸುರಕ್ಷಿತವಾಗಿ ಬೆಳೆಸುವ ಜವಾಬ್ದಾರಿಯನ್ನು ಈ ಮೇಲಿನೆ ಎಲ್ಲವನ್ನವೂ ಮಾಡುವುದು ಪ್ರಮುಖವಾದ ಕರ್ತವ್ಯವಾಗಿದೆ. ಇತ್ತೀಚಿನ ದಿನದಲ್ಲಿ ಮಕ್ಕಳ ಸುರಕ್ಷತೆಯ ಸಲುವಾಗಿ ಸರ್ಕಾರ, ಸರ್ಕಾರದ ವಿವಿಧ ಇಲಾಖೆಗಳು ವಿವಿಧ ಸಂಘ ಸಂಸ್ಥೆಗಳು ತಮ್ಮ ಕರ್ತವ್ಯವನ್ನು ಪಾಲಿಸುತ್ತಿವೆ. ಆದಾಗ್ಯೂ ಕೂಡಾ ಮಕ್ಕಳ ಸುರಕ್ಷತೆಯ ಮಿತಿಯನ್ನು ಮೀರಿ ಅಸುರಕ್ಷಿತ ಸನ್ನಿವೇಶದಲ್ಲಿ ಮಕ್ಕಳ ಬೆಳವಣಿಗೆ ಆಗುತ್ತಿರುವುದು ವಿಷಾದನೀಯ ಸಂಗತಿಯಾಗಿದೆ.

ಸಮಾಜದ ವಿವಿಧ ಸ್ಥರಗಳ ಸನ್ನಿವೇಶದಲ್ಲಿ ಮಕ್ಕಳು ಬೆಳವಣಿಗೆಯಾಗುತ್ತಾರೆ.ಇಂತಹ ಸನ್ನಿವೇಶದಲ್ಲಿ ಕೆಲವು ಮಕ್ಕಳು ಎಲ್ಲ ಅನುಕೂಲವನ್ನು ಪಡೆದುಕೊಂಡು ಬೆಳೆಯುತ್ತಾರೆ.ಕೆಲವು ಮಕ್ಕಳು ಸೀಮಿತ ಅನುಕೂಲವನ್ನು ಪಡೆದುಕೊಂಡು ಬೆಳೆಯುತ್ತಾರೆ.ಇನ್ನೂ ಕೆಲವು ಮಕ್ಕಳು ಯಾವುದೇ ಅನುಕೂಲವನ್ನು ಪಡೆಯದೇ ಬೆಳೆಯುತ್ತಾರೆ. ಆದ್ದರಿಂದ ಈ ವಿವಿಧ ಸ್ಥರದ ಮಕ್ಕಳು ಸುರಕ್ಷತೆಯಿಂದ ಬೆಳವಣಿಗೆಯಾಗುವುದು ಕೂಡಾ ಸಮಾಜದ ಅತ್ಯಂತ ಮಹತ್ವದ ಅಂಶವಾಗಿದೆ.

ಈ ಒಂದು ದೃಷ್ಠಿಕೋನದಲ್ಲಿ ವಿಚಾರ ಮಾಡಿದಾಗ ಸರ್ಕಾರ ಈಗಾಗಲೇ "ಮಕ್ಕಳ ರಕ್ಷಣಾ ನೀತಿ" **2016** ರನ್ನು ಜಾರಿಗೆ ತಂದಿದೆ.ಇದರಲ್ಲಿ ಮಕ್ಕಳ ಸುರಕ್ಷತೆ ಸಲುವಾಗಿ ವಿವಿಧ ಹಂತದಲ್ಲಿ ಯಾರು, ಯಾವ ಜವಾಬ್ದಾರಿಗಳನ್ನು ನಿರ್ವಹಣೆ ಮಾಡಬೇಕು? ಎಂಬುವದನ್ನು ವಿವರಣೆ ನೀಡಿದೆ.ಮತ್ತು ಮಕ್ಕಳ ಸುರಕ್ಷತೆಯಲ್ಲಿ ಪ್ರಮುಖ ಪಾತ್ರ ವಹಿಸುವಂತಹ ಶಿಕ್ಷಣ ಸಂಸ್ಥೆಗಳಿಗೆ ಮಾರ್ಗಸೂಚಿಗಳನ್ನು ಮತ್ತು ವಿಧಾನಗಳನ್ನು ವಿವರಿಸಿದೆ.

ಇವೆಲ್ಲದರ ಜೊತೆಗೆ ಈ ಮಾಡ್ಯೂಲಿನಲ್ಲಿ ಮಕ್ಕಳ ಸುರಕ್ಷತೆ ಸಲುವಾಗಿ ವಿನೂತನ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕಾಗಿದ್ದು, ಈ ವಿಷಯದಲ್ಲಿ ಮಕ್ಕಳ ಸುರಕ್ಷತೆಯ ಸಲುವಾಗಿ ವಿವಿಧ ರೀತಿಯ ಅಂಶಗಳನ್ನು ವಿನೂತನವಾಗಿ ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ.

ಈ ಮಾಡ್ಯೂಲ್ ನಲ್ಲಿ ಮಕ್ಕಳ ಸುರಕ್ಷತಾ ಸಮಿತಿ, ಮಕ್ಕಳ ಸುರಕ್ಷತೆ ಏಕೆ ಬೇಕು ? ಮಕ್ಕಳ ಸುರಕ್ಷತೆ ಸಂಬಂಧಿಸಿದ ಕಾನೂನುಗಳು, ಮಕ್ಕಳ ಸುರಕ್ಷತೆಯ ವಿಧಗಳ ಬಗ್ಗೆ ಚರ್ಚಿಸಲಾಗಿದೆ.ಶಾಲೆ, ಸಮುದಾಯ, ಸಮಾಜ, ಮನೆ, ವಾತಾವರಣಗಳಲ್ಲಿ ಮಕ್ಕಳ ಸುರಕ್ಷತೆಯ ಕ್ರಮಗಳ ಬಗ್ಗೆ ತಿಳಿಸಲಾಗಿದೆ.

ಮಕ್ಕಳ ಸ್ವರಕ್ಷಣಾ ತಂತ್ರಗಳು, ಮಕ್ಕಳ ಸುರಕ್ಷತಾ ಪ್ರತಿಜ್ಞೆ, ಸುರಕ್ಷತಾ ಘೋಷ ವಾಕ್ಯಗಳ ಬಗ್ಗೆ ತಿಳಿಸಲಾಗಿದೆ ಮತ್ತು ಸುರಕ್ಷತೆ ಮತ್ತು ಅಸುರಕ್ಷತೆಯ ಪರಿಕರಗಳ ಪ್ರಥಮ ಚಿಕಿತ್ಸೆ ,ಅಗ್ನಿನಂದಕ, ಸಲಹಾ ಪಟ್ಟಿಗೆಗಳೊಂದಿಗೆ ಮಕ್ಕಳ ಸುರಕ್ಷತೆಯ ಕ್ರಮಗಳ ಬಗ್ಗೆ ಚರ್ಚಿಸಲಾಗಿದೆ.

ಈ ಎಲ್ಲ ವಿಷಯಗಳೊಂದಿಗೆ ಅನೇಕ ಸಾಮಾನ್ಯ ಸನ್ನಿವೇಶಗಳಲ್ಲಿ ಮಕ್ಕಳ ಸುರಕ್ಷತೆಯ ಕ್ರಮಗಳ ಬಗ್ಗೆ ಚರ್ಚಿಸಲಾಗಿದೆ.

"ಒಟ್ಟಿನಲ್ಲಿ ಮಗು, ಸುರಕ್ಷತೆಯ ಹಾದಿಯಲ್ಲಿ ಸಾಗಿ ಭವ್ಯಭಾರತದ ಪ್ರಜೆಯಾಗಿ ನಿರ್ಮಾಣ ಆಗಲು ಇರುವಂತಹ ಸುರಕ್ಷತೆಯ ವಿನೂತನ ಮಾರ್ಗೋಪಾಯಗಳ ಬಗ್ಗೆ ಬೆಳಕನ್ನು ಈ ಮಾಡ್ಯೂಲನಲ್ಲಿ ಕಂಡುಕೊಳ್ಳಲಾಗಿದೆ.

## ಮಾಡ್ಯೂಲನ ಅರ್ಥ ವಿವರಣೆ

"ಇಂದಿನ ಮಕ್ಕಳೇ ನಾಗರೀಕರು" ಭವ್ಯ ಭಾರತದ ಉತ್ತಮ ಸುರಕ್ಷಿತ ನಾಗರೀಕರಾಗಿ ರೂಪುಗೊಳ್ಳುವಲ್ಲಿ ಮಕ್ಕಳನ್ನು ಸುರಕ್ಷಿತವಾಗಿ ಬೆಳೆಸುವ ಕಾರ್ಯವನ್ನು ಮಾಡುವಂತಹ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ. ಮಕ್ಕಳನ್ನು ವೈಯಕ್ತಿಕವಾಗಿ, ಸಾಮಾಜಿಕವಾಗಿ, ಕಾನೂನುಬದ್ಧವಾಗಿ ಶಾಲೆ ಸಮುದಾಯ, ಸಮಾಜದ ವಾತಾವರಣಗಳಲ್ಲಿ ಸುರಕ್ಷಿತವಾಗಿ ಬೆಳೆಸುವ ಸಲುವಾಗಿ ಸುರಕ್ಷತೆಯ ವಿವಿಧ ಆಯಾಮಗಳನ್ನು ಕಂಡುಕೊಳ್ಳುವ ಕಾರ್ಯವನ್ನು ಈ ಮಾಡ್ಯೂಲನಲ್ಲಿ ಮಾಡಲಾಗಿದೆ.

ಮಕ್ಕಳ ಸುರಕ್ಷತೆ ಎಂದರೆ ಕೇವಲ ಬಾಹ್ಯವಾಗಿರದೇ ಅದು ಅವರ ಆಂತರಿಕ ವಿಚಾರವಾಗಿದೆ ಎಂಬುವುದನ್ನು ಇದರಲ್ಲಿ ವಿವರಿಸಲಾಗಿದೆ.ಇಂದಿನ ಮಕ್ಕಳು ನಾಳಿನ ಭಾರತವನ್ನು ನಿರ್ಮಿಸುತ್ತಾರೆ, ನಾವು ಮಕ್ಕಳನ್ನು ಬೆಳೆಸುವ ವಿಧಾನ ನಮ್ಮ ದೇಶದ ಭವಿಷ್ಯವನ್ನು ನಿರ್ಧರಿಸುತ್ತದೆ.ಮಕ್ಕಳನ್ನು ಬೆಳೆಸುವುದರೊಂದಿಗೆ ಅವರನ್ನುಸುರಕ್ಷತವಾಗಿ ಇಡುವುದು ನಮ್ಮೆಲ್ಲರ ಜವಾಬ್ದಾರಿ .

ಈ ಮಾಡ್ಯೂಲ್ ನಲ್ಲಿ ಮಕ್ಕಳ ಸುರಕ್ಷತೆಯ ಬಗ್ಗೆ ಚಟುವಟಿಕೆ ಮುಖಾಂತರ ಜವಾಬ್ದಾರಿಗಳ ಅರಿವು ಮೂಡಿಸಲಾಗಿದೆ.

## ತರಬೇತಿ ಮಾಡ್ಯೂಲನ ಉದ್ದೇಶಗಳು

- ಮಕ್ಕಳ ಬೆಳವಣಿಗೆಯ ಹಂತಗಳಿಗೆ ಅನುಗುಣವಾಗಿ ಸುರಕ್ಷತೆಯ ಅವಶ್ಯಕತೆಯನ್ನುಅರಿಯುವುದು
- ಶಾಲೆ, ಸಮುದಾಯ ಮತ್ತು ಸಾಮಾಜಿಕ ಹಾಗೂ ಕೌಟುಂಬಿಕ ವಾತಾವರಣದಲ್ಲಿ ಮಗುವಿನ ಸುರಕ್ಷತಾಕ್ರಮಗಳನ್ನು ಅರಿಯುವುದು.
- ಮಕ್ಕಳ ಸುರಕ್ಷತೆಗೆ ರಚನೆಯಾಗಿರುವ ಸಮಿತಿ, ಕಾನೂನು ಹಾಗೂ ವಿದಿಗಳನ್ನು ಅರಿತು ವಿನೂತನ ಸುರಕ್ಷತಾಕ್ರಮಗಳನ್ನು ಅನುಸರಿಸುವುದು.
- ರಸ್ತೆಯ ಸುರಕ್ಷತೆ, ಆಹಾರ ಮತ್ತು ಪೋಷಕಾಂಶಗಳು ,ಮೂಢನಂಬಿಕೆ ಮತ್ತು ಆಚರಣೆಗಳ ಕುರಿತು ಅರಿವು ಮೂಡಿಸುವುದು.
- ಸಮೂಹ ಮಾಧ್ಯಮ ಮತ್ತು ಸೈಬರ ಸುರಕ್ಷತಾ ಕ್ರಮಗಳನ್ನು ಅರಿಯುವುದು.
- ಮಕ್ಕಳ ಸುರಕ್ಷತೆ ಮತ್ತು ಸ್ವರಕ್ಷಣಾ ತಂತ್ರಗಳನ್ನು ಅನ್ವಯಿಸುವಲ್ಲಿ ಭಾಗೀದಾರರ ಜವಾಬ್ದಾರಿ ಅರಿಯುವುದು.

## ಅಧ್ಯಾಯ1

## ಮಕ್ಕಳು ಎಂದರೆ ಯಾರು?

" ಕೂಸು ಇದ್ದ ಮನೆಗೆ ಬೀಸಣಿಗೆ ಯಾತಕ
ಕೂಸು ಕಂದಯ್ಯ ಒಳಹೊರಗ ಆಡಿದರ
ಬೀಸಣಿಕೆ ಗಾಳಿ ಸುಳಿದಾವ"

ಮೇಲ್ಕಾಣಿಸಿದ ಮಾತುಗಳು ಮಕ್ಕಳ ಕುರಿತಾದ ಭಾವನೆಗಳನ್ನು ಹೊರಹೊಮ್ಮುವಂತೆ ಮಾಡುತ್ತವೆ ''ಮಕ್ಕಳು, ಎಂದಾಗ ನಮ್ಮ ಕಣ್ಣ ಮುಂದೆ ಬರುವ ಉತ್ತರ ಚಿಕ್ಕವರು/ಸಣ್ಣವರು ಎಂದು. ಇನ್ನೂ ಸ್ವಲ್ಪ ಯೋಚಿಸಿದಾಗ ಅವರು ಮುಗ್ಧರು, ಕುತೂಹಲಿಗಳು ಕ್ರಿಯಾಶೀಲರು, ಅವಲಂಬಿತರು ಹೀಗೆ–ವಿಭಿನ್ನ ರೀತಿಯ ಉತ್ತರಗಳನ್ನು ನೀಡಬಹುದು.

**ಚಟುವಟಿಕೆ:1.1**

ಶಿಬಿರಾರ್ಥಿಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಿ, ಕೆಳಗೆ ಸೂಚಿಸಿರುವ ಪ್ರಶ್ನೆಗಳನ್ನು ಅವರಿಗೆ ನೀಡಿ , ಅವರ ಉತ್ತರಗಳನ್ನು ಗುಂಪಿನಲ್ಲಿ ಚರ್ಚಿಸಿ ವಿಷಯ ಮಂಡಿಸಲು ಅವಕಾಶ ಕಲ್ಪಿಸುವುದು.

ಪ್ರಶ್ನೆಗಳು

1) ಮಕ್ಕಳು ಎಂದರೆ ಯಾರು?
2) ಮಕ್ಕಳ ಸಹಜ ಗುಣಗಳು ಯಾವವು ?.
3) ಮಕ್ಕಳನ್ನು ಅವರ ಬೆಳವಣಿಗೆ **ಮತ್ತು** ವಿಕಾಸದ ಅನುಸಾರ ಹೇಗೆ ವಿಂಗಡಿಸಬಹುದು?

**Letterwise definition of**
**'CHILDREN'**
**C-CuteandCourage**
**H-HappyandHonest**
**I-Intelligent**
**L-lovable**
**D-Development**
**R-ReallysweetandRapid**
**E-EnderingandEmotional**
**N-NiceandNaughty**

**ಮಕ್ಕಳು ಎಂದರೆ 6 ರಿಂದ 14 ವರ್ಷ ಹೆಚ್ಚೆಂದರೆ 16 ವರ್ಷದ ಒಳಗಿರುವವರು ಎಂದು ಅರ್ಥೈಸಲಾಗಿತ್ತು.ಆದರೆ ಇಂದಿನ ಈ ಯುಗದಲ್ಲಿ ವೈಜ್ಞಾನಿಕವಾಗಿ ಶೋಧಿಸಿ, ದೇಹರಚನೆಯ ಮತ್ತು ಬೆಳವಣಿಗೆಯ ಆಧಾರದಲ್ಲಿ ಒಂದು ನಿರ್ದಿಷ್ಟ ವಯಸ್ಸಿನವರನ್ನು ಮಕ್ಕಳು ಎಂದು ಗುರುತಿಸಲಾಗಿದೆ. ಮಗು ಎಲ್ಲಾ ಬೆಳವಣಿಗೆಯ ಹಂತಗಳನ್ನು ತಲುಪುವುದು ತನ್ನ 18ನೇ ವಯಸ್ಸಿಗೆ ಎಂಬುದನ್ನು ಮನಗಂಡು, ಮಕ್ಕಳು ಎಂದರೆ 18 ವರ್ಷದೊಳಗಿನವರು ಎಂಬ ವಿಶಾಲಾರ್ಥವನ್ನು ನೀಡಲಾಗಿದೆ.ಅಂತರಾಷ್ಟ್ರೀಯ ಕಾನೂನಿನ ಪ್ರಕಾರ – "ಮಗು ಅಥವಾ ಮಕ್ಕಳು ಎಂದರೆ 18 ವರ್ಷದೊಳಗಿನ ಎಲ್ಲಾ ಮಾನವಜೀವಿಗಳು ".ಇದು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಸಮಾವೇಶದಲ್ಲಿ ಅಂಗೀಕರಿಸಲ್ಪಟ್ಟ ವಿಧೇಯಕವಾಗಿದೆ.**

## ಮಕ್ಕಳ ಕುರಿತಾಗಿ ಜೈವಿಕ, ಕಾನೂನು ಮತ್ತು ಸಾಮಾಜಿಕ ವ್ಯಾಖ್ಯಾನಗಳು :-

* **ಜೈವಿಕ ವ್ಯಾಖ್ಯಾನ:-"ಜನನ ಮತ್ತು ತಾರುಣ್ಯಾವಸ್ಥೆ ನಡುವಿನ ವ್ಯಕ್ತಿಗಳೇ ಮಕ್ಕಳು".**
* **ಕಾನೂನು** ವ್ಯಾಖ್ಯಾನ: 18 **ವರ್ಷಕ್ಕಿಂತ ಕಡಿಮೆವಯಸ್ಸಿನ**ವರು **ಮಕ್ಕಳು.ಅಂದರೆ ಹುಟ್ಟಿನಿಂದ** 18**ವರ್ಷದೊಳ**ಗಿರುವವರು

**ಸಾಮಾಜಿಕ** ವ್ಯಾಖ್ಯಾನ: **ವಯಸ್ಸಿನಲ್ಲಿ ಚಿಕ್ಕವರು "ಕಡಿಮೆತಿಳುವಳಿಕೆಉಳ್ಳವರು '**

* **ಫಿಲಿಪ್ಏರಿಸ್‌ರವರ ಪ್ರಕಾರ- 'ಮಕ್ಕಳು ಎಂದರೆ ವಯಸ್ಕರ ಚಿಕ್ಕಪ್ರತಿರೂಪಗಳು "**

### 2.2. **ಮಕ್ಕಳ** ವಿಕಾಸ ಹಾಗೂ ಬೆಳವಣಿಗೆ

**ಒಬ್ಬ ವ್ಯಕ್ತಿಯು ತನ್ನ ಜೀವಿತಾವಧಿಯಲ್ಲಿ ಅನೇಕ ಹಂತಗಳನ್ನು ದಾಟಬೇಕಾಗುತ್ತದೆ.**
**ಪ್ರಸಿದ್ಧ ಮನೋವಿಜ್ಞಾನಿ ಎಲಿಜಬೆತ್ಹರ್ಲಾಕ್ರವರು ಸೂಚಿಸಿರುವ** 10 **ಹಂತಗಳನ್ನು ಸಾಮಾನ್ಯವಾಗಿ ಎಲ್ಲೆಡೆ ಒಪ್ಪಿಕೊಳ್ಳಲಾಗಿದೆ.*ಅದರಲ್ಲಿ 7 ಹಂತಗಳು ಮಕ್ಕಳಬೆಳವಣಿಗೆ** ಮತ್ತು **ವಿಕಾಸಕ್ಕೆಸಂಬಂಧಿಸಿವೆ.**

| ಹಂತಗಳಸಂಖ್ಯೆ | ವಿಕಾಸದಹಂತಗಳು | ವಯಸ್ಸು |
|---|---|---|
| 01 | ಪ್ರಸವಪೂರ್ವ | ಗರ್ಭಧಾರಣೆ ಯಿಂದ ಜನನದವರೆಗೆ |
| 02 | ಶೈಶವ | ಜನನದಿಂದ 2 ವಾರಗಳವರೆಗೆ |
| 03 | ಹಸುಳೆತನ | 2ನೇ ವಾರದ ಕೊನೆಯಿಂದ 2 ವರ್ಷದವರೆಗೆ |
| 04 | ಪೂರ್ವಬಾಲ್ಯ | 2 ವರ್ಷದಿಂದ 6 ವರ್ಷದವರೆಗೆ |
| 05 | ಉತ್ತರಬಾಲ್ಯ | 6 ವರ್ಷದಿಂದ 12 ವರ್ಷಗಳವರೆಗೆ |
| 06 | ಲೈಂಗಿಕ ಪರಿಪಕ್ವತೆಯ ಕಾಲ | 12 ವರ್ಷದಿಂದ 13 ಅಥವಾ 14 ವರ್ಷಗಳವರೆಗೆ |
| 07 | ತಾರುಣ್ಯ | 13 ಅಥವಾ 14ವರ್ಷದಿಂದ 18ವರ್ಷಗಳವರೆಗೆ |

**ಮಕ್ಕಳ ಬೆಳವಣಿಗೆ ಹಂತಗಳು ಮತ್ತು ಅದಕ್ಕೆ ಸಂಬಂಧಿಸಿದ ಮನೋಧರ್ಮಗಳು:**



**ಮಗು ಹುಟ್ಟಿನಿಂದ ಹದಿಹರೆಯದ ವಯಸ್ಸನ್ನು ಮುಟ್ಟುವವರೆಗೆ ವಿವಿಧ ಮನೋಧರ್ಮಗಳ ಘಟ್ಟಗಳನ್ನು ದಾಟಬೇಕಾಗುತ್ತದೆ. ಪ್ರತಿಯೊಂದು ಘಟ್ಟದಲ್ಲಿ ಅದು ಪಡೆದುಕೊಂಡ ಅನುಭವದ ಆಧಾರದ ಮೇಲೆ ಮುಂದಿನ ಘಟ್ಟದ ಸ್ವರೂಪ ರೂಪುಗೊಳ್ಳುತ್ತದೆ. ಆದ್ದರಿಂದ ಪ್ರತಿಘಟ್ಟದಲ್ಲಿ ಅದು ಪಡೆದ ಅನುಭವಗಳು ಮುಂದಿನ ಘಟ್ಟದ ಅವಿಭಾಜ್ಯ ಅಂಗವಾಗಿ ಬೆರೆತು ಹೋಗಿವೆ. ಹೀಗೆ ಬೆಳವಣಿಗೆಯ ವಿವಿಧ ಹಂತಗಳು ಒಂದಕ್ಕೊಂದುಅನ್ಯೋನ್ಯಸಂಬಂಧಹೊಂದಿದ್ದುಪರಸ್ಪರ ಪ್ರಭಾವ ಬೀರುತ್ತವೆ.**

1) **ಹುಟ್ಟಿನಿಂದ ಒಂದು ವರ್ಷದವರೆಗೆ:**

ಈವಯೋಮಾನದ ಹಸುಗೂಸು ಮಾತನಾಡುವುದಿಲ್ಲ. ಆದ್ದರಿಂದ ಮಗುವಿಗೆ ಏನೂ ತಿಳಿಯುವುದಿಲ್ಲವೆಂದು ತನ್ನ ಅನುಭವಗಳನ್ನು ಗುರುತಿಸಲಾರದೆಂದು ಭಾವಿಸುತ್ತೇವೆ.ಆದರೆ ಈ ವಯಸ್ಸಿನಲ್ಲಿ ಮಗು ಹಸಿದಾಗಲೆಲ್ಲ ತಾಯಿಯು ಹಾಲು ಕುಡಿಸಿದರೆ, ಅದು ಗಲೀಜು ಮಾಡಿಕೊಂಡು ಅತ್ತಾಗಲೆಲ್ಲಾ ತಾಯಿ ತಕ್ಷಣ ಬಟ್ಟೆ ಬದಲಾಯಿಸಿದರೆ ಮಗು ಈ ಪ್ರಪಂಚದ ಬಗ್ಗೆ ನಂಬಿಕೆ ಗಳಿಸಿಕೊಳ್ಳುತ್ತದೆ.

- **ತಾಯಿಯು** ಮಗು ಅತ್ತಾಗ ಬರದೇ ಇದ್ದರೆ ಅಥವಾ ಒಂದೊಂದು ಸಲ ಒಂದೊಂದು ರೀತಿ ವರ್ತಿಸಿದರೆ ಮಗುವಿನಲ್ಲಿ ಅನಿಶ್ಚಿತ ಭಾವನೆ ಮೂಡಿ ಈ ಪ್ರಪಂಚವು ನಂಬಲು ಅನರ್ಹವಾದದ್ದು ಎಂದು ಭಾವಿಸಿ ಅಪನಂಬಿಕೆ ಬೆಳಸಿಕೊಳ್ಳುತ್ತದೆ

## 2) ಒಂದು ವರ್ಷದಿಂದ ಮೂರು ವರ್ಷದವರೆಗೆ

ಈ ಹಂತದಲ್ಲಿ ಮಗು ಸ್ವಾಯುತ್ತತೆ ಪಡೆಯುತ್ತಿರುತ್ತದೆ. ಅದಕ್ಕೆ ಯಾರಾದರೂ ತನ್ನನ್ನು ಎತ್ತಿಕೊಂಡರೆ ಇಷ್ಟವಾಗುವುದಿಲ್ಲ .ತನ್ನ ಕೆಲಸ ತಾನೇ ಮಾಡಲು ಮುಕ್ತ ಅವಕಾಶ ದೊರೆತಾಗ ಮಗುವಿನ ಆತ್ಮಗೌರವದ ಬೆಳವಣಿಗೆ ಆರಂಭವಾಗುತ್ತದೆ.

* ಮಗು ಮಾಡಿದ ಕೆಲಸ ಹೇಗೆ ಇರಲಿ ಹೊಗಳಬೇಕು .ಆಗ ಮಗುವಿಗೆ ನಾನು ಇದನ್ನು ಮಾಡಬಲ್ಲೆ ಎಂಬ ಅತ್ಮವಿಶ್ವಾಸ ಬೆಳೆಯುತ್ತದೆ.
* ಟಿವಿ ಸಿನಿಮಾಗಳಲ್ಲಿನ ಕ್ರೌರ್ಯದ ದೃಶ್ಯಗಳು ಮಗುವಿನ ಮನಸ್ಸಿನ ಮೇಲೆ ಅಭದ್ರತೆ ಮತ್ತು ಕೆಟ್ಟಪರಿಣಾಮ ಬೀರುತ್ತವೆ.
* ಈ ಹಂತದಲ್ಲಿ ಹೊಸ ಹೊಸ ಪ್ರಯತ್ನಗಳ ಜೊತೆ ಅನುಮಾನ ಮತ್ತು ಅಪನಂಬಿಕೆಗಂಳತಹ ಭಾವನೆಗಳು ಮೂಡುತ್ತದೆ.

## 3) ಮೂರ ರಿಂದ ಆರನೇ ವರ್ಷದವರೆಗೆ :

* ಮನೆಯಿಂದ ಶಾಲೆಯವರೆಗಿನ ಪ್ರಪಂಚದ ಪರಿಚಯವನ್ನು ಈ ಹಂತದಲ್ಲಿ ಮಕ್ಕಳು ಮಾಡಿಕೊಳ್ಳುತ್ತಾರೆ.
* ಅಲ್ಪಸ್ವಲ್ಪ ಸಾಹಸಪ್ರವೃತ್ತಿ ,ಕ್ರಿಯಾಶೀಲತೆ, ಅಪರಾಧಪ್ರಜ್ಞೆ ಇವರಲ್ಲಿ ಮೂಡಿರುತ್ತದೆ.
* ಲಿಂಗಬೇಧವನ್ನು ಗುರುತಿಸುವರು.
* ಪೋಷಕರಿಂದ ಭೌತಿಕ ಸ್ವಾತಂತ್ರ್ಯಗಳಿಸಲು ಹಂಬಲಿಸುತ್ತಾರೆ

## 4) ಆರ ರಿಂದ ಹನ್ನೆರಡನೇ ವಯಸ್ಸಿನವರೆಗೆ:

* ಮನೆಯ ವಾತಾವರಣದ ಜೊತೆಗೆ ಶಾಲೆ ಮತ್ತು ಸಹಪಾಠಿಗಳ ಜೊತೆಹೊಂದಾಣಿಕೆ ಮಾಡಿಕೊಳ್ಳುವರು.
* ದೃಡ ವ್ಯಕ್ತಿತ್ವವಿಲ್ಲದ ಮಕ್ಕಳು ತಮ್ಮ ಗೆಳೆಯರ ಸೆಳೆತಕ್ಕೆ ಸುಲಭವಾಗಿ ಬೀಳುತ್ತಾರೆ.
* ಉತ್ತಮ ವ್ಯಕ್ತಿಚಿತ್ರವುಳ್ಳ ಮಕ್ಕಳು ಬಹುಬೇಗ ಸರಿತಪ್ಪು ನಿಷ್ಕರ್ಷೆಮಾಡಿ ತಮ್ಮ ನೈಜಸ್ವಭಾವಕ್ಕೆ ಮರಳುತ್ತಾರೆ.
* ಮಗುವಿಗೆ ತನ್ನತನದಲ್ಲಿ ನಂಬಿಕೆ ಹೆಚ್ಚಿಸುವ ಉದಾರಣೆಗಳು ಪೋಷಕರಿಂದ ಅಧ್ಯಾಪಕರಿಂದ ದೊರೆಯಬೇಕು.

## 5) ಹದಿಹರೆಯದ ವಯಸ್ಸು:

* ದೈಹಿಕ ಮತ್ತು ಮಾನಸಿಕವಾಗಿ ಶೀಘ್ರವಾಗಿ ಬೆಳೆಯುತ್ತಾರೆ.
* ಭವಿಷ್ಯದಲ್ಲಿ ಏನಾಗಬೇಕು ಎಂಬ ಬಗ್ಗೆ ತಮ್ಮ ವೈಯಕ್ತಿಕ ವ್ಯಕ್ತಿತ್ವರೂಪಿಸುವಲ್ಲಿ ಮಗ್ನರಾಗಿರುತ್ತಾರೆ.
* ಈ ವಯಸ್ಸಿನ ಮಕ್ಕಳಿಗೆ ತಂದೆತಾಯಿಯರ, ಪೋಷಕರ ಮತ್ತು ಶಿಕ್ಷಕರ ಹೆಚ್ಚಿನ ನೆರವು ಅಗತ್ಯವಿದೆ.
* ಈ ಘಟ್ಟ ಮಗುವಿನ ಜೀವನದಲ್ಲಿ ಸಮಸ್ಯಾತ್ಮಕ ಘಟ್ಟವಾಗಿ ಪರಿಣಮಿಸಬಹುದು.

ಈ ರೀತಿಯಾಗಿ ಮಕ್ಕಳು ವಿವಿಧಹಂತಗಳಿಗೆ ಅನುಗುಣವಾಗಿ ವಿವಿಧ ರೀತಿಯ ಲಕ್ಷಣಗಳು ಮತ್ತು ಅನುಭವದೊಂದಿಗೆ ಬೆಳೆಯುತ್ತಾರೆ.

## ಶಿಬಿರಾರ್ಥಿಗಳಿಗೊಂದು ಚಟುವಟಿಕೆ: (Teacher as a parent)

**ಮಕ್ಕಳು ನಮ್ಮೆಲ್ಲ ಭಾವನೆಗಳನ್ನು ಮುಕ್ತವಾಗಿ ಸ್ವೀಕರಿಸುತ್ತಾರೆ .ಅದು ವಿವೇಕವೋ? ಅವಿವೇಕವೋ? ಯಾವುದಾಗಿದ್ದರೂ ದೊಡ್ಡವರು ತಮ್ಮ ಮನಸ್ಸಿನ ದುಗುಡ, ದುಮ್ಮಾನಗಳನ್ನು ಕೆಲವೊಮ್ಮೆ ಮಕ್ಕಳ ಮೇಲೆ ತಿರುಗಿಸಿಬಿಡುವುದುಂಟು.**

**ಉದಾ: ಯಜಮಾನರ ಕೋಪಕ್ಕೆ ಸುಲಭವಾಗಿ ತುತ್ತಾಗುವ ಬಾಲಕಾರ್ಮಿಕರು ಯಾವುದೇ ಪ್ರತಿರೋಧವಿಲ್ಲದೆ ಅಸಹಾಯಕರಾಗಿ ಎಲ್ಲವನ್ನು ಸ್ವೀಕರಿಸಬೇಕಾದ ಮಕ್ಕಳ ಮೇಲಂತೂ ಭಾವನಾತ್ಮಕ ಮತ್ತು ದೈಹಿಕದೌರ್ಜನ್ಯಗಳು ನಡೆದೇ ಇವೆ.**

**ಎಲ್ಲ ಶಿಬಿರಾರ್ಥಿಗಳಿಗೆ ಕೆಳಗೆ ಸೂಚಿಸಲಾದ ಅಂತರಾವಲೋಕನದ ತಪಶೀಲುಪಟ್ಟಿಯನ್ನು ನೀಡಿ ಅದಕ್ಕೆ ಹೌದು ಅಥವಾ ಇಲ್ಲ ಎಂಬ ಉತ್ತರ ಬರೆಯಲು ತಿಳಿಸುವುದು. ನಂತರ ಅವುಗಳನ್ನು ಒಂದೊಂದಾಗಿ ಚರ್ಚೆಮಾಡುವುದು.**

**"ಮೊದಲು ತಂದೆತಾಯಿಯರು ತಮ್ಮ ಮಗುವನ್ನು ಹೇಗೆ ನಡೆಸಿಕೊಳ್ಳುತ್ತಿದ್ದೇವೆ ಎಂದು ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಪ್ರಾಮಾಣಿಕವಾಗಿ ಉತ್ತರಿಸಿಕೊಳ್ಳಬೇಕು.**

**ಚಟುವಟಿಕೆ1.2**

| ಅಂತರಾವಲೋಕನ ಪ್ರಶ್ನೆಗಳು | | ಹೌದು | ಇಲ್ಲ |
|---|---|---|---|
| 1 | ನಾನು ಯಾವಾಗಲೂ ಮಕ್ಕಳೊಂದಿಗೆ ನಗುನಗುತ್ತಾ ಮಾತನಾಡುತ್ತೇನೆ. | | |
| 2 | ನಾನು ಯಾವಾಗಲೂ ಮಕ್ಕಳನ್ನು ಗೌರವದಿಂದ ಕಾಣುತ್ತೇನೆ. | | |
| 3 | ಮಕ್ಕಳ ಮಾತುಕೇಳಲು ದೂರದರ್ಶನ ನೋಡುವುದನ್ನು ಬಿಡುತ್ತೇನೆ. | | |
| 4 | ಮಕ್ಕಳು ಕೇಳುವ ಪ್ರಶ್ನೆಗಳಿಗೂ ಸಮಾಧಾನ ದಿಂದ ಉತ್ತರಿಸುತ್ತೇನೆ. | | |
| 5 | ಯಾವಾಗಲೂ ಮಕ್ಕಳ ಅಭಿಪ್ರಾಯವನ್ನು ಪ್ರೀತಿಯಿಂದ ಆಲಿಸಿದ್ದೇನೆ. | | |
| 6 | ಮಗುವಿನ ಭಾವನೆ ಮತ್ತು ಅಭಿಪ್ರಾಯಗಳನ್ನು ಯಾವಾಗಲೂ ಗೌರವಿಸಿದ್ದೇನೆ. | | |
| 7 | **ಶಾಲೆಯಲ್ಲಿ ಮಗುವಿಗೆ ಎದುರಾಗ ಬಹುದಾದ ಸಮಸ್ಯೆಗಳನ್ನು ಕೇಳಿ ತಿಳಿದುಕೊಂಡು ಶಾಲಾ ಅಧ್ಯಾಪಕರನ್ನು ಭೇಟಿ**ಮಾಡಿದ್ದೇನೆ. | | |
| 8 | **ಮಕ್ಕಳ ಇಷ್ಟ- ಕಷ್ಟಗಳಿಗೆ** ಸ್ಪಂದಿಸಿದ್ದೇನೆ. | | |
| 9 | **ಮಗುವಿನ ಸಾಧನೆಗಳನ್ನು ಮುಕ್ತಕಂಠದಿಂದ ಹೊಗಳಿದ್ದೇನೆ. ಮತ್ತು ಉತ್ತೇಜನ ನೀಡಿದ್ದೇನೆ** | | |
| 10 | **ಮಗುವಿನ ಸ್ವಾತಂತ್ರ್ಯವನ್ನು ಗೌರವಿಸಿದ್ದೇನೆ** | | |

**ನಾವೇನು ಮಾಡಬಹುದು – ಮಕ್ಕಳಿಗಾಗಿ ?**

**ಮಕ್ಕಳು ಮೂಲತಃ ಸಹಜವಾದ ವಿವೇಕವುಳ್ಳವರು. ಜೀವನಪ್ರೀತಿ, ಪರಿಶುದ್ಧತೆ, ಒಳ್ಳೆಯತನಗಳು ಅವರಿಗೆ ಹುಟ್ಟಿನಿಂದಲೇ ಬಂದಿರುತ್ತವೆ. ಅವರ ಈ ಸಹಜ ಅರಿವು ಮತ್ತು ಪ್ರೀತಿ ಮಸುಕಾಗದಂತೆ ಅದನ್ನು ಉಳಿಸಿ ಬೆಳೆಸುವುದು ಕರ್ತವ್ಯವಾಗಿದೆ.**

**ಕಸಿಯದಿರೋಣ ಮುಗ್ಧಮನದಲ್ಲಿ ಅರಳುತಿಹ ಬಾಲ್ಯದ ಕನಸುಗಳ...... ಬಿತ್ತೋಣ ಮಕ್ಕಳ ಮನದಂಗಳದಿ ಬದುಕಹಾದಿಗೆ ಬೆಳಕಾಗುವ ಸಂಸ್ಕೃತಿ** ಮತ್ತು **ಮೌಲ್ಯದ ಪಾಠಗಳ**................

# ಅಧ್ಯಾಯ 2: ಮಕ್ಕಳ ಸುರಕ್ಷತೆ (child safety)

'ಸುರಕ್ಷತೆ ಎಂದರೆ, ಸುರಕ್ಷಿತಸ್ಥಿತಿ ' ಅಂದರೆ ಯಾವುದೇ ಒಬ್ಬ ವ್ಯಕ್ತಿಯು ಯಾವುದೇ ಅಪಾಯಕಾರಿ ಸನ್ನಿವೇಶ ದಿಂದ ಹೊರಬರುವುದು ಅಂತ ಅರ್ಥ..  ಅಥವಾ ಸಾವು,  ಗಾಯ,  ಅನಾರೋಗ್ಯ,  ಹಾನಿ, ಅಪಹರಣ, ಆಸ್ತಿನಷ್ಟ ಅಥವಾ ಪರಿಸರಕ್ಕೆ ಹಾನಿ ಉಂಟುಮಾಡುವ ಪರಿಸ್ಥಿತಿಗಳಿಂದ ಸ್ವಾತಂತ್ರ್ಯವೇ ಸುರಕ್ಷತೆ..'   ಅಥವಾ ಜನರು ಮತ್ತು ಆಸ್ತಿಗೆ ಹಾನಿಯಾಗುವ ಅಪಾಯವನ್ನು ಕಡಿಮೆಮಾಡುವುದೆ ಸುರಕ್ಷತೆ.

SAFETY MEANS:-

- **S** - **Sensitivity to Operations**
- **A** - **Asking open questions**
- **F** - **Finding the best in others**
- **E** - **Entertaining doubt**
- **T** - **Thinking critically**
- **Y** - **Yeast in the dough**

**"ಸುರಕ್ಷತೆಯಿಂದಸರ್ವಸಂಪತ್ತು**

**1.2 ಮಕ್ಕಳಸುರಕ್ಷತೆ- Child safety:-Child Protection**










**"ಮಕ್ಕಳನ್ನುಯಾವುದೇ ರೀತಿಯ ದೈಹಿಕ ಮತ್ತು ಮಾನಸಿಕ ನಿರ್ಲಕ್ಷಕ್ಕೆ ಒಳಪಡಿಸದೇ ಹಿಂಸೆ, ಶೋಷಣೆ** ಮತ್ತು **ಅನಗತ್ಯವಾಗಿ ಕುಟುಂಬದಿಂದ ದೂರಮಾಡುವುದರಿಂದ ರಕ್ಷಿಸುವುದನ್ನು ಮಕ್ಕಳ ಸುರಕ್ಷತೆ ಎನ್ನುವರು.**

**ರಾಷ್ಟ್ರೀಯ ಸಮಗ್ರ ಮಕ್ಕಳ ಸಂರಕ್ಷಣಾ ಯೋಜನೆ ಮಾರ್ಗದರ್ಶಿಯ ಸೂಚನೆ :-**

**"ಮಕ್ಕಳು ಯಾವುದೇ ರೀತಿಯ ಅಪಾಯಕ್ಕೆ ಹೋಗದಂತೆ ಹಾಗೂ ಅಪಾಯಗಳಿಂದ ರಕ್ಷಿಸಿ ಅವರ ಬಾಲ್ಯವನ್ನು ಮತ್ತು ಹಕ್ಕುಗಳನ್ನು ಅನುಭವಿಸುವಂತೆ ಮಾಡಿ ಮಕ್ಕಳು ದುರ್ಬಲರಾಗುವುದನ್ನು**

ತಪ್ಪಿಸುವುದೇ ಮಕ್ಕಳ ಸುರಕ್ಷತೆ " ಅಥವಾ " ಮಕ್ಕಳಸುರಕ್ಷತೆಯು ಮಕ್ಕಳನ್ನು ಗಾಯ, ಅನಾರೋಗ್ಯ ಮತ್ತು ಅಪಾಯದಿಂದ ಸುರಕ್ಷಿತವಾಗಿರಿಸಲು ಬಳಸುವ ಯಾವುದಾದರೂ ಕ್ರಮ ಅಥವಾ ವಿಧಾನವೇ ಮಕ್ಕಳ ಸುರಕ್ಷತೆ."

**ಮಕ್ಕಳಸುರಕ್ಷತೆಯ ವಿವಿಧ ಅರ್ಥಗಳು :**

*ದುರುಪಯೋಗ ನಿಂದನೆ ಮತ್ತು ಶೋಷಣೆಯಿಂದ ಮಕ್ಕಳನ್ನು ರಕ್ಷಿಸುವುದು.
*ಮಕ್ಕಳ ಸುರಕ್ಷತೆಯು ಈ ಕ್ಷೇತ್ರಕ್ಕೆ ಸಂಬಂಧಿಸಿಲ್ಲ ಎನ್ನುವಂತಿಲ್ಲ ಏಕೆಂದರೆ ಇದು ಮಕ್ಕಳ ಯೋಗಕ್ಷೇಮಕ್ಕೆ ಸಂಬಂಧಿಸಿದ ಎಲ್ಲಾ ಕ್ಷೇತ್ರಗಳನ್ನು ಒಳಗೊಳ್ಳುವ ವಿಶಾಲಕ್ಷೇತ್ರವಾಗಿದೆ.
* ಮಕ್ಕಳ ಸುರಕ್ಷತೆಯು ಒಂದು ಪ್ರಮುಖ ವಿಷಯವಾಗಿದ್ದು ಪೋಷಕರು, ಸಮುದಾಯ, ವ್ಯವಹಾರಗಳು ಮತ್ತು ಎಲ್ಲಾ ದೇಶಗಳ ಸರ್ಕಾರದ ಜಂಟಿ ಜವಾಬ್ದಾರಿಯಾಗಿದೆ. ಮಕ್ಕಳನ್ನು ಯಾವುದೇ ಅಪಾಯದಿಂದ ರಕ್ಷಿಸುವುದು ಪ್ರತಿಯೊಬ್ಬರ ಆದ್ಯತೆಯಾಗಬೇಕು.
* ಮಕ್ಕಳು ಎದುರಿಸುವ ಅಪಾಯಗಳಿಗೆ ನಿರ್ದಿಷ್ಟ ರೀತಿಯ ಸುರಕ್ಷಿತ ಜಾಗೃತಿಯೇ ಮಕ್ಕಳಸುರಕ್ಷತೆ.

**ಮಕ್ಕಳಸುರಕ್ಷತೆಯು -**

ಮಕ್ಕಳಿಗೆ ಬೆಳೆಯಲು ಮತ್ತು ಅಭಿವೃದ್ಧಿಪಡಿಸಲು ಸುರಕ್ಷಿತ ವಾತಾವರಣವನ್ನು ಒದಗಿಸುವುದು, ದೈಹಿಕ, ಭಾವನಾತ್ಮಕ ಮತ್ತು ಲೈಂಗಿಕನಿಂದನೆಯಿಂದ ರಕ್ಷಿಸುವುದು ಮತ್ತು ಅವರ ಮೂಲಭೂತ ಅಗತ್ಯತೆಗಳನ್ನು ಪೂರೈಸಲು ಶಿಕ್ಷಣ, ಆರೋಗ್ಯ ಮತ್ತು ಸಂಪನ್ಮೂಲಗಳ ಪ್ರವೇಶವನ್ನು ಖಚಿತಪಡಿಸಿ ಕೊಳ್ಳುವುದನ್ನು ಒಳಗೊಂಡಿರುತ್ತದೆ.
* ಬಾಲಕಾರ್ಮಿಕತನ, ಶಿಶುಹತ್ಯೆ,ಶಿಶುದೌರ್ಜನ್ಯ, ನಿಂದನೆ, ಲೈಂಗಿಕದೌರ್ಜನ್ಯ, ಮಕ್ಕಳದುರುಪಯೋಗ, ಬಾಲ್ಯವಿವಾಹ ಮುಂತಾದ ಕ್ಷೇತ್ರಗಳು ಮಕ್ಕಳ ಸುರಕ್ಷತೆಯ ಅಡಿಯಲ್ಲಿ ಬರುತ್ತವೆ.

**ಮಕ್ಕಳಸುರಕ್ಷತೆಯ ಉದ್ದೇಶ:-**

* ಮಕ್ಕಳ ಮೇಲೆ ದಾಳಿ ಮತ್ತು ಸಂಭವನೀಯ ಅಪಾಯಗಳನ್ನು ತಡೆಗಟ್ಟುವುದು..
* ಮಕ್ಕಳು ಸಂಕಷ್ಟಗಳಿಗೆ ಸಿಲುಕುವ ಮುನ್ನ, ನಂತರ ಅವರು ಸುರಕ್ಷಿತರಾಗಿರುವಂತೆ ನೋಡಿಕೊಳ್ಳುವುದು ಎಲ್ಲರ ಜವಾಬ್ದಾರಿ.
* ಎಲ್ಲಾ ಮಕ್ಕಳು ಸುರಕ್ಷಿತರಾಗಿರುವುದನ್ನು ಖಚಿತ ಪಡಿಸಿಕೊಳ್ಳುವುದು.
* ಮಕ್ಕಳಹಕ್ಕುಗಳನ್ನು ಗೌರವಿಸುವುದು.
* ಮನೆಯ ಒಳಗೆ ಮತ್ತು ಹೊರಗೆ ಮಕ್ಕಳನ್ನು ರಕ್ಷಿಸುವುದು.

## ಮಕ್ಕಳಸುರಕ್ಷತೆಗಾಗಿ ಕೆಲವು ಪ್ರಮುಖ ಕ್ಷೇತ್ರಗಳು:-

1) ಗಾಯಗಳ ತಡೆಗಟ್ಟುವಿಕೆ.
2) ಮಗುವಿನ ಆಟಿಕೆಗಳ ಸರಿಯಾದ ಬಳಕೆ.
3) ಮನೆಯಲ್ಲಿ ಪಾಲಿಸಬೇಕಾದ ಸುರಕ್ಷತಾ ಮಾರ್ಗಸೂಚಿಗಳು.
4) ಸಂಚಾರಿ ಸುರಕ್ಷತೆಯ ಮಾರ್ಗಸೂಚಿಗಳು.
5) ಬೆಂಕಿ ಅನಾಹುತಗಳನ್ನು ತಪ್ಪಿಸುವುದು.
6) ಮಕ್ಕಳಹಿಂಸೆಯನ್ನು ತಡೆಗಟ್ಟುವುದು.
7) ರೋಗ ತಡೆಗಟ್ಟುವಿಕೆಗಾಗಿ ಶಿಕ್ಷಣ.
8) ಡಿಜಿಟಲ ಸುರಕ್ಷತೆ.
9) ಹೆಣ್ಣುಮಕ್ಕಳ ಸುರಕ್ಷತೆ ಮತ್ತು ಶೈಕ್ಷಣಿಕ ಸೌಲಭ್ಯಗಳು.
10) ಭ್ರೂಣಹತ್ಯೆಯನ್ನು ತಡೆಗಟ್ಟುವುದು ಮತ್ತು ಬುಡಕಟ್ಟು ಜನಾಂಗದ ಮಕ್ಕಳ ಸುರಕ್ಷತೆ.
11) ನಿರ್ಲಕ್ಷ್ಯ ಅಥವಾ ನಿಂದನೆಗೆ ಬಲಿಯಾದ ಮಕ್ಕಳ ಸುರಕ್ಷತೆ.
12) ವಲಸೆ ಪರಿಸ್ಥಿತಿಯಲ್ಲಿರುವ ಮತ್ತು ನ್ಯಾಯಾಂಗ ಪ್ರಕ್ರಿಯೆಯಲ್ಲಿರುವ ಮಕ್ಕಳ ಸುರಕ್ಷತೆ.

**ಮಕ್ಕಳ ಸುರಕ್ಷತೆಯ ಅರ್ಥವ್ಯಾಪ್ತಿ::--**

"**ಬಾಲಕಾರ್ಮಿಕಪದ್ಧತಿ,** ಬಾಲ್ಯವಿವಾಹ ಹಾಗೂ ಮಕ್ಕಳ ಸಾಗಾಣಿಕೆ ಮತ್ತು ಮಾರಾಟವನ್ನು ಸಂಪೂರ್ಣ ತಡೆಗಟ್ಟಿ ನಿರ್ಮೂಲನೆ ಮಾಡುವುದು ಹಾಗೂ ಯಾವುದೇ ಮಕ್ಕಳು ಈ ಪದ್ಧತಿಗೆ ಒಳಗಾಗದಂತೆ ನೋಡಿಕೊಳ್ಳುವುದು, ತಡೆಯುವುದು ಮತ್ತು ಈ ಕ್ರೂರ ವ್ಯವಸ್ಥೆ ಯಿಂದ ಮಕ್ಕಳನ್ನು ದೂರ ಇಡುವುದು ಮತ್ತು ಸಂರಕ್ಷಿಸುವುದು ಕೂಡ ಮಕ್ಕಳ ಸಂರಕ್ಷಣೆಯ ಅರ್ಥವ್ಯಾಪ್ತಿಗೆ ಬರುತ್ತದೆ.
ಹೆಚ್ಚಿನ ಮಾಹಿತಿಗಾಗಿ ಕೆಳಗಿನ ಯೂಟ್ಯೂಬಲಿಂಕನ್ನು ಸಂಪರ್ಕಿಸಿ http//www.howtotellyourchield.com
* **ಮಕ್ಕಳು ನಮ್ಮದೇಶ ಆಸ್ತಿ**, ದೇಶದ ಭವಿಷ್ಯವನ್ನು ನಿರ್ಮಿಸುವ ನಿರ್ಮಾಪಕರು ಹಾಗಾಗಿ ಅವರ ಸುರಕ್ಷತೆ ಮತ್ತು ಭದ್ರತೆ ನಮ್ಮೆಲ್ಲರ ಜವಾಬ್ದಾರಿ.
* ಪ್ರತಿ ಮಗುವಿಗೆ ಹಿಂಸೆ, ಶೋಷಣೆ ಮತ್ತು ನಿಂದನೆಯಿಂದ ಮುಕ್ತವಾಗಿ ಬದುಕುವ ಹಕ್ಕಿದೆ.

ಮಕ್ಕಳು ಹಿಂಸೆ ಶೋಷಣೆ ಮತ್ತು ನಿಂದನೆಯ ಕಪಟ ರೂಪಗಳನ್ನು ಅನುಭವಿಸುತ್ತಾರೆ. ಇದು ಪ್ರತಿಯೊಂದು ದೇಶದಲ್ಲೂ ನಡೆಯುತ್ತದೆ. ಮತ್ತು ಮಕ್ಕಳನ್ನು ಹೆಚ್ಚು ರಕ್ಷಿಸಬೇಕಾದ ಸ್ಥಳಗಳಲ್ಲಿ ಅಂದರೆ ಅವರ ಮನೆಗಳು, ಶಾಲೆಗಳು ಮತ್ತು ಸಮುದಾಯಗಳು ಮಕ್ಕಳ ಮೇಲಿನ ದೈಹಿಕ ,ಭಾವನಾತ್ಮಕ, ಲೈಂಗಿಕಹಿಂಸೆ ಅಥವಾ ಅನೇಕ ಸಂದರ್ಭಗಳಲ್ಲಿ ಮಕ್ಕಳು ಅವರು ನಂಬುವ ಜನರ ಕೈಯಲ್ಲಿ ಬಳಲುತ್ತಿದ್ದಾರೆ. ಅವರು ಗಾಯ ಮತ್ತು ಸಾವಿನ ಅಪಾಯವನ್ನು ಎದುರಿಸುತ್ತಿರುತ್ತಾರೆ.
*ಪರಿಸ್ಥಿತಿ ಏನೇ ಇರಲಿ ಪ್ರತಿ ಮಗುವಿಗೆ ಹಿಂಸೆಯಿಂದ ರಕ್ಷಿಸುವ ಹಕ್ಕಿದೆ. ಮಕ್ಕಳನ್ನು ರಕ್ಷಿಸುವುದು ಎಂದರೆ ಅವರ ಭವಿಷ್ಯವನ್ನು ಕಾಪಾಡಲು ಅವರ ದೈಹಿಕ ಮತ್ತು ಮಾನಸಿಕ ಅಗತ್ಯತೆಗಳನ್ನು ರಕ್ಷಿಸುವುದು.
**ಮಕ್ಕಳ ರಕ್ಷಣೆಗಾಗಿ ಯೂನಿಸೆಫ್: For every child UNICEF: United Nations International Children's Emergency Fund**
'ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಮಕ್ಕಳತುರ್ತು' ನಿಧಿ ಸ್ಥಾಪನೆ: ಡಿಸೆಂಬರ್ 11, 1946

**ಉದ್ದೇಶ:** ವಿಶ್ವದಾದ್ಯಂತ ಮಕ್ಕಳಿಗೆ ಮಾನವೀಯ ಮತ್ತು ಅಭಿವೃದ್ಧಿಯ ನೆರವು ಒದಗಿಸುವುದು.
*ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಕ್ಕಳು ಮತ್ತು ಮಹಿಳೆಯರ ದೀರ್ಘಾವಧಿಯ ಅಗತ್ಯತೆಗಳನ್ನೂ ಪೂರೈಸುವುದು.
* ಮಕ್ಕಳ ಮೇಲೆ ಪರಿಣಾಮ ಬೀರುವ ಸಮಸ್ಯೆಗಳು ಮತ್ತು ಅವರ ಹಕ್ಕುಗಳ ಸಾಕ್ಷಾತ್ಕಾರದ ಕುರಿತು
* ಪ್ರಭಾವಶಾಲಿ ಜ್ಞಾನ ಉತ್ಪಾದನೆ ಮತ್ತು ಸಂವಹನ.

UNICEF ನ ಐದು ಪ್ರಮುಖ ಮೌಲ್ಯಗಳು:-
1) ಕಾಳಜಿ
2) ಗೌರವ
3) ಸಮಗ್ರತೆ
4) ನಂಬಿಕೆ
5) ಹೊಣೆಗಾರಿಕೆ.

## ಯುನಿಸೆಫ್ ಮಕ್ಕಳ ರಕ್ಷಣಾ ಕಾರ್ಯಗಳು:-
* "ಮಕ್ಕಳ ಸಂರಕ್ಷಣೆಗೆ ಹಿಂದಿರುಗಿ "ಎಂಬ ಕರೆ ನೀಡುವುದು.
* ಬಾಲಕಾರ್ಮಿಕತೆಯನ್ನು ತಡೆಗಟ್ಟುವುದು.
* ಬಾಲ್ಯವಿವಾಹ ನಿಷೇಧ ಕಾಯ್ದೆಯನ್ನು ಸಮರ್ಪಕವಾಗಿ ಜಾರಿಗೆಗೊಳಿಸುವುದು.
* ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟುವುದು.
* ತುರ್ತು ಸಂದರ್ಭಗಳಲ್ಲಿ ಲಿಂಗ ಆಧಾರಿತ ಹಿಂಸೆಯನ್ನು ತಡೆಯುವುದು.
* ಸ್ಫೋಟಕ ಆಯುಧಗಳಿಂದ ಮಕ್ಕಳನ್ನು ರಕ್ಷಿಸುವುದು.
* ವಲಸೆ ಮತ್ತು ಸ್ಥಳಾಂತರಗೊಂಡ ಮಕ್ಕಳ ರಕ್ಷಣೆ.
* ಬಿಕ್ಕಟ್ಟಿನ ಸಮಯದಲ್ಲಿ ಕುಟುಂಬದಿಂದ ಪ್ರತ್ಯೇಕಗೊಂಡ ಮಕ್ಕಳನ್ನು ರಕ್ಷಿಸುವುದು.
* ಪರ್ಯಾಯ ಆರೈಕೆಯಲ್ಲಿರುವ ಮಕ್ಕಳ ರಕ್ಷಣೆ.
* ತುರ್ತು ಸಂದರ್ಭಗಳಲ್ಲಿ ಮಕ್ಕಳಿಗೆ ಮಾನಸಿಕ ಆರೋಗ್ಯ ಮತ್ತು ಮಾನಸಿಕ ಬೆಂಬಲ ನೀಡುವುದು..

**ನಾವು ಯಾವಾಗಲೂ ನಮ್ಮ ಮಕ್ಕಳನ್ನು ಮತ್ತು ಶಾಲಾ ಮಕ್ಕಳನ್ನು ಒಂದೇ ರೀತಿಯಾಗಿ ಸ್ವೀಕರಿಸಿದ್ದೇವೆಯೇ?**

## 3. ಮಕ್ಕಳ ಸಂರಕ್ಷಣಾ ಸಮಿತಿ

ಜಿಲ್ಲಾ ಪಂಚಾಯತ ಬೆಳಗಾವಿ

ಉಪನಿರ್ದೇಶಕರು (ಆ) ಶಾ.ಶಿ.ಇ ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಾರ್ಯಾಲಯ,

ಸಮಗ್ರ ಶಿಕ್ಷಣ ಕರ್ನಾಟಕ, ಬೆಳಗಾವಿ (ದ)

ಸಂಖ್ಯೆ :ಸ.ಶಿ.ಕ/ಮ.ರ.ಸ/ಶಾ.ಅ.ಉ/2023-24 ದಿನಾಂಕ: 01/02/2024

ಗೆ,

ಜಿಲ್ಲೆಯ ಎಲ್ಲ ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು

ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ

ವಿಷಯ: ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ರಕ್ಷಣಾ ಸಮಿತಿ, ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿ ರಚನೆ, ಮಕ್ಕಳ ರಕ್ಷಣಾಧಿಕಾರಿಗಳ ಹಾಗೂ ಆಪ್ತ ಸಮಾಲೋಚಕರ ನೇಮಕಾತಿ ಕುರಿತು.

ಉಲ್ಲೇಖ: 1. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಬೆಳಗಾವಿ ಇವರ ಪತ್ರ ಸಂಖ್ಯೆ: ಜಿ.ಮ.ರ.ಘ.ಬೆ/ಕಾ.ಮ.ಮಾ.ಸ.ಕು/2023-24 ದಿನಾಂಕ: 11/08/2023.

2. ಮಾನ್ಯ ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಸಮಿತಿ ಇವರ ಸಭೆ ದಿನಾಂಕ: 04/10/2023 ರ ನಿರ್ದೇಶನ.

3. ಈ ಕಚೇರಿ ಪತ್ರ ಸಂಖ್ಯೆ :ಸ.ಶಿ.ಕ/ಮ.ರ.ಸ/ಶಾ.ಅ.ಉ/2023-24 ದಿನಾಂಕ: 09/10/2023

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳನ್ವಯ ಈಗಾಗಲೇ ಉಲ್ಲೇಖಿತ ಪತ್ರ 3 ರಂತೆ ಜಿಲ್ಲೆಯ ಎಲ್ಲ ಶಾಲೆಗಳಲ್ಲಿ ಮಕ್ಕಳ ಸುರಕ್ಷತಾ ಸಮಿತಿಯನ್ನು ರಚಿಸಲು ತಿಳಿಸಲಾಗಿರುತ್ತದೆ. ವಲಯಗಳಿಂದ ಪಡೆದಂತಹ ಮಾಹಿತಿಯನ್ನು ಪರಿಶೀಲಿಸಲಾಗಿ ಜಿಲ್ಲೆಯಲ್ಲಿ ಇನ್ನೂ ಬಹಳಷ್ಟು ಶಾಲೆಗಳಲ್ಲಿ ಮಕ್ಕಳ ಸುರಕ್ಷತಾ ಸಮಿತಿಯನ್ನು ರಚಿಸದೇ ಇರುವುದು ಕಂಡು ಬಂದಿರುತ್ತದೆ. ಅದರಂತೆ ಸಮಿತಿ ರಚಿಸಿದೇ ಇರುವ ಸರ್ಕಾರಿ, ಅನುದಾನಿತ, ಅನುದಾನರಹಿತ ಹಾಗೂ ಇತರೆ ಶಾಲೆಗಳಲ್ಲಿ ಕೂಡಲೇ ಮಕ್ಕಳ ಸುರಕ್ಷತಾ ಸಮಿತಿಯನ್ನು ರಚಿಸಲು ಸೂಚಿಸಿದೆ ಹಾಗೂ ರಚಿಸಿದ ಕುರಿತು ಮಾಹಿತಿಯನ್ನು ಈಗಾಗಲೇ ನೀಡಿರುವ ಅನುಬಂಧ 1&2 ರಲ್ಲಿ ಸಲ್ಲಿಸುವುದು. ಮುಂದುವರೆದು ಸಮಿತಿ ಸದಸ್ಯರ ವಿವರವಿರುವ ನಾಮಫಲಕವನ್ನು ಕಡ್ಡಾಯವಾಗಿ ಶಾಲಾ ಕಚೇರಿಯಲ್ಲಿ ಪ್ರದರ್ಶಿಸುವುದು. ಇನ್ನುಳಿದಂತೆ ಈ ಕೆಳಕಂಡ ಅಂಶಗಳನ್ನು ಸಹ ಶಾಲೆಗಳಲ್ಲಿ ಅನುಷ್ಠಾನ ಮಾಡಲು ಸೂಚಿಸಿದೆ.

1. ಪ್ರಾರ್ಥನಾ ಸಮಯದಲ್ಲಿ ಪ್ರತಿ ಗುರುವಾರ ಬಾಲ್ಯವಿವಾಹ ನಿಷೇಧ ಪ್ರತಿಜ್ಞೆಯನ್ನು ಮಕ್ಕಳಿಂದ ಹೇಳಿಸುವುದು ಮತ್ತು ಪ್ರದರ್ಶಿಸುವುದು.
2. ಪ್ರತಿ ಶಾಲೆಯಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ 1098 ಕಡ್ಡಾಯವಾಗಿ ಗೋಚರಿಸುವಂತೆ ಹಾಗೂ ಇದರ ಬಗ್ಗೆ ಅರಿವು ಮೂಡಿಸುವುದು.
3. ಶಾಲಾ ಆವರಣದಲ್ಲಿ 100 ಮೀ. ವ್ಯಾಪ್ತಿಯೊಳಗಡೆ ತಂಬಾಕು ಮಾರಾಟ ಹಾಗೂ ಸೇವನೆ ನಿಷೇದಿಸಿದ ಕುರಿತು ನಾಮಫಲಕ ಪ್ರದರ್ಶನ ಮಾಡುವುದು.
4. ಈಗಾಗಲೇ ಮಕ್ಕಳ ಸ್ವರಕ್ಷಣಾ ಕಲಿಕೆಗೆ ಬಿಡುಗಡೆಯಾದಂತಹ ಅನುದಾನವನ್ನು ಸೂಕ್ತ ಪ್ರಮಾಣದಲ್ಲಿ ಬಳಕೆ ಮಾಡಿ ಮಕ್ಕಳಿಗೆ ಸೂಕ್ತ ತರಬೇತಿ ನೀಡುವುದು ಹಾಗೂ ದಾಖಲೆ ನಿರ್ವಹಿಸುವುದು.
5. ಹದಿಹರೆಯದ ಹೆಣ್ಣು ಮಕ್ಕಳಿಗೆ ಗುಣಾತ್ಮಕ ಕಲಿಕೆಯ ಜೊತೆಗೆ ಅವರ ದೈಹಿಕ, ಸಾಮಾಜಿಕ ಹಾಗೂ ಮಾನಸಿಕ ಬೆಳವಣಿಗೆಗೆ ಅನುಕೂಲವಾಗುವ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಬಿಡುಗಡೆಯಾದಂತಹ ಅನುದಾನವನ್ನು ನಿಯಮಾವಳಿಯಂತೆ ಬಳಸಿ ದಾಖಲೆ ನಿರ್ವಹಿಸುವುದು.
6. ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶ (safe touch and Unsafe touch) ದ ಕುರಿತು ಇರುವ ಚಿತ್ರಿಪತ್ರಗಳನ್ನು ಕಡ್ಡಾಯವಾಗಿ ಶಾಲಾ ಸೂಚನಾ ಫಲಕದ ಮೇಲೆ ಖಾಯಂ ಆಗಿ ಪ್ರದರ್ಶಿಸುವುದು ಹಾಗೂ ಜಾಗೃತಿ ಮೂಡಿಸುವುದು.

ಉಪನಿರ್ದೇಶಕರು,
ಶಾ.ಶಿ.ಇ ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು,
ಸಮಗ್ರ ಶಿಕ್ಷಣ ಕರ್ನಾಟಕ ಬೆಳಗಾವಿ.

# ಶಾಲೆಗಳಲ್ಲಿ ಮಕ್ಕಳ ರಕ್ಷಣಾ ಸಮಿತಿ ಕಡ್ಡಾಯವೇ ?
# ರಚನೆ – ಕಾರ್ಯ– ಅನುಷ್ಠಾನದ ಲಾಭಗಳು

## ಪೀಠಿಕೆ :

ಇಂದು ಮಕ್ಕಳು ಅವರ ತಂದೆ –ತಾಯಿಗಳ ಕಣ್ಗಾವಲಿನಲ್ಲಿಯೇ ಇಪ್ಪತ್ನಾಲ್ಕು ಗಂಟೆಯೂ ಇರುವ ಕಾಲವಲ್ಲ. ಕೆಲವಡೆಯಲ್ಲಂತೂ ಮಕ್ಕಳನ್ನು ಯಾರದೋ ಆಶ್ರಯದಲ್ಲಿಟ್ಟು, ತಮ್ಮ ಕನಸಿನ ಸಾಕಾರಕ್ಕಾಗಿ ಹೆತ್ತವರು ಇನ್ನೆಲ್ಲೋ ಇರುತ್ತಾರೆ. ಇಂತಹ ಸಂದರ್ಭದಲ್ಲಿ ಮಕ್ಕಳ ರಕ್ಷಣೆ ಹೇಗೆ ಆಗಬೇಕು ? ಎನ್ನುವ ಪ್ರಶ್ನೆ ಏಳುವುದು ಸಹಜ.

'ಶಿಕ್ಷಣ' ಇಂದು ನಮ್ಮ ಅಗತ್ಯ ಪೋಷಕಾಂಶವಾಗಿರುವಾಗ ಅದರ ದೊರೆಯುವಿಕೆಗಾಗಿ ಮಕ್ಕಳು ತಮ್ಮ ಹೆತ್ತವರ, ಪೋಷಕರ ನೆರಳಿನಿಂದ ಹೊರಬರಲೇ ಬೇಕಾದ ಅನಿವರ್ಯತೆ ಇದೆ. ಅಂತಹ ಅನೇಕ ಸಂದರ್ಭದಲ್ಲಿ ಮಕ್ಕಳು ಅಭದ್ರತೆ, ಅಸುರಕ್ಷತೆಗಳನ್ನು ಅನುಭವಿಸುತ್ತಾರೆ.ತಮ್ಮ ಶಿಕ್ಷಣ ಮತ್ತು ಭವಿಷ್ಯದಿಂದಲೇ ಸುರಕ್ಷಿತವಲ್ಲದ ಸನ್ನಿವೇಶಗಳನ್ನು ಎದುರಿಸ ಬೇಕಾಗುತ್ತದೆ.ಅದು ಮಕ್ಕಳ ಅಪಹರಣ, ನಿಂದನೆ, ಕೊಲೆ, ಹಲ್ಲೆ, ಅತ್ಯಾಚಾರ ಇತ್ಯಾದಿ ಯಾವುದೇ ಅಘಾತಕಾರಿಯಾದ ಮತ್ತು ಹೇಯವಾದ ಕೃತ್ಯವಾಗಿರಬಹುದು. ಇಂತಹ ಹಿಂಸೆ ಮತ್ತು ಹಾನಿಯಾಗದಂತೆ ತಡೆಗಟ್ಟುವ ಉದ್ದೇಶದಿಂದ **"Child Protection Committe" CPC** ಯನ್ನು ಪ್ರತಿ ಶಾಲೆಗಳಲ್ಲೂ ಜಾರಿಗೆ ತರಲಾಗಿದೆ.

ಸರ್ಕಾರಿ/ಸರ್ಕಾರೇತರ, ಖಾಸಗೀ/ಅನುದಾನಿತ, ಟ್ರಸ್ಟ್ ಅಥವಾ ಮಂಡಳಿಗಳ ಶಿಕ್ಷಣ ಸಂಸ್ಥೆಗಳು ಪ್ರತಿ ಶಾಲೆಯಲ್ಲಿಯೂ ಮಕ್ಕಳ ಸುರಕ್ಷತಾ ಸಮಿತಿ – (2015) ಹೊಂದಿರುವಂತೆ ಆದೇಶಿಸಲಾಯಿತು. ಇದನ್ನು ಸ್ಥಾಪಿಸುವ ಪೂರ್ವದಲ್ಲಿ ಶಿಕ್ಷಣ ತಜ್ಞರ/ ವಿಶೇಷ ಸಂಸ್ಥೆಗಳ ಪ್ರತಿನಿಧಿಗಳ ಸಮಿತಿಯಲ್ಲಿ ಅನೇಕ ಚರ್ಚೆಗಳು ನಡೆದು ಮಾರ್ಗಸೂಚಿಗಳನ್ನು ರಚಿಸಲಾಗಿತ್ತು. ಇದು ಅಧಿಕೃತವಾಗಿ 2016 ರಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಸುರಕ್ಷಾ ನೀತಿಯನ್ನು ಜಾರಿಗೆ ತಂದಿತು.

## ವಿವರಣೆ:

### ಈ ನೀತಿ ಹೇಳುವುದೇನು ?

ಇದು ಮಕ್ಕಳ ಸ್ನೇಹಿ ಒಡನಾಟವನ್ನು ಆಧರಿಸಿದ ಒಂದು ಸಮಗ್ರ ನೀತಿಯಾಗಿದೆ.ಮಕ್ಕಳ ರಕ್ಷಣೆ ಸಮಾಜದ ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯು ಮತ್ತು ಹೊಣೆಯೂ ಹೌದು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪೋಲೀಸ್ ಮತ್ತು ನಾಗರಿಕ ಸೇವಾ ಸಮಿತಿ, ಅಪರಾಧ ತಡೆ ವಿಭಾಗ, ಕಾನೂನು ಮತ್ತು ನ್ಯಾಯ ಮಂಡಳಿ, ಮಾನವ ಹಕ್ಕು ಸಂರಕ್ಷಣಾ ಸಮಿತಿ ಹೀಗೆ ಎಲ್ಲ ಸಂಘಟನೆಗಳಲ್ಲೂ ಸೇರಿ ಮಕ್ಕಳ ಸುರಕ್ಷತೆ ಕಾಪಾಡುವ ಪಣ ತೊಟ್ಟಿವೆ. ಪ್ರತಿ ಶಾಲೆ ಸಂಸ್ಥೆಗೂ ಇದರ ಜೊತೆಯಲ್ಲಿ ತನ್ನದೇ ಆದ ಇನ್ನು ಅಗತ್ಯವಿರುವ ನಿಯಮಾವಳಿಗಳನ್ನು ಅಳವಡಿಸಿಕೊಳ್ಳುವ ಅವಕಾಶ ನೀಡಲಾಗಿದೆ. ಒಟ್ಟಾರೆಯಾಗಿ ಬಾಲ್ಯದಿಂದ ಹದಿಹರೆಯದ ವರೆಗಿನ ಎಲ್ಲಾ ಮಕ್ಕಳ ಸುರಕ್ಷೆಯೂ ಸರ್ಕಾರದ ಜವಾಬ್ದಾರಿಯಲ್ಲೇ ನಡೆಯುವಂತೆ ನೋಡಿಕೊಳ್ಳಲಾಗುತ್ತದೆ.

### ಮಕ್ಕಳ ಸುರಕ್ಷತೆ ಏಕೆ ? ಹೇಗೆ ?

ಮಕ್ಕಳು ಸಾಮಾಜಿಕವಾಗಿ, ಭಾವನಾತ್ಮಕವಾಗಿ ಹಾಗೂ ದೈಹಿಕವಾಗಿ ಅಭಿವೃದ್ಧಿ ಸಾಧಿಸಬೇಕಾಗಿರುವುದು ಅಗತ್ಯವೆಂದು ನಾವೆಲ್ಲರೂ ಬಲವಾಗಿ ನಂಬಿದ್ದೇವೆ. ಇದಕ್ಕಾಗಿ ಸೂಕ್ತ ಪರಿಸರವನ್ನು ಒದಗಿಸಿಕೊಡುವಲ್ಲಿ ಶ್ರಮಿಸುತ್ತೇವೆ. ಅದರಲ್ಲೂ ಶಾಲೆಗಳು ಮಕ್ಕಳ ಸಂರಕ್ಷಕರಾಗಿ ಸಮಾಜದಲ್ಲಿ ವಿಶೇಷ ಸಾಂಸ್ಥಿಕ ಪಾತ್ರ ತುಂಬುತ್ತವೆ. ಇದಕ್ಕಾಗಿ ಮೊದಲು ತಮ್ಮ ಪಾಲನೆಯಲ್ಲಿರುವ ಎಲ್ಲಾ ಮಕ್ಕಳು ಬೆಳೆಯಲು ಮತ್ತು ಅಭಿವೃದ್ಧಿ ಹೊಂದಲು ತಮ್ಮ ಶಾಲೆಯು ಸುರಕ್ಷಿತ ತಾಣವಾಗಿದೆಯೇ ಎಂದು ಮೊದಲು ಖಚಿತಪಡಿಸಿಕೊಳ್ಳಬೇಕು. ಹಾಗೆ ನೋಡಿದರೆ, ಇಂದು ತಾಯಿಯ ಗರ್ಭವು ಮಗುವಿಗೆ ಸುರಕ್ಷಿತವಲ್ಲ. ಅದಕ್ಕಾಗಿ, ಮಗು ತಾನು ಇರುವ ಕೌಟುಂಬಿಕ ಪರಿಸರದಿಂದ ಹಿಡಿದು ತನ್ನ ಸುತ್ತಲಿನ ಎಲ್ಲ ಅಸುರಕ್ಷತಾ ವಲಯದಿಂದ ರಕ್ಷಣೆ ಮಾಡಿಕೊಳ್ಳಬೇಕಾದ ಅನಿವಾರ್ಯತೆಯನ್ನು ಕಾಣುತ್ತಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ 2016 ರಲ್ಲಿ ಜಾರಿಗೊಳಿಸಿದ ಮಕ್ಕಳ ರಕ್ಷಣಾ ನೀತಿ ಪ್ರತಿ ಶಾಲೆಗಳಲ್ಲೂ ಒಂದು ಸಂರಕ್ಷಣಾ ಸಮಿತಿಯನ್ನು ಜಾರಿಗೆ ತರುವಂತೆ ನಿರ್ದೇಶಿಸಿದೆ. ಇದರ ಅನ್ವಯ ಶಾಲೆಗಳಲ್ಲಿ ಈ ಕೆಳಕಂಡವರನ್ನು ಒಳಗೊಂಡ ಮಕ್ಕಳ ರಕ್ಷಣಾ ಸಮಿತಿಯನ್ನು ರಚಿಸಲಾಗುತ್ತಿದೆ.

ಚಟುವಟಿಕೆ 1.1

ಶಿಬಿರಾರ್ಥಿಗಳಿಗೆ ಶಾಲೆಗಳಲ್ಲಿ ಮಕ್ಕಳ ಸುರಕ್ಷತಾ ಸಮಿತಿಯ ಮಾದರಿ ರಚಿಸಲು ತಿಳಿಸುವುದು.

1) ಸಂಸ್ಥೆಯ ಮುಖ್ಯಸ್ಥರು ಅಧ್ಯಕ್ಷರಾಗಿರುತ್ತಾರೆ.
2) ಇಬ್ಬರು ಶಿಕ್ಷಕರು/ಶಿಕ್ಷಕಿಯರು - ಒಬ್ಬರನ್ನು ಮಕ್ಕಳ ರಕ್ಷಣಾ ಅಧಿಕಾರಿಯನ್ನಾಗಿ ನೇಮಿಸಲಾಗುತ್ತದೆ.
3) ಇಬ್ಬರು ಪೋಷಕರು –ಒಬ್ಬರು ಮಹಿಳೆ ಮತ್ತು ಶಾಲಾ ನಿರ್ವಹಣಾ ಸಂಸ್ಥೆಯ ಸದಸ್ಯರು ಇರುತ್ತಾರೆ.
4) 8 ನೇ ತರಗತಿಗಿಂತ ಉನ್ನತ ತರಗತಿಯ ಇಬ್ಬರು ವಿದ್ಯಾರ್ಥಿಗಳು/ಅದರಲ್ಲಿ ಒಬ್ಬರು ವಿದ್ಯಾರ್ಥಿನಿಯಾಗಿರುತ್ತಾಳೆ.
5) ಇವರ ಜೊತೆಗೆ ಕಾನೂನು / ಪೋಲೀಸ್ ಇಲಾಖೆಯ ಪ್ರತಿನಿಧಿಯೊಬ್ಬರು ಇರುತ್ತಾರೆ.

ಮಕ್ಕಳ ಸುರಕ್ಷತಾ ಸಮಿತಿಯ ಜವಾಬ್ದಾರಿಗಳು :

1) ಪ್ರತಿ 3 ತಿಂಗಳಿಗೊಮ್ಮೆ ಅಥವಾ ಮಕ್ಕಳ ಸಂರಕ್ಷಣೆ ಉಲ್ಲಂಘನೆಯಾದಾಗ ಸಭೆ ಸೇರುತ್ತದೆ.
2) ತ್ರೈಮಾಸಿಕ ಅವಧಿಯಲ್ಲಿ ಕಂಡು ಬಂದ ಯಾವುದೇ ರೀತಿಯ ನಿಯಮ ಉಲ್ಲಂಘನೆ ಮಕ್ಕಳ ಮೇಲಿನ ದೌರ್ಜನ್ಯ, ಅಪಾಯಗಳನ್ನು ತಪ್ಪಿಸಲು ಹೆಚ್ಚುವರಿ ಕ್ರಮಗಳ ಬಗ್ಗೆ ಚರ್ಚಿಸುವುದು.
3) ನಿಗದಿತ ಅವಧಿಯಲ್ಲಿ ಸಮಸ್ಯೆಗಳನ್ನು ದಾಖಲಿಸಿಕೊಂಡು ಪರಿಹಾರ ಸೂಚಿಸುವುದು.
4) ಮಕ್ಕಳ ಸುರಕ್ಷತೆಗಾಗಿ ಅಗತ್ಯವಿರುವ ಎಲ್ಲಾ ರಜಿಸ್ಟರ್‌ಗಳು, ಕಡತಗಳು, ದಾಖಲೆಗಳನ್ನು ನಿರ್ವಹಿಸುವುದು.
5) ಅಗತ್ಯವಿದ್ದಲ್ಲಿ, ಬಾಹ್ಯ ತಜ್ಞರ, ಕಾನೂನಿನ ಸಲಹೆ ಪಡೆಯುವುದು.
6) ಪಾಲಕರ ಮತ್ತು ಪೋಷಕರ ಜೊತೆಗೂಡಿ ಸುರಕ್ಷತಾ ಕ್ರಮಗಳ ಕುರಿತು ಚರ್ಚಿಸುವುದು.

ಮಕ್ಕಳ ರಕ್ಷಣೆ ಯಾವ ಯಾವ ಹಂತಗಳಲ್ಲಿ ಆಗಬೇಕು :

1) ಕೌಟುಂಬಿಕ ಪರಿಸರ ಮತ್ತು ಸಾಮಾಜಿಕ ವಾತಾವರಣದಲ್ಲಿ :







ಹಲವಾರು ಸಂದರ್ಭದಲ್ಲಿ ಮಗುವಿನ ಭ್ರೂಣ ಪರೀಕ್ಷೆ ಮತ್ತು ಭ್ರೂಣ ಹತ್ಯೆಯು ಒಂದು ಅಸುರಕ್ಷಿತತೆಯೇ ಸರಿ. ಹೆಣ್ಣು ಮಕ್ಕಳು ಅಥವಾ ಬೇಡದ ಗರ್ಭ ತೆಗೆಸುವ ತಾಯಿ / ತಂದೆಗಳಿಂದಲೇ ಮಗುವಿಗೆ ಮೊದಲು ಆಪತ್ತು ಎದುರಾಗುತ್ತದೆ. ಮುಂದೆ ಹೆಣ್ಮಕ್ಕಳಷ್ಟೇ ಅಲ್ಲ, ಗಂಡು ಮಕ್ಕಳು ಕೂಡ ಇಂದು ತಮ್ಮ ಪರಿಚಿತರಿಂದ ಸಂಬಂಧಿಗಳಿಂದ ಲೈಂಗಿಕ ಶೋಷಣೆಗೆ ಒಳಗಾಗುತ್ತಿರುತ್ತಾರೆ. ಅವರು ತಮ್ಮ ಸಮಸ್ಯೆಗಳನ್ನು ಮುಕ್ತವಾಗಿ ಚರ್ಚಿಸಲು ಆಗದೇ, ಎದುರಿಸಲು ಆಗದೇ ಖಿನ್ನತೆಗೆ ಒಳಗಾಗುತ್ತಾರೆ. ಕೆಲವೊಮ್ಮೆಯಂತೂ ದುಶ್ಚಟಗಳಿಗೆ ಒಳಗಾದ ಪಾಲಕರು - ಪೋಷಕರು ಮಕ್ಕಳನ್ನು ಹೊಡೆದು, ಹಲ್ಲೆ ನಡೆಸುವುದು, ಶಾಲೆಗಳಿಂದ ಬಿಡಿಸಿ, ಕೂಲಿ ಕೆಲಸಗಳಿಗೆ, ಬಿಕ್ಷಾಟನೆಗೆ, ಲೈಂಗಿಕ ಕಾರ್ಯಕರ್ತರಾಗಲು ಹಚ್ಚುವುದು ನಡೆಯುತ್ತದೆ.ಇಂತಹ ಸಂದರ್ಭಗಳಲ್ಲಿ ಮಕ್ಕಳ ಸುರಕ್ಷತೆಯ ಪ್ರಶ್ನೆ ಕಾಡುತ್ತದೆ.

## 1) ಶೈಕ್ಷಣಿಕ ಪರಿಸರದಲ್ಲಿ :

ಶಾಲೆಗೆ ಬರುವ, ಹೋಗುವ ಸಂದರ್ಭದಲ್ಲಿ ತನ್ನ ಹಿರಿಯ ಸಹಪಾಠಿಗಳಿಂದ ಮಕ್ಕಳು ದೈಹಿಕ ಹಲ್ಲೆ / ಶೋಷಣೆಗೆ ಒಳಗಾಗುತ್ತಾರೆ. ವಸತಿ ಶಾಲೆಗಳು / ಹಾಸ್ಟೇಲ್ ಗಳು ಮಕ್ಕಳನ್ನು ಸ್ವಾವಲಂಬಿಗಳಾಗಿ ಮಾಡುತ್ತವೆಂದು ನಾವು ನಂಬುತ್ತೇವೆ. ಆದರೆ, ಅಲ್ಲಿಯೂ ಮಕ್ಕಳು ದೌರ್ಜನ್ಯಕ್ಕೆ ಒಳಗಾಗುವ ಉದಾಹರಣೆಗಳಿವೆ. ಕೆಲವೊಮ್ಮೆ ಪ್ರಾಣಾಪಾಯವೂ ಆಗಿರುವ ಸಂದರ್ಭಗಳಿವೆ. ಹಾಗಾದಲ್ಲಿ ತಂದೆ - ತಾಯಿಗಳಿಂದ ದೂರವಾಗಿ ಕಲಿಯುವ ಮಕ್ಕಳ ಸುರಕ್ಷತೆ ಹೇಗೆ ಸಾಧ್ಯ?

ಹಾಗೇ, ಶಾಲಾ ವಾಹನದಲ್ಲಿ ಒಡಾಡುವ ಖಾಸಗಿ/ಸರ್ಕಾರಿ ಬಸ್‌ಗಳಲ್ಲಿ ಒಡಾಡುವ ಮಕ್ಕಳಂತೂ ದಿನಂಪ್ರತಿ ಹಿಂಸೆಗೆ ಒಳಗಾಗುತ್ತಾರೆ. ಅವರ ಸುರಕ್ಷಿತತೆಯ ಬಗ್ಗೆ ಯಾವುದೇ ಭರವಸೆಗಳು ಇರುವುದಿಲ್ಲ. ಇನ್ನು ಶಾಲೆ –ಕಾಲೇಜುಗಳಲ್ಲಿ ತನ್ನ ಶಿಕ್ಷಕರಿಂದಲೇ ಮಕ್ಕಳು ದೌರ್ಜನ್ಯಕ್ಕೆ ಒಳಗಾಗಿರುವ ಉದಾಹರಣೆಳೂ ಇವೆ. ಜಾತಿ ನಿಂದನೆ, ವರ್ಣಭೇದ, ಲೈಂಗಿಕ ಕಿರುಕುಳ ಇವೆಲ್ಲವೂ ವಿವಿಧ ಮುಖಗಳಲ್ಲಿ ಪ್ರಕಟಗೊಳ್ಳುತ್ತವೆ. ಇಲ್ಲಿ ಮಕ್ಕಳ ಸುರಕ್ಷತೆಯ ಅಗತ್ಯ ಕಾಣುತ್ತದೆ.

## 2) ಡಿಜಿಟಲ್ ಜಗತ್ತಿನಲ್ಲಿ :

**ಚಟುವಟಿಕೆ 1.2**

ಶಿಬಿರಾರ್ಥಿಗಳನ್ನು ಎರಡು ಗುಂಪುಗಳಾಗಿ ಮಾಡಿ ಒಂದು ತಂಡಕ್ಕೆ ಮೊಬೈಲ್ ನಲ್ಲಿ ಆಟವನ್ನು ಆಡಿಸುವುದು ಹಾಗೂ ಇನ್ನೊಂದು ತಂಡದವರಿಗೆ ಮೈದಾನಕ್ಕೆ ಕರೆದುಕೊಂಡು ಹೋಗಿ ಆಟ ಆಡಿಸುವುದು.ನಂತರ ಎರಡು ತಂಡದವರಿಂದ ಅಭಿಪ್ರಾಯವನ್ನು ಪಟ್ಟಿ ಮಾಡುವುದು. ಪ್ರಸ್ತುತ ಶಿಕ್ಷಣದಲ್ಲಿ, ಅದರಲ್ಲಿಯೂ ಕೋವಿಡ್ ನಂತರದಲ್ಲಿ ಕಂಪ್ಯೂಟರ ಮತ್ತು ಅಂತರ್ಜಾಲ ವ್ಯವಸ್ಥೆಗಳು ಶಿಕ್ಷಣದಲ್ಲಿ ಅನಿವಾರ್ಯ ಭಾಗವಾಗಿವೆ. ಮಕ್ಕಳಿಗೆ ಡಿಜಿಟಲ್ ಪ್ರಪಂಚ ನೀಡಿರುವ ಅವಕಾಶದಲ್ಲಿ ಮುಕ್ತವಾಗಿ ವ್ಯವಹರಿಸುತ್ತಾ ನಮ್ಮ ಊಹೆಗೂ ನಿಲುಕದ ದುಷ್ಪರಿಣಾಮಗಳನ್ನು ಎಳೆದುಕೊಳ್ಳುತ್ತಿದ್ದಾರೆ. ಬ್ಲೂ ವೇಲ್ ಗೇಮ್ ಬಗ್ಗೆ ಕೇಳಿದಾಗ ಮೈ ಜುಮ್ ಎನ್ನಿಸುವ ಸಂಗತಿಗಳು ಆಚೆ ಬಂದವು. ಅದೆಷ್ಟೋ ಮಕ್ಕಳು ಆತ್ಮ ಹತ್ಯೆಗೆ ಶರಣಾದರು.ಸೈಬರ್ ಅಪರಾಧಗಳಲ್ಲಿಯೂ ಅಪ್ರಾಪ್ತರು ಇರುವುದು ಖೇದಕರ ಸಂಗತಿಯಲ್ಲವೇ? .ಡಿಜಿಟಲ್ ಲೋಕದ ದುಷ್ಪರಿಣಾಮಗಳನ್ನು ಎದುರಿಸುವ ನಿಟ್ಟಿನಲ್ಲಿ ಜಾಗೃತಗೊಳ್ಳಬೇಕಿದೆ.ಇದು ದೈಹಿಕ ಮತ್ತು ಮಾನಸಿಕ ಅಸುರಕ್ಷತೆಗೆ ಕಾರಣವಾಗುತ್ತಿದೆ.

ಮಕ್ಕಳ ಸುರಕ್ಷತಾ ಸಮಿತಿ - ಈ ಸಮಸ್ಯೆಗಳಿಗೆ ಹೇಗೆ ಪರಿಹಾರ ನೀಡಬಲ್ಲದು ?

ಕರ್ನಾಟಕದ ಶಾಲೆಗಳಲ್ಲಿನ ಮಕ್ಕಳ ಸುರಕ್ಷಾ ನೀತಿಯನ್ನು ಪ್ರತಿವರ್ಷ ಪರಿಶೀಲನೆ ಮಾಡಲು ಸರ್ಕಾರದ ಅಪರ ಕಾರ್ಯದರ್ಶಿ, ಸಿಬ್ಬಂದಿ ಹಾಗೂ ಆಡಳಿತ ಸುಧಾರಣಾ ಇಲಾಖೆ ಇವರು ನೋಡಲ್ ಅಧಿಕಾರಿಯಾಗಿರುತ್ತಾರೆ.ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಯೋಗದೊಡನೆ ಸಾರ್ವಜನಿಕ ಶಿಕ್ಷಣ ಆಯುಕ್ತರು ಈ ಪರಿಶೀಲನೆಗೆ ಅನುವು ಮಾಡಿಕೊಡುವರು.

## ಅದಕ್ಕಾಗಿ ಮಕ್ಕಳಿಗೆ ಇರುವ ಕಾನೂನಾತ್ಮಕ ಸೌಲಭ್ಯಗಳು :

1) ಮಕ್ಕಳ ಸಹಾಯವಾಣಿ ಸಂಖ್ಯೆ –**1098** ಗೆ ಮಕ್ಕಳು ಕರೆಮಾಡಿ, ತಮ್ಮ ಸಮಸ್ಯೆಗಳನ್ನು ತಿಳಿಸಬಹುದು ಹಾಗೂ ತಮ್ಮ ದೂರು ದಾಖಲಿಸಬಹುದು.

2) ಶಾಲೆಗಳಲ್ಲಿ ಶಿಕ್ಷಕರು ಕರೆಯುವ ಮಕ್ಕಳ ಸುರಕ್ಷಾ ಸಮಿತಿ ಸಭೆಯಲ್ಲಿ ತಮ್ಮ ಸಮಸ್ಯೆಗಳನ್ನು ಚರ್ಚಿಸುವುದು. ಮಕ್ಕಳು ಈ ನಿಟ್ಟಿನಲ್ಲಿ ಹಿಂಜರಿಕೆ, ಅವಮಾನ ಅನುಭವಿಸದಂತೆ ಅಧ್ಯಕ್ಷರು ಮತ್ತು ನೋಡಲ್ ಶಿಕ್ಷಕರು ಕ್ರಮವಹಿಸುವರು.

3) ಮಕ್ಕಳಿಗೆ ತಮ್ಮ ಸಮಸ್ಯೆಗಳನ್ನು ಬರೆದು ಹಾಕಲು ಅನುಕೂಲವಾಗುವಂತಹ ಸಲಹಾ ಪೆಟ್ಟಿಗೆಗಳನ್ನು ಶಾಲೆಗಳಲ್ಲಿ ಇಡಲಾಗುತ್ತದೆ. ಸಲಹಾ ಪೆಟ್ಟಿಗೆಗಳಲ್ಲಿನ ದೂರುಗಳನ್ನು ವಿದ್ಯಾರ್ಥಿಪ್ರತಿನಿಧಿಗಳು ಮಕ್ಕಳ ರಕ್ಷಣಾಧಿಕಾರಿಯ ಸಮ್ಮುಖದಲ್ಲಿ ಓದುವುದು ಮತ್ತು ಸೂಕ್ತ ಕ್ರಮ ಕೈಗೊಳ್ಳುವುದು. ಕ್ರಮದ ವರದಿಯನ್ನು ತ್ರೈಮಾಸಿಕ ಸಭೆಗಳಲ್ಲಿ ಓದುವುದು.

4) ಮಕ್ಕಳನ್ನು ಮನೆಯಿಂದ ಶಾಲೆಗೆ ಶಾಲೆಯಿಂದ ಮನೆಗೆ ಕರೆದೊಯ್ಯುವ ವಾಹನಗಳಾದ ಮೋಟಾರ್ ಕ್ಯಾಬ್/ಮ್ಯಾಕ್ಸಿ ಕ್ಯಾಬ್/ಓಮಿನಿ ಬಸ್‌ಗಳು ಕಡ್ಡಾಯವಾಗಿ ನಿಯಮ ಪಾಲಿಸಲು ಆದೇಶವಿರುತ್ತದೆ. ಇದರ ಪ್ರಕಾರ ಪರವಾನಗಿ ಪಡೆದಿದ್ದು, ಸೂಕ್ತ ಆಸನದ, ಪ್ರಥಮ ಚಿಕಿತ್ಸಾ ಪೆಟ್ಟಿಗೆ, ಕುಡಿಯುವ ನೀರು, ಸಿಬ್ಬಂದಿಗಳ ಸೌಕರ್ಯಹೊಂದಿರಬೇಕು ಹಾಗೂ ಚಾಲಕನು ಅಪರಾಧದ ಹಿನ್ನೆಲೆಯವನಾಗಿರಬಾರದು. ಸೂಕ್ತ ಗುರುತಿನ ಪತ್ರ ದೂರವಾಣಿ ಸಂಖ್ಯೆ ಎಲ್ಲವೂ ಇರಬೇಕು. ಶಾಲೆಗಳು ಅವರ ವಿವರಗಳನ್ನು ಪೋಲೀಸ್ ಇಲಾಖೆಗೆ ನೀಡಿರಬೇಕು.

5) ಯಾವುದೇ ಮಗುವು ನೀಡುವ ದೂರಿನ ಗೌಪ್ಯತೆ ಕಾಪಾಡುವ ಹಾಗೂ ಮಗುವಿನ ಸಂಪೂರ್ಣ ರಕ್ಷಣೆ ಮಾಡಿ, ಕಾನೂನು ಸಮ್ಮತ ನ್ಯಾಯ ಒದಗಿಸುವುದು ರಕ್ಷಣಾಧಿಕಾರಿಯ ಕರ್ತವ್ಯವಾಗಿದೆ.

6) ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೋ) ಕಾಯ್ದೆ –ಎಲ್ಲಾ ರೀತಿಯ ಅಪರಾಧ ಮತ್ತು ದೌರ್ಜನ್ಯಗಳಿಂದ ಮಕ್ಕಳನ್ನು ರಕ್ಷಿಸುವ ಉದ್ದೇಶದಿಂದ 2012 ರಲ್ಲಿ ಪೋಕ್ಸೋ (PಔಅSಔ) ಕಾಯ್ದೆಯನ್ನು ಜಾರಿಗೆ ತರಲಾಗಿದೆ. ಇದರ ಪ್ರಕಾರ, ಮಕ್ಕಳ ರಕ್ಷಣೆಯನ್ನು ನಮ್ಮ ಸಂವಿಧಾನದ

21 ನೇ ಪರಿಚ್ಛೇದದಲ್ಲಿ ಭಾರತೀಯ ನಾಗರಿಕರಿಗೆ ಖಾತರಿಪಡಿಸಲಾಗಿದೆ. ಅಲ್ಲದೇ, ಶಿಕ್ಷಣ ಮಕ್ಕಳ ಹಕ್ಕು ಆಗಿರುವುದರಿಂದ, ಶಿಕ್ಷಣದ ಹಕ್ಕನ್ನು ಪೋಕ್ಸೋದೊಡನೆ ಸಮೀಕರಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

7) ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರಾಷ್ಟ್ರೀಯ ಆಯೋಗ (ಎನ್.ಸಿ.ಪಿ.ಸಿ.ಆರ್) ಒಂದು ಭಾರತೀಯ ಶಾಸನಬದ್ಧ ಸಂಸ್ಥೆಯಾಗಿದ್ದು, ಸಂಸತ್ತಿನ ಕಾಯ್ದೆ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಸಿ.ಪಿ.ಸಿ.ಆರ್) ಕಾಯ್ದೆ –2005 ಈ ಆಯೋಗವು ಮಹಿಳಾ ಮತ್ತು ಮಕ್ಕಳ ಅಬಿವೃದ್ಧಿ ಸಚಿವಾಲಯದಡಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಆಯೋಗವು ಮಾರ್ಚ –05 2007 ರಂದು ಕಾರ್ಯ ಆರಂಭಿಸಿತು.

https://drive.google.com/file/d/1Ewwibg6aFuI4H74Utpoa_Q8HV0Oxz4D/view?usp=drive_link ಲಿಂಕ ಬಳಸಿ ಗೂಗಲ್ ನಲ್ಲಿ ವಿಡಿಯೋ ನೋಡಬಹುದಾಗಿದೆ.

## ಮಕ್ಕಳ ಹಕ್ಕುಗಳ ಒಡಂಬಡಿಕೆಯ ಅರ್ಥ:

2014 ಕ್ಕೆ ವಿಶ್ವಸಂಸ್ಥೆ ಮಕ್ಕಳಹಕ್ಕುಗಳ ಒಡಂಬಡಿಕೆಗೆ 25 ನೇ ವರ್ಷದ ಬೆಳ್ಳಿಹಬ್ಬದ ಸಂಭ್ರಮಾಚರಣೆ ಆಚರಿಸಿ, " ಮಕ್ಕಳುಎಂದರೆ 18 ವರ್ಷದೊಳಗಿನವರು " ಎಂದು ತಿದ್ದುಪಡಿ ಮಾಡಿ ಅಂಗೀಕಾರ ಮಾಡಲಾಯಿತು.

* ವಿಶ್ವಸಂಸ್ಥೆಯು 1989 ನವೆಂಬರ್ 20 ರಂದು- " 18 ವರ್ಷದೊಳಗಿನ ಎಲ್ಲಾ ಮನುಷ್ಯರು ಮಕ್ಕಳು " ಎಂದು ಅಂಗೀಕರಿಸಿ, ಯಾವ ರಾಷ್ಟ್ರ ಈ ಒಡಂಬಡಿಕೆಗೆ ಒಪ್ಪಿದೆಯೋ ಆರಾಷ್ಟ್ರದ ಎಲ್ಲಾ ಮಕ್ಕಳ ಕಾನೂನುಗಳಲ್ಲಿರುವ ಪರಿಭಾಷೆಯಲ್ಲಿ ತಿದ್ದುಪಡಿಮಾಡಿ "18" ವರ್ಷ ಮಾಡತಕ್ಕದ್ದು ಎಂದು ವಿಶ್ವಸಂಸ್ಥೆ ತನ್ನ ಸದಸ್ಯರಾಷ್ಟ್ರಗಳಿಗೆ ಸೂಚಿಸಿ ಮಕ್ಕಳಹಕ್ಕುಗಳ ಒಡಂಬಡಿಕೆ ಎಂದು ಒಪ್ಪಂದ ಮಾಡಿಕೊಂಡಿತು. ವಿಶ್ವಸಂಸ್ಥೆಯ ಮಕ್ಕಳಹಕ್ಕುಗಳ ಒಡಂಬಡಿಕೆಯು ಜಗತ್ತಿನೆಲ್ಲೆಡೆ ಇರುವ ಎಲ್ಲಾ ಮಕ್ಕಳಹಕ್ಕುಗಳನ್ನು ಕುರಿತು ಎಲ್ಲಾ ಸರ್ಕಾರಗಳು ಪರಸ್ಪರರೊಂದಿಗೆ ಮಾಡಿಕೊಂಡಿರುವ ಒಪ್ಪಂದ.

* ಮಕ್ಕಳಹಕ್ಕುಗಳ ಒಡಂಬಡಿಕೆಯು ಮುಖ್ಯವಾಗಿ 54 ಪರಿಚ್ಛೇದಗಳು ಮತ್ತು 10 ಅಧ್ಯಾಯಗಳನ್ನು ಒಳಗೊಂಡಿದೆ.

## ಮಕ್ಕಳಹಕ್ಕುಗಳ ಒಡಂಬಡಿಕೆಯ 5 ಪ್ರಮುಖ ಅಂಶಗಳು ;-

1) ಪ್ರತಿಯೊಂದು ಮಗುವಿಗೆ ದೈಹಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಗೆ ಅವಕಾಶ.

2) ಹಸಿವಿನಿಂದ ಬಳಲುವ ಮಗುವಿಗೆ ಆಹಾರ, ಅನಾರೋಗ್ಯಗೊಂಡ ಮಗುವಿಗೆ ಚಿಕಿತ್ಸೆ ಹಿಂದುಳಿದ ಮಗುವಿಗೆ ಸಹಾಯ ಮಾಡುವುದು, ತಪ್ಪು ಮಾಡಿದ ಮಕ್ಕಳನ್ನು ಸನ್ಮಾರ್ಗಕ್ಕೆ ತರುವುದು, ತಿರಸ್ಕೃತ ಅಥವಾ ಅನಾಥಮಕ್ಕಳಿಗೆ ರಕ್ಷಣೆ ನೀಡವುದು.

3) ನೈಸರ್ಗಿಕ ದುರಂತಗಳು ಅಥವಾ ಯುದ್ಧ ಸಂಭವಿಸಿದಾಗ ಎಲ್ಲರಿಗಿಂತ ಮೊದಲು ಮಕ್ಕಳಿಗೆ ರಕ್ಷಣೆ ನೀಡಬೇಕು.

4) ಮಕ್ಕಳನ್ನು ಎಲ್ಲಾ ರೀತಿಯ ಶೋಷಣೆಗಳಿಂದ ರಕ್ಷಿಸಬೇಕು ಮತ್ತು ಎಲ್ಲಾ ಮಕ್ಕಳಿಗೂ ರಕ್ಷಣೆ ಜೊತೆಗೆ ಶಿಕ್ಷಣ ದೊರೆಯಬೇಕು.

5) ಪ್ರತಿಯೊಂದು ಮಗುವೂ ತನ್ನ ಬುದ್ಧಿಶಕ್ತಿ ಕೌಶಲ್ಯಗಳನ್ನು ತನ್ನ ಸಹವರ್ತಿಗಳ ಶ್ರೇಯೋಭಿವೃದ್ಧಿಗಾಗಿ ಬಳಸಬೇಕೆಂಬ ಪ್ರಶ್ನೆಯೊಡನೆ ಬೆಳೆಯಬೇಕು.

ಮಕ್ಕಳ ದಿನಾಚರಣೆ ಬಗ್ಗೆ ಒಂದಷ್ಟು ವಿಶೇಷ ಮಾಹಿತಿ:-

## ವಿಶ್ವಮಕ್ಕಳದಿನಾಚರಣೆ:

* 1954 ರಲ್ಲಿ ಸ್ಥಾಪಿಸಲಾದ ವಿಶಸಂಸ್ಥೆಯು ವಿಶ್ವಮಕ್ಕಳ ದಿನವನ್ನು ಪ್ರತಿವರ್ಷ ಸಪ್ಟೆಂಬರ್ 20 ರಂದು ವಿಶ್ವದಾದ್ಯಂತ ಆಚರಿಸಲು ತಿಳಿಸಿದೆ.

* ಇದರ ಮುಖ್ಯಗುರಿ : ಪ್ರಪಂಚದಾದ್ಯಂತ ಎಲ್ಲರೂ ಒಗ್ಗಟ್ಟಿನಿಂದ ಯಾವುದೇ ಮೂಲೆಮೂಲೆಯಲ್ಲಿನ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ತಿಳಿದು ಅದರ ಕುರಿತು ಪ್ರತಿಯೊಬ್ಬರಲ್ಲೂ ಅರಿವು ಮೂಡಿಸುವುದು.

* ಇತರೆ ಗುರಿಗಳು-

1) ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ಅಗತ್ಯ ವಿರುವ ಆಹಾರವನ್ನು ಬಾಲ್ಯದಲ್ಲಿಯೇ ನೀಡಬೇಕು.

2) ಹಸಿದ ಮಗುವಿಗೆ ಆಹಾರ ಅನಾರೋಗ್ಯದಿಂದ ಬಳಲುತ್ತಿರುವ ಮಗುವಿಗೆ ಸರಿಯಾದ ಚಿಕಿತ್ಸೆ ತಪ್ಪುಮಾಡಿದಾಗ ತಿದ್ದುವುದು ಅನಾಥಮಕ್ಕಳಿಗೆ ಆಶ್ರಯ ನೀಡುವುದು.

3) ಮಕ್ಕಳಪ್ರತಿಭೆಯನ್ನು ಗುರುತಿಸಿಅವರಿಗೆ ಸೂಕ್ತ ಅವಕಾಶವನ್ನು ಕಲ್ಪಿಸುವುದು.

## ಭಾರತದಲ್ಲಿಮಕ್ಕಳದಿನಾಚರಣೆ :-

*ಭಾರತದಲ್ಲಿ ಪ್ರತಿವರ್ಷ ನವ್ಹೆಂಬರ 14 ರಂದು ಮಕ್ಕಳದಿನಾಚರಣೆ ಆಚರಣೆ ಮಾಡಲಾಗುತ್ತದೆ.

## ಮುಖ್ಯಉದ್ದೇಶ:

ಮಕ್ಕಳಹಕ್ಕುಗಳು, ಆರೈಕೆ ಮತ್ತು ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುವುದು ಈ ದಿನಾಚರಣೆಯ ಮೂಲ ಉದ್ದೇಶ.

ಹಿನ್ನಲೆ:ವಿಶ್ವಸಂಸ್ಥೆಯ ಪ್ರಕಾರ ಭಾರತದಲ್ಲಿಯೂ ಮೊದಲಿಗೆ ನವೆಂಬರ್ 20 ರಂದು ಮಕ್ಕಳದಿನಾಚರಣೆ ಆಚರಣೆ ಮಾಡಲಾಗುತ್ತಿತ್ತು ಆದರೆ ಪಂಡಿತಜವಾಹರಲಾಲನೆಹರೂ ಅವರ ಮರಣದ ನಂತರ ಅವರ ಜನ್ಮದಿನದ ಸವಿನೆನಪಿಗೆ ನವೆಂಬರ್ 14 ರಂದು ಭಾರತದಲ್ಲಿ ಮಕ್ಕಳದಿನಾಚರಣೆ ಆಚರಿಸಲಾಗುತ್ತಿದೆ. ಮಕ್ಕಳ ನೆಚ್ಚಿನ ಚಾಚಾಪಂಡಿತಜವಾಹರಲಾಲನೆಹರೂ ಅವರು ಮಕ್ಕಳಿಗೆ ಯಾವಾಗಲೂ **"Tommarrow is yours"** ಎಂದು ಹೇಳುತ್ತಿದ್ದರು ಇದರರ್ಥ "ನಾಳೆನಿಮ್ಮದು" ಎಂದು.

## ಉಪಸಂಹಾರ :

ಮಕ್ಕಳ ಸುರಕ್ಷತಾ ಸಮಿತಿಯ ಸ್ಥಾಪನೆ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ಸಮಸ್ಯೆ ಪರಿಹಾರಗಳು ಸಾಮಾನ್ಯ ಕಾರ್ಯತಂತ್ರಗಳಾಗಿದ್ದಂತೆ, ಇವುಗಳ ಜೊತೆಗೆ ಸಂಸ್ಥೆಗಳು ಸ್ವಯಂ ಕೆಲವು ನಿಯಮಗಳನ್ನು ಅನುಸರಿಸಬಹುದೆಂದು ನನ್ನ ಅನಿಸಿಕೆ - ಮುಖ್ಯವಾಗಿ :

1) ಒಂದು ಸಂಸ್ಥೆಯ ಅಧ್ಯಾಪಕರು ಮತ್ತು ಉದ್ಯೋಗಿಗಳಿಗೆ ಶಂಕಿತ ದುರುಪಯೋಗದ ಚಿಹ್ನೆಗಳನ್ನು ಗುರುತಿಸಲು ಮತ್ತು ಪ್ರತಿಕ್ರಿಯಿಸಲು ಸೂಕ್ತತರಬೇತಿ ಕೊಡುವುದು.
2) ಪಠ್ಯ ಕ್ರಮಗಳೊಡನೆ ಸಮೀಕರಿಸಿ, ಮಕ್ಕಳಿಗೆ ಸುರಕ್ಷತೆಯ ಬಗ್ಗೆ ಸೂಕ್ತ ಪಾಠ ನೀಡುವುದು.
3) ಮಕ್ಕಳ ರಕ್ಷಣಾ ಸಮಿತಿಯ ಬಗ್ಗೆ ಪೋಷಕರು ಮತ್ತು ವಿದ್ಯಾರ್ಥಿಗಳಿಗೆ ಉತ್ತಮ ಮಾಹಿತಿ ನೀಡುವುದು.
4) ನೇಮಕ ಮಾಡಿಕೊಳ್ಳುವ ಪೂರ್ವದಲ್ಲಿ ಶಿಕ್ಷಕರು, ಚಾಲಕರು, ಮತ್ತು ಸಿಬ್ಬಂದಿಗಳ ಪೂರ್ವಾಪರ ಹಾಗೂ ಹಿನ್ನೆಲೆ ವಿವರ ಪಡೆಯಬೇಕು.
5) ವಯಸ್ಕರು ಮತ್ತು ಮಕ್ಕಳ ನಡುವಿನ ಪರಸ್ಪರ ಕ್ರಿಯೆಗಳಿಗೆ ಮಾರ್ಗದರ್ಶನ ನೀಡುವ ಮೂಲಕ ಮಕ್ಕಳಿಗೆ ಜಾಗೃತಿ ಮೂಡಿಸುವುದು.

ಇಂದು ಎಲ್ಲಾ ನಿಯಮ - ಕಾಯ್ದೆಗಳೂ ಮಕ್ಕಳ ಹಕ್ಕು ರಕ್ಷಣೆ ಮಾಡುವತ್ತ ಗಮನಹರಿಸುತ್ತಿರುವುದೇನೋ ನಿಜ. ಆದರೆ ಪೋಕ್ಸೋ ದಂತಹ ಕಾಯ್ದೆಗಳ ದುರುಪಯೋಗ ಕೂಡಾ ಆಗುತ್ತಿದೆ. ಇದು ಕೆಲವಡೆ ದ್ವೇಷ ಘರ್ಷಣೆಗಳತ್ತಲ್ಲೂ ಸಮುದಾಯವನ್ನು ಎಳೆಯುವ ಸಂದರ್ಭಗಳಿವೆ. ಆದ್ದರಿಂದ, ಇದರ ಕುರಿತಾದ ಜಾಗೃತಿಯೂ ಅಗತ್ಯ ಹಾಗೇ ಇಂದು ಕಳವಳಕಾರಿಯಾದ ಮತ್ತೊಂದು ವಿಷಯವೆಂದರೆ ಸೈಬರ್ ಅಸುರಕ್ಷತೆ ಹಾಗೂ ದೌರ್ಜನ್ಯ ಹೆಚ್ಚಾಗಿರುವುದು.ಇದರಲ್ಲಿ ಸಿಲುಕಿರುವ ಮಕ್ಕಳು ಓದುವ ಅಥವಾ ಜ್ಞಾನಾರ್ಜನೆ ಮಾಡುವ ಬದಲು ಇಂಟರ್ನೆಟ್ ಮೋಹದಿಂದ ಅಡ್ಡದಾರಿ ಹಿಡಿಯುತ್ತಿರುವರು.ತಮ್ಮ ಸಹಪಾಠಿಗಳೊಡನೆ ಅಥವಾ ಮೋಬೈಲ್ ಗಳ ಮೂಲಕ ಪರಿಚಿತರಾಗುವ ಅಪರಿಚಿತರೊಡನೆ ಅನಗತ್ಯ ಚರ್ಚೆ ಮೇಸೆಜಿಂಗ್ ಅಥವಾ ವೈಯಕ್ತಿಕ ಸಂಗತಿಗಳ ಹಂಚಿಕೆಯಿಂದ ಅಪಾಯಕ್ಕೊಳಗಾಗುತ್ತಿದ್ದಾರೆ.ಪಾಲಕರು ಕೂಡಾ ಮಕ್ಕಳಿಗೆ ಈ ಸೌಲಭ್ಯಗಳನ್ನು ನೀಡುವುದರ ಜೊತೆಗೆ, ಅವರ ಕಾರ್ಯ, ಚಲನ-ವಲನ ಗಳ ಬಗ್ಗೆಯೂ ನಿಗಾ ವಹಿಸಬೇಕಾಗಿದೆ. ಇಲ್ಲದಿದ್ದಲ್ಲಿ ನಮ್ಮ ಭಾವೀ ಸಂಸ್ಕೃತಿಯು ನೈತಿಕ ಅಧ:ಪತನ ವಾಗುವುದನ್ನು ಯಾವ ಸಮಿತಿಯಾಗಲೀ ಕಾಯ್ದೆಯಾಗಲೀ ತಡೆಯಲಾಗುವುದಿಲ್ಲ. ಈ ಅಪಾಯದ ಜೊತೆಯಲ್ಲಿ ಶಾಲಾ –ಕಾಲೇಜುಗಳ ಪರಿಸರದಲ್ಲಿ ಡ್ರಗ್ಸ್ ಮಾಫಿಯಾ ನಿರಂತರವಾಗಿ ಕಾರ್ಯೋನ್ಮುಖವಾಗಿರುವುದು ನಮ್ಮ ವ್ಯವಸ್ಥೆಯ ವೈಫಲ್ಯವೇ ಹೌದು . ಇಂತಹ ನೂರಾರು ವಿಧ್ಯಮಾನಗಳ ನಡುವೆ ಮಕ್ಕಳ ಸುರಕ್ಷತೆ ಎಷ್ಟರ ಮಟ್ಟಿಗೆ ಸಾಧ್ಯವೆಂದು ಚಿಂತಿಸಬೇಕು. ಇಂತಹ ಅಪಾಯಗಳಿಂದ ಮಕ್ಕಳನ್ನು ಸುರಕ್ಷಿತವಾಗಿಸಲು ನಾವು ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವದೊಂದೇ ಸದ್ಯದ ಪರಿಹಾರ ಮಾರ್ಗವಾಗಿದೆ.

## 4. ಮಕ್ಕಳ ಸುರಕ್ಷತೆಯ ವಿಧಗಳು.

## ಶಾಲೆ ಸಮುದಾಯ ಕುಟುಂಬಗಳಲ್ಲಿ ಮಕ್ಕಳಸುರಕ್ಷತೆ :

ಶಿಕ್ಷಕರಿಗೆ ಮಕ್ಕಳಲ್ಲಿ ಮೌಲ್ಯಗಳನ್ನು ರೂಢಿಸಲು ಸಾಧ್ಯವಾಗದಿರಲು ನಾನಾ ರೀತಿಯ ಕಾರಣಗಳು ಇರಬಹುದು. ಈ ಕಾರಣಗಳನ್ನು ನಿವಾರಿಸಲು ಶಿಕ್ಷಕರು,ಸಮಾಜ,ಪಾಲಕರು ಹಾಗು ಸರಕಾರ ಸೂಕ್ತ ಕ್ರಮಕೈಗೊಳ್ಳಬೇಕು .ಮಕ್ಕಳಸ್ವಭಾವವನ್ನು ಶಿಕ್ಷಕರು ಅರ್ಥಮಾಡಿಕೊಳ್ಳಬೇಕು. ಶಿಕ್ಷಕರು ಯಾವುದನ್ನು ಮಾಡಬಾರದು ಅನ್ನುತ್ತಾರೋ ಅಂತಹ ವಿಷಯದ ಕುರಿತು ಮಕ್ಕಳ ಆಸಕ್ತಿ ಹೆಚ್ಚಾಗುತ್ತದೆ .ಮಕ್ಕಳಿಗೆ ಅದರ ಕುರಿತು ಒಂದು ಧೋರಣೆ ಇಲ್ಲವಾದಕಾರಣ ತಪ್ಪು ಮಾಡುತ್ತವೆ.ಆದರೆ ಅವರದೋರಣೆ ಬದಲಾದಾಗ ಅವರು ಶಿಕ್ಷಕರು ಹೇಳುವ ಮಾತು ನಿಜ ಎಂದು ಒಪ್ಪಿಕೊಳ್ಳುವರು. ಶಿಕ್ಷಕರು ಮೌಲ್ಯಯುತ ಮನೋಧರ್ಮ ಬೆಳೆಸಿಕೊಂಡಾಗಲೇ ಮೌಲ್ಯಯುತ ಮಕ್ಕಳನ್ನು ಸೃಷ್ಟಿಸಲುಸಾಧ್ಯ. ಶಾಲೆಯಲ್ಲಿ ಕೆಲವು ಮಕ್ಕಳಿಂದ ಕಿರಿಕಿರಿ ಅಥವಾ ಮಾನಸಿಕ ಹಿಂಸೆ ಉಂಟಾದಲ್ಲಿ ಅಂತಹ ಮಕ್ಕಳನ್ನು ಕಡೆಗಣಿಸದೆ ಆಮಕ್ಕಳನ್ನು ಪ್ರೀತಿಸಬೇಕು. ಇದು ಶಿಕ್ಷಕರು ತೋರಿಸುವ ಉತ್ತಮ ಉದಾತ್ತಮೌಲ್ಯ. ಇನ್ನು ಮಕ್ಕಳಸುರಕ್ಷತೆ ಶಾಲಾಉಸ್ತುವಾರಿ ಸಮಿತಿಯ ವರ ಜವಾಬ್ದಾರಿಯೂ ಆಗಿದೆ. ಸಮುದಾಯದ ವ್ಯಕ್ತಿಗಳ ಸಂಪರ್ಕದಲ್ಲಿ ಶಾಲಾಮಕ್ಕಳು ಬರುವದರಿಂದ ಅವರು ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಳ್ಳುತ್ತಾರೆ. ಗ್ರಾಮದ ಜಾತ್ರೆ ಇನ್ನಿತರ ಸಭೆಸಮಾರಂಭಗಳಲ್ಲಿ ಶಾಲಾಮಕ್ಕಳನ್ನು ಬಳಸಿಕೊಳ್ಳುತ್ತಾರೆ. ಈ ಎಲ್ಲಾ ಅಂಶಗಳು ಶಾಲಾಮಕ್ಕಳನ್ನು ಅಸುರಕ್ಷತೆ ಮತ್ತು ಮೌಲ್ಯಹೀನ ಸಮಾಜ ನಿರ್ಮಾಣದತ್ತ ಕೊಂಡೊಯ್ಯುತ್ತಿವೆ.

## ಸುರಕ್ಷತಾಕ್ರಮಗಳು :

• ಮಗುವಿನ ಪಾಲಕರು ಮಗುತನ್ನ ಸುರಕ್ಷತೆ ಹೇಗೆ ಮಾಡಿಕೊಳ್ಳಬೇಕು ಎಂದು ಕಲಿಸುವ ನಿಜವಾದ ಶಿಕ್ಷಕರು.

• ಮಗುತನ್ನ ನಿಜವಾದ ನೈತಿಕ ನೆಲೆಗಟ್ಟಿನಲ್ಲಿ ಬೆಳೆಯಲು ಸುರಕ್ಷತೆಯ ಕೌಶಲ್ಯಗಳನ್ನು ಪಾಲಕರು ತಿಳಿಸಬೇಕು.

• ಮಗುವಿನ ಪ್ರತಿಬೆಳವಣಿಗೆಯ ವಿವಿಧ ಹಂತಗಳಲ್ಲಿ ಶೈಕ್ಷಣಿಕವಾಗಿ ವಯೋಮಾನಕ್ಕೆ ಅನುಗುಣವಾಗಿ ಸಾಮರ್ಥ್ಯ ಪಡೆಯಲು ಉತ್ತಮ ಶಿಕ್ಷಕರು ಪಾಲಕರಿಗಿಂತ ಬೇರೆ ಯಾರೂ ಇಲ್ಲ.

• ಮಗುವಿನ ಮಾತನ್ನು ಆಲಿಸಿ ಬೇಡಿಕೆ ಏನು ಮಗುವಿಗೆ ಯಾವುದೇ ರೀತಿ ಮಾನಸಿಕ ಒತ್ತಡ ಹೇರದೆ ಯೋಗ್ಯ ಮಾರ್ಗದರ್ಶನ ನೀಡುವವರೇ ಪಾಲಕರು.

• ಮುಂದುವರೆದ ಸಮಾಜದ ನಡತೆಯಂತೆ ತಂದೆತಾಯಿಗೆ ಬೇರೊಂದು ಮಲಗುವ ಕೋಣೆ ಮಕ್ಕಳಿಗೊಂದು ಮಲಗುವಕೋಣೆ ಈ ಸಂಗತಿಗಳು ಮಗುವಿನ ಏಕಾಂಗಿತನ ಹಾಗೂ ದುರ್ವ್ಯಸನಕ್ಕೆ ಕಾರಣವಾಗಬಹುದು.

• ಮಕ್ಕಳ ಪ್ರತಿನಡವಳಿಕೆ ಮತ್ತು ಚಲನವಲನಗಳ ಮೇಲೆ ಪಾಲಕರು ಗಮನ ವಿಡಬೇಕು.

• ಅವಿಭಕ್ತಕುಟುಂಬಗಳಲ್ಲಿ ಪರಸ್ಪರರಲ್ಲಿ ಪ್ರೀತಿವಿಶ್ವಾಸ ಆತ್ಮೀಯತೆ ಹಾಗೂ ಕಾಳಜಿ ಪ್ರವೃತ್ತಿಗಳು ಬೆಳೆಯುತ್ತವೆ.

• ಮಗುವಿನ ನೆರೆಹೊರೆಯುವರು ಯಾರು ಅಥವಾ ಆಕೆ ಯಾರ ಜೊತೆ ಸುರಕ್ಷಿತರು ಇದರ ಅರಿವು ಪಾಲಕರಿಗೆ ಇರಬೇಕು.

• ಪಾಲಕರು ತಮ್ಮಮಕ್ಕಳನ್ನುಮಾರುಕಟ್ಟೆ, ನಿಲ್ದಾಣ, ರೈಲುನಿಲ್ದಾಣ ಅಥವಾ ಸಭೆಸಮಾರಂಭಗಳಲ್ಲಿ ಏಕಾಂಗಿಯಾಗಿ ಬಿಡಬಾರದು.

• ಹೆಣ್ಣುಮಗುವಿಗೆ ಯಾರಾದರೂ ಯುವಕರು ಅಥವಾ ಯಾವುದೇ ಪ್ರೌಢವ್ಯಕ್ತಿಗಳು ಸಹಾಯ ಮಾಡುವ ನೆಪಮಾಡಿ ಕರೆದರೆ ಅಂತಹ ವ್ಯಕ್ತಿಗಳಿಂದ ಜಾಗೃತರಾಗಿರಲು ಸಲಹೆ ನೀಡುವುದು.

• ಶಾಲೆಯಲ್ಲಿ ಮಕ್ಕಳ ಚಲನವಲನದ ಮೇಲೆ ನಿಗಾ ಇಡಲು ಸಿಸಿಟಿವಿ ಅಳವಡಿಸುವುದು ಹಾಗೂ ಶಾಲಾ ಆವರಣದಲ್ಲಿ ಅನ್ಯವ್ಯಕ್ತಿಗಳು ಬರದಂತೆ ನೋಡಿಕೊಳ್ಳುವುದು.

• ಕ್ರೀಡಾಕೂಟಗಳ ಸಂದರ್ಭದಲ್ಲಿ ಶಾಲಾ ಆವರಣದಲ್ಲಿ ಅನ್ಯವ್ಯಕ್ತಿಗಳ ಪ್ರವೇಶ ವಿರಕೂಡದು ಹಾಗೂ ಸುರಕ್ಷತೆಗೆ ಪ್ರಥಮ ಚಿಕಿತ್ಸೆಪೆಟ್ಟಿಗೆಇರಲಿ.

• ತುರ್ತುಪರಿಸ್ಥಿತಿ ಅಥವಾ ಅನಾರೋಗ್ಯದಿಂದ ಬಳಲುವ ವಿದ್ಯಾರ್ಥಿಗಳಿಗಾಗಿ ಸ್ಥಳೀಯ ವೈದ್ಯಕೀಯ ಸಿಬ್ಬಂದಿಯ ಸಂಪರ್ಕವಿರಲಿ.

• ಶಾಲಾ ಆವರಣದಲ್ಲಿ ಯಾವುದೇ ಗಲಭೆ ಅಥವಾ ಸಮಸ್ಯೆ ಉಂಟಾದಲ್ಲಿ ಸ್ಥಳೀಯ ಪೊಲೀಸರ ಸಂಪರ್ಕ ಇಟ್ಟುಕೊಳ್ಳುವುದು ಉತ್ತಮ.

• ಶಾಲೆಯ ಸಮಸ್ತ ಸಿಬ್ಬಂದಿಗೆ ಬ್ಯಾಡ್ವಚ್ಚಗ್ಗೆ ತಿಳುವಳಿಕೆ ಇರುವುದು.

• ಶಾಲೆಯಲ್ಲಿ ವಿದ್ಯಾರ್ಥಿಗಳಿಗಾಗಿ ದೂರುಪೆಟ್ಟಿಗೆ ನಿರ್ವಹಿಸುವುದು.

## ಚಟುವಟಿಕೆ.

| ಗುಂಪು | ಸಮಸ್ಯೆಯನ್ನುಗುರುತಿಸುವಿಕೆ | ಯಾವ ರೀತಿಯಾಗಿ ವೈಯಕ್ತಿಕ ಅಧ್ಯಯನ ಕೈಗೊಳ್ಳುವಿರಿ | ಸೂಚಿಸುವ ಪರಿಹಾರಗಳು |
|---|---|---|---|
| 1 | | | |
| 2 | | | |
| 3 | | | |
| 4 | | | |

1) ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪಟ್ಟಿಮಾಡಿ, 2) ವೈಯಕ್ತಿಕ ಅಧ್ಯಯನ ಹೇಗೆ ಮಾಡುವಿರಿ,

3) ಸೂಚಿಸಿದ ಪರಿಹಾರಗಳನ್ನು ಪಟ್ಟಿ ಮಾಡಿರಿ. 4) ಗುಂಪು ಸಮಸ್ಯೆಯನ್ನು ಗುರುತಿಸುವಿಕೆ

5) ಯಾವ ರೀತಿಯಾಗಿ ವೈಯಕ್ತಿಕ ಅಧ್ಯಯನ ಕೈಗೊಳ್ಳುವಿರಿ 6) ಸೂಚಿಸುವ ಪರಿಹಾರಗಳು

### ಪರಿಚಿತ ಮತ್ತು ಅಪರಿಚಿತರಿಂದ ಅಪಾಯ

ಪರಿಚಿತ ಶಬ್ದದ ಅರ್ಥ:- ರಕ್ತಸಂಬಂಧ ಅಥವಾ ನಿತ್ಯಜೀವನದಲ್ಲಿ ಸಂಪರ್ಕದಲ್ಲಿ ಬರುವವ್ಯಕ್ತಿಗಳು ಪರಿಚಿತರು.

ಅಪರಿಚಿತ ಶಬ್ದದ ಅರ್ಥ: ಅಪರಿಚಿತ ಎಂದರೆ ಪರಿಚಯವಿಲ್ಲದ ವ್ಯಕ್ತಿಗಳು.

* ಅಪರಿಚಿತರೊಡನೆ ಸ್ನೇಹಸಂಪರ್ಕ ಬೆಳೆಸುವಾಗ ಎಚ್ಚರಿಕೆವಹಿಸುವ ಅಗತ್ಯತೆ ಅರಿಯುವುದು.
* ಪರಿಚಿತರ ಮತ್ತು ಅಪರಿಚಿತರ ವರ್ತನೆ ಗಮನಿಸಿ ವ್ಯವಹರಿಸುವುದನ್ನು ಅರಿಯುವುದು.
* ಸಮೂಹಮಾಧ್ಯಮಗಳಲ್ಲಿ ಸ್ನೇಹಬೆಳೆಸುವಾಗ ಜಾಗೃತಿವಹಿಸುವುದನ್ನು ಅರಿಯುವರು.

### ಚಟುವಟಿಕೆ

ಗುಂಪುಚಟುವಟಿಕೆ

1) ಪರಿಚಿತ ರಿಂದ ಎದುರಾದ ಸಮಸ್ಯೆಗಳನ್ನು ವೈಯಕ್ತಿಕ ಅಧ್ಯಯನ ದಿಂದ ಪಟ್ಟಿ ಮಾಡುವುದು ಮತ್ತು ಪರಿಹಾರ ಸೂಚಿಸುವುದು.
2) ಅಪರಿಚಿತ ರಿಂದ ಎದುರಾದ ಸಮಸ್ಯೆಗಳನ್ನು ವೈಯಕ್ತಿಕ ಅಧ್ಯಯನ ದಿಂದ ಪಟ್ಟಿಮಾಡುವುದು ಮತ್ತು ಪರಿಹಾರ ಸೂಚಿಸುವುದು

## ಮನೋದೈಹಿಕ ಸುರಕ್ಷತೆ

• ಶಾಲಾವಾತಾವರಣದಲ್ಲಿ ಎಲ್ಲ ಚಟುವಟಿಕೆಗಳನ್ನು ಮಕ್ಕಳಮಾನಸಿಕ ಸುರಕ್ಷತೆ ಗಮನದಲ್ಲಿಟ್ಟುಕೊಂಡು ಆಯೋಜಿಸುವುದು.

• ಮಗು ಆಲಿಸುವ ಭಾಷೆ ಮಗುವಿನ ಮಟ್ಟಕ್ಕೆ ನಿಲುಕುವಂಥಹದಾಗಿರಬೇಕು.

• ಪ್ರತಿಯೊಬ್ಬರೂ ಪ್ರತಿಮಗುವನ್ನು ಆಪ್ತದೃಷ್ಟಿಯಿಂದಲೇ ಗಮನಿಸಬೇಕು.

• ಮಕ್ಕಳ ಅಭಿವ್ಯಕ್ತಿ ಸ್ವಾತಂತ್ರದ ರಕ್ಷಣೆಯಾಗಬೇಕು.

• ಶಾಲೆಯ ಯಾವೂದೇ ಮಕ್ಕಳನ್ನುಪರಸ್ಪರ ಹೋಲಿಕೆ ಮಾಡಿ ನಿಂದಿಸುವಂತಿಲ್ಲಾ.

• ಪಾಲಕರು ಮತ್ತು ಶಿಕ್ಷಕರು ಮಕ್ಕಳನ್ನು ಹೆಚ್ಚು ಆಲಿಸಬೇಕು.

• ಮಕ್ಕಳ ನಿರ್ದಾರಗಳನ್ನು ಗೌರವಿಸಿ ಅನುಷ್ಠಾನಗೊಳಿಸುವ ಮನೋಭಾವನೆ ಅವಶ್ಯಕ.

• ತರಗತಿ ಕೋಣೆಗಳಲ್ಲಿ ಕಲಿಕೆಯು ಒತ್ತಡರಹಿತ ಹಿಂಸಾರಹಿತವಾದಾಗ ಶಿಕ್ಷಕ ಮತ್ತು ಮಕ್ಕಳ ನಡುವಿನ ಬಾಂಧವ್ಯ ಉತ್ತಮಗೊಳ್ಳುತ್ತದೆ. ಇದರಿಂದ ಶಾಲೆಗಳಲ್ಲಿ ಸಾಮಾಜಿಕ ಮತ್ತು ಭಾವನಾತ್ಮಕ ಸುರಕ್ಷತೆಗಳು ಅಭಿವೃದ್ಧಿಗೊಳ್ಳುತ್ತವೆ.

•ಎನ್‌ಈಪಿ 2020 ರ ಅಡಿ ನಿರ್ದೇಶಿಸಲಾದ ಗುಂಪು ಕೌನ್ಸಲಿಂಗ ಮತ್ತು ಮಾರ್ಗದರ್ಶನವನ್ನು ಆನ್ಲೈನ ಮುಖಾಂತರ ನೀಡಲಾಗುವುದು. ಯಾವುದೇ ಮಕ್ಕಳುಕೌನ್ಸಲಿಂಗ್ಬಯಸಿದಲ್ಲಿ ಅವರು ಮಿನಿಸ್ಟರಿ ಆಫ್ ಎಜುಕೇಶನ್ ಅವರಿಂದ ಸಲಹೆ ಪಡೆಯಬಹುದು.ಅವರು ರಾಷ್ಟ್ರೀಯಟೋಲ್ಫ್ರೀನಂಬರ್ 8448440632 ಗೆ ಕರೆ ಮಾಡಿಸಹಾಯಪಡೆಯಬಹುದು.

**ಚಟುವಟಿಕೆ:**

ಒಬ್ಬ ವ್ಯಕ್ತಿಯಲ್ಲಿರಬೇಕಾದ ಗುಣಗಳನ್ನು ಪಟ್ಟಿಮಾಡಿರಿ. ( ಉದಾ: ತಾಳ್ಮೆ, ಧರ್ಯ, ನಿರ್ಣಯಶಕ್ತಿ, ಸದಾಹಸನ್ಮುಖಿ, ಸದಾ ಸಹಕಾರ ಮನೋಭಾವನೆ.) ಇವುಗಳನ್ನು ಗುಂಪಿನಲ್ಲಿ ನೀಡಿ ಅದರ ಕುರಿತು ವಿಷಯ ಸಂಗ್ರಹಿಸಿ ಮಂಡನೆ ಮಾಡಲು ತಿಳಿಸುವುದು.

| ಗುಂಪು | **ಆದರ್ಶಗುಣಗಳು** | **ಆದರ್ಶಗುಣಗಳನ್ನುಹೊಂದಲುಅನುಸರಿಸಿದವರ್ತನೆ.** | |
|---|---|---|---|
| **1** | | | |
| **2** | | | |
| **3** | | | |
| **4** | | | |

**ಮಕ್ಕಳ ಕುರಿತಾದ ನನ್ನ ಭಾವನೆಗಳು ಯಾವಾಗಲೂ ಪರಿಶುದ್ಧವಾಗಿವೆ.**

## ೫. ಮಕ್ಕಳ ಸುರಕ್ಷತೆ ಎಲ್ಲಿ

ಮಕ್ಕಳ ಸಂರಕ್ಷಣೆ ಎಂಬ ಕಲ್ಪನೆಯು ಒಂದು ಸಮರ್ಥ ಮತ್ತು ಸಬಲಗೊಳ್ಳುವಿಕೆಯ ಪ್ರಕ್ರಿಯೆಯಾಗಿದೆ. ಮಕ್ಕಳು ತಮ್ಮ ಜೀವನದ ಮೇಲೆ ಅಪಾಯವನ್ನು ಬೀರುವ ಎಲ್ಲಾ ವಿಷಯಗಳು ಮತ್ತು ಸಂಬಂಧಿಸಿದ ಸುರಕ್ಷತಾ ಕ್ರಮಗಳನ್ನು ಮಗುವು ತಿಳಿದು ಕಾಳಜಿ ವಹಿಸಲು ಸಮರ್ಥರನ್ನಾಗಿ ಮಾಡುವುದು, ಇಂದಿನ ಅಗತ್ಯವಾಗಿದೆ. ಪ್ರತಿಯೊಂದು ಮಗುವಿನ ಬಾಲ್ಯವು ಅಮೂಲ್ಯವಾದದ್ದು .ಪ್ರತಿ ಮಗುವು ಪ್ರತಿ ಕ್ಷಣದಲ್ಲಿಯೂ ಸುರಕ್ಷಿತ ಮತ್ತು ರಕ್ಷಣಾತ್ಮಕ, ಸಶಕ್ತ ಪರಿಸರದಲ್ಲಿ ಬೆಳೆಯಬೇಕು ಆದರೆ ಮಕ್ಕಳಿಗೆ ತಮ್ಮೊಂದಿಗೆ ಘಟಿಸುವ ಅಪಾಯಗಳ ಕುರಿತು ಸುರಕ್ಷತೆಯ ಕುರಿತು ಅರಿವು ಕಡಿಮೆ ಇರುತ್ತದೆ. ಕೆಲವೊಮ್ಮೆ ಮಕ್ಕಳು ನೀರು, ರಸ್ತೆ, ಬೆಂಕಿ, ಮಳೆಯಿಂದಾಗಿ ತೊಂದರೆಗೊಳಗಾಗಿ ಜೀವಕ್ಕೆ ಹಾನಿ ಉಂಟುಮಾಡಿ ಕೊಳ್ಳುತ್ತಾರೆ. ಮಗುವಿನ ಗಮನಕ್ಕೆ ಬಾರದ ಅನೇಕ ಅಚಾತುರ್ಯಗಳಿಂದ ಮಕ್ಕಳಿಗೆ ಅಪಾಯಗಳುಂಟಾಗುತ್ತದೆ.ಆದ್ದರಿಂದ ಮಕ್ಕಳಿಗೆ ಅಪಾಯಕ್ಕೆ ಸಿಲುಕದಂತೆ ಅಪಾಯಗಳ ಮುನ್ಸೂಚನೆಯನ್ನು ಅರಿಯುವಂತೆ ಅಪಾಯಗಳುಂಟಾದಾಗ ಅನುಸರಿಸಬೇಕಾದ ಕ್ರಮಗಳ ಕುರಿತು ಮಗುವಿಗೆ ಸಾಮಾನ್ಯ ತಿಳುವಳಿಕೆ ನೀಡುವದು ಈ ಸಾಹಿತ್ಯದ ಮೂಲ ಉದ್ದೇಶವಾಗಿದೆ ಮಕ್ಕಳ ದೈಹಿಕ ಆರೋಗ್ಯ, ಮಾನಸಿಕ ಆರೋಗ್ಯ ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದ್ದು ಅದಕ್ಕೆ ಅಗತ್ಯವಾದ ಸುರಕ್ಷಿತ ಪರಿಸರವನ್ನು ಒದಗಿಸುವುದು ಕೂಡ ನಮ್ಮದೇ ಕರ್ತವ್ಯವಾಗಿದೆ.

ಈ ಸಾಹಿತ್ಯದಿಂದ ಮಗುವಿನ ಸುರಕ್ಷತೆಯನ್ನು ನಿರ್ವಹಿಸುವಲ್ಲಿ ಪಾಲಕರು ಶಿಕ್ಷಕರು ಮತ್ತು ಸ್ವತಃ ಮಗುವು ಜಾಗೃತಗೊಳುತ್ತದೆ ಎಂಬುವುದು ನಮ್ಮೆಲ್ಲರ ಆಶಯವಾಗಿದೆ.

**School safety has been defined as**
**Creating safe environment for children**
**Starting from their homes to their schools and back.**

ಶಾಲೆಯಲ್ಲಿ ಪ್ರತಿ ಮಗುವು ಸುರಕ್ಷಿತ, ರಕ್ಷಣಾತ್ಮಕ ಮತ್ತು ಸಶಕ್ತ ಪರಿಸರದಲ್ಲಿ ಬೆಳೆಯುವುದು ಅವಶ್ಯಕ.ಶಾಲೆಗಳು ಮಕ್ಕಳಿಕೆ ಶಿಕ್ಷಣ ನೀಡುವುದು ಅದರ ಜವಾಬ್ದಾರಿಯಾಗಿದೆ.ಮಗುವಿನ ರಕ್ಷಣೆಯಲ್ಲಿ ಪೋಷಕರ ಪಾತ್ರದಷ್ಟು ಸರಿ ಸಮಾನ ಜವಾಬ್ದಾರಿಯನ್ನು ಶಾಲೆಯೂ ಹೊಂದಿದೆ.ಮಕ್ಕಳು ತಮ್ಮ ಆರಂಭಿಕ ಜೀವನದ ಬಹುಪಾಲು ಸಮಯವನ್ನು ಶಾಲೆಯಲ್ಲಿಯೇ ಕಳೆಯುವುದರಿಂದ ಮಕ್ಕಳಿಕೆ ರಕ್ಷಣೆ ನೀಡುವಲ್ಲಿ ಅಗತ್ಯವಾದ ಕ್ರಮಗಳನ್ನು ಶಾಲೆಗಳು ಕೈಗೊಳ್ಳಬೇಕು.

**ಶಾಲೆಯಲ್ಲಿ ಸುರಕ್ಷತಾ ಕ್ರಮಗಳು:**

• ಶಾಲೆಯಲ್ಲಿನ ಮಕ್ಕಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಪೋಷಕರಿಂದ ಶಾಲಾ ಅಭಿವೃದ್ಧಿ ಸಮಿತಿಗಳಿಂದ, ಪೋಲಿಸ್ ಇಲಾಖೆಗಳಿಂದ ಅಗತ್ಯವಾದ ಸಲಹೆಗಳನ್ನು ಪಡೆದುಕೊಳ್ಳುವುದು.

• ಶಾಲೆಯಲ್ಲಿ ಮಕ್ಕಳ ಸುರಕ್ಷತೆಗಾಗಿ ಸರ್ಕಾರ, ಶಾಲಾ ಆಡಳಿತ ಸುರಕ್ಷಿತವಾದ ಕಟ್ಟಡ, ನೀರಿನ ಲಭ್ಯತೆ, ವಿದ್ಯುತ್ ಸಂಪರ್ಕ, ಶಾಲಾ ಕಂಪೌಂಡ ನಿರ್ವಹಣೆ ಇವುಗಳ ಕುರಿತು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು.

• ಮಕ್ಕಳ ಸಹಾಯವಾಣಿ ಸಂಖ್ಯೆ 1098 ಪೋಲಿಸ್ ಸಹಾಯವಾಣಿ ಸಂಖ್ಯೆ 100, 112 ಅಗ್ನಿಶಾಮಕ ಸಹಾಯವಾಣಿ ಸಂಖ್ಯೆ 101 ಅಂಬುಲನ್ಸ್ ಸಹಾಯವಾಣಿ ಸಂಖ್ಯೆ 108 ಗಳನ್ನು ಶಾಲೆಯ ಮುಖ್ಯ ಸ್ಥಳದಲ್ಲಿ ಎಲ್ಲ ಮಕ್ಕಳಿಗೆ ಕಾಣುವಂತೆ ದೊಡ್ಡ ಅಕ್ಷರಗಳಲ್ಲಿ ಬಳಸುವುದು.

ಶಾಲಾ ಸುರಕ್ಷತೆಯ ಚಟುವಟಿಕೆಗಳು

1. **ಸಂಭಾಷಣೆ**

ಶಾಲೆಯಲ್ಲಿ ಮಕ್ಕಳ ಸುರಕ್ಷತೆಯ ಕುರಿತು ಪಾಲಕರಿಗೆ ಇರುವ ಸಂಶಯಗಳ ನಿವಾರಣೆಗಾಗಿ ಶಿಕ್ಷಕರು ಶಾಲೆಯಲ್ಲಿ ಮಕ್ಕಳ ಸುರಕ್ಷತೆಗಾಗಿ ಕೈಗೊಂಡಿರುವ ಕ್ರಮಗಳು ಮತ್ತು ಲಭ್ಯವಿರುವ ಪರಿಕರಗಳ ಕುರಿತು ಪಾಲಕರಿಗೆ ಮನವರಿಕೆ ಮಾಡಿ ಕೊಡುವ ಶಿಕ್ಷಕ &ಪಾಲಕರ ನಡುವಿನ ಸಂಭಾಷಣೆಯನ್ನು ಸಿದ್ಧಪಡಿಸಿ ಶಿಭಿರಾರ್ಥಿಗಳಿಗೆ ಅಭಿನಯಿಸಲು ಹೇಳುವುದು.

2. **ತಪಶೀಲು ಪಟ್ಟಿ**

ಶಿಬಿರಾರ್ಥಿಗಳುತಮ್ಮ ಶಾಲೆಯಲ್ಲಿ ಕೈಗೊಂಡಿರುವ ಮಕ್ಕಳ ಸುರಕ್ಷತಾ ಕ್ರಮಗಳ ಕುರಿತು ಈ ಕೆಳಕಂಡ ಅಂಶಗಳ ಚೆಕ್‌ಲಿಸ್ಟ್ ತಯಾರಿಸಿ ಮೌಲ್ಯಮಾಪನ ಮಾಡುವುದು.

1) ಶಾಲಾ ಮಕ್ಕಳ ಸುರಕ್ಷತಾ ಸಮಿತಿಯನ್ನು ರಚಿಸಲಾಗಿದೆಯೇ? ಹೌದು/ಇಲ್ಲಾ

2) ಶಾಲಾ ಸುರಕ್ಷತಾ ಸಮಿತಿಯ ಸಭೆಗಳನ್ನು ಪ್ರತಿ ತಿಂಗಳು ನಡೆಸಲಾಗಿದೆಯೇ? ಹೌದು/ಇಲ್ಲಾ

3) ಮಕ್ಕಳ ರಕ್ಷಣೆಯ ಕುರಿತು ಪಾಲಕರಿಗೆ ಮಾರ್ಗದರ್ಶನ ಮಾಡುವ ಅಸ್ತ ಸಮಾಲೋಚನಾ ಸಭೆಗಳನ್ನು ಪ್ರತಿ ತಿಂಗಳು ನಡೆಸಲಾಗಿದೆಯೇ? ಹೌದು/ಇಲ್ಲಾ

4) ಮಕ್ಕಳ ಹಕ್ಕುಗಳ ಕ್ಲಬ್ ರಚಿಸಲಾಗಿದೆಯೇ? ಹೌದು/ಇಲ್ಲಾ

5) ಶಾಲೆಯಲ್ಲಿ ಮಕ್ಕಳ ಸಲಹಾ ಪೆಟ್ಟಿಗೆ ಮತ್ತು ಸಮಸ್ಯಾ ಪೆಟ್ಟಿಗೆಯನ್ನು ನಿರ್ವಹಣೆ ಮಾಡಿರುವಿರಾ? ಹೌದು/ಇಲ್ಲಾ

6) ಮಕ್ಕಳ ಸಹಾಯವಾಣಿ ಸಂಖ್ಯೆ & ತುರ್ತು ಸಹಾಯವಾಣಿ ಸಂಖ್ಯೆಗಳನ್ನು ಶಾಲೆಯಲ್ಲಿ ಪ್ರವಶೀಸಲಾಗಿದೆಯೇ? ಹೌದು/ಇಲ್ಲಾ

7) ಮಕ್ಕಳ ಲೈಂಗಿಕ ಅಪರಾಧ ಕಾಯ್ದೆಗಳ ಕುರಿತು ಅರಿವು ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆಯೇ? ಹೌದು/ಇಲ್ಲಾ

8) ಪ್ರತಿ ಮಗುವಿನ ವಿಳಾಸ & ಪೋಷಕರ ಮೊಬೈಲ್ ಸಂಖ್ಯೆಗಳ ರಜಿಸ್ಟರನ್ನು ನಿರ್ವಹಿಸಲಾಗಿದೆಯೇ? ಹೌದು/ಇಲ್ಲಾ

## ಅಗ್ನಿ ಅವಘಡಗಳು

ಅಗ್ನಿ ಸುರಕ್ಷತೆಯು ಬೆಂಕಿಯನ್ನು ಅಪಾಯದ ಪರಿಗಣನೆ ಮತ್ತು ತಡೆಗಟ್ಟುವಿಕೆಯನ್ನು ವಿವರಿಸಲು ಬಳಸುವ ಪದವಾಗಿದೆ.ಅನಿಯಂತ್ರಿತ ಬೆಂಕಿಯಿಂದಾಗಿ ಜೀವವನ್ನು ರಕ್ಷಿಸಲು ನಾವು ವಿಶೇಷವಾಗಿ ಶಾಲಾ ವಿದ್ಯಾರ್ಥಿಗಳಿಗೆ ಪಾಲಕರಿಗೆ ಅಗ್ನಿ ಸುರಕ್ಷತೆಯ ಬಗ್ಗೆ ಸುಶಿಕ್ಷಿತರನ್ನಾಗಿ ಮಾಡುವುದು.ಇದಕ್ಕೆ ಜಾಗೃತಿ, ತಡೆಗಟ್ಟುವ ನಿರ್ವಹಣೆ, ಫೈರ್ ಅಲಾರಾಮ್ಗಳನ್ನು ಸ್ಥಾಪಿಸುವುದು ಅತ್ಯಗತ್ಯ ಎಂದು ತಿಳಿಸುವುದು.

### ಮಕ್ಕಳ ಸುರಕ್ಷತೆಗಾಗಿ ಮಾರ್ಗೋಪಾಯಗಳು

1. ಮನೆ, ಶಾಲೆ ಹಾಗೂ ಅಂಗಡಿ ಮತ್ತು ಕೈಗಾರಿಕೆಗಳು ಸಾಮಾನ್ಯವಾಗಿ ಅಗ್ನಿ ಅವಘಡಗಳಿಗೆ ಒಳಗಾಗುವ ಸ್ಥಳಗಳಾಗಿವೆ.

2 .ಮಕ್ಕಳಿಗೆ ಮನೆ ಮತ್ತು ಶಾಲೆಯಲ್ಲಿ ನಡೆಯುವ ಅಗ್ನಿ ಅವಘಡಗಳಿಂದಲೇ ಅಪಾಯ ಹೆಚ್ಚು ಆದ್ದರಿಂದ, ಮಕ್ಕಳನ್ನು ಬೆಂಕಿಯಿಂದ ಆಗುವ ಅನಾಹುತಗಳಿಂದ ರಕ್ಷಿಸಬೇಕಾದರೆ ಮೊದಲು ಮನೆ ಮತ್ತು ಶಾಲೆಗಳಲ್ಲಿ ಸುರಕ್ಷಿತ ಕ್ರಮಗಳಿಗೆ ಆದ್ಯತೆ ನೀಡಬೇಕು.

3. ಅಡುಗೆ ಕಾರ್ಯವು ನಡೆಯುತ್ತಿರುವಾಗ ಮನೆ ಮತ್ತು ಶಾಲೆಯ ಅಡುಗೆ ಕೋಣೆಗಳಲ್ಲಿ ಮಕ್ಕಳು ಪಾಲಕರ ಮತ್ತು ಶಿಕ್ಷಕರ ಅನುಮತಿಯಿಲ್ಲದೆ ಅನಾವಶ್ಯಕವಾಗಿ ಪ್ರವೇಶಿಸಬಾರದು.

4 .ಗ್ಯಾಸ ರೆಗ್ಯುಲೇಟರಗಳನ್ನು ಅಡುಗೆ ಮಾಡಿದ ನಂತರ ಅವಶ್ಯವಾಗಿ ಆಪ್ ಮಾಡಬೇಕು.

5 .ಶಾಲೆ ಬಹುಮಹಡಿ ಕಟ್ಟಡವಾಗಿದ್ದಲ್ಲಿ ತುರ್ತು ನಿರ್ಗಮನ ವ್ಯವಸ್ಥೆ ಮಾಡಬೇಕು. ಅಪಾಯದ ಕರೆಗಂಟೆ ಇರಬೇಕು. ಇದರ ಬಳಕೆ ಎಲ್ಲ ವಿದ್ಯಾರ್ಥಿಗಳಿಗೂ, ಶಿಕ್ಷಕರಿಗೂ, ಅಡುಗೆ ಸಿಬ್ಬಂದಿಗಳಿಗೂ ತಿಳಿಸಿರಬೇಕು.

6 .ವಿಜ್ಞಾನ ಪ್ರಯೋಗಾಲಯದಲ್ಲಿ ಪ್ರಯೋಗ ಮಾಡುವಾಗ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಬೆಂಕಿಯಿಂದ ಅಂತರವನ್ನು ಕಾಯ್ದು ಕೊಳ್ಳುವುದು.

7. ಅಗ್ನಿ ಶಾಮಕದ ನಂಬರಗಳನ್ನು ಮಕ್ಕಳು ತಿಳಿದಿರುವುದು ಅವಶ್ಯಕವಾಗಿದೆ.

8. ಶಾಲೆಯಲ್ಲಿ ಯಾರಾದರೂ ಬೆಂಕಿಯನ್ನು ಗಮನಿಸಿದರೆ ಹೇಗೆ ಪ್ರತಿಕ್ರಿಯಿಸಬೇಕು ಎಂದು ತಿಳಿಸಬೇಕು.

9. ಪ್ರತಿಯೊಂದು ಶಾಲಾ ಕೊಠಡಿಗಳಲ್ಲಿ ಅಗ್ನಿಶಾಮಕವನ್ನು ಅಳವಡಿಸಬೇಕು.

10 .ಗ್ಯಾಸ ಸಿಲಿಂಡರಗಳನ್ನು ತರಗತಿ ಕೋಣೆಗಳಲ್ಲಿ ಇಡುವುದಾಗಲೀ ಸ್ವೀಕರಿಸುವುದಾಗಲಿ,ಅಥವಾ ನೀಡುವುದಾಗಲಿ ಮಾಡಬಾರದೆಂದು ಸೂಚನೆಗಳನ್ನು ನೀಡಲು ತಿಳಿಸಿದೆ.

11. ಪೂಜಾ ಕಾರ್ಯಕ್ರಮಗಳಲ್ಲಿ ಹೋಮ ಹವನಗಳು ನಡೆಯುವ ಕಾರ್ಯಕ್ರಮದಲ್ಲಿ ಜಾತ್ರಾ ಕಾರ್ಯಕ್ರಮಗಳಲ್ಲಿ ಆರತಿ, ಕರ್ಪೂರ, ಪಟಾಕಿ ಬಳಸುವಾಗ ,ಆದಷ್ಟು ಹೆಚ್ಚಿನ ಪ್ರಮಾಣದಲ್ಲಿ ಮಕ್ಕಳು ಬೆಂಕಿಯಿಂದ ಅಂತರವನ್ನು ಕಾಯ್ದುಕೊಂಡು ಭಾಗವಹಿಸುವುದು

ಅಗ್ನಿ ಸುರಕ್ಷತೆಯ ಚಟುವಟಿಕೆಗಳು :



•ಬಾಹ್ಯ ಸುಟ್ಟ ಗಾಯಗಳು, ಆಳವಾದ ಸುಟ್ಟ ಗಾಯಗಳಿಗೆ ನೀಡಬೇಕಾದ ಪ್ರಥಮ ಚಿಕಿತ್ಸೆಯ ಕುರಿತು ಶಿಬಿರಾರ್ಥಿಗಳಿಗೆ ತರಬೇತಿಗೊಳಿಸುವುದು.

# ಸುರಕ್ಷಿತ ಶಾಲಾ ಕಟ್ಟಡ

ಶಾಲೆಯ ಕಟ್ಟಡಗಳು ಕಲಿಕೆಯ ಪ್ರಯೋಗಾಲಯಗಳಾಗಿವೆ, ಎಂಬುದು ನಿಸ್ಸಂದೇಹವಾಗಿಯೂ ಒಪ್ಪಬಹುದಾದ ಮಾತಾಗಿದೆ.ಮಗುವು ತನ್ನ ಔಪಚಾರಿಕ ಶಾಲೆಯ ದಿನಗಳನ್ನು ಆರೋಗ್ಯಯುತಕರವಾಗಿಯೂ ಸಾರ್ಥಕವಾಗಿಯೂ, ಕ್ಷೇಮಕರವಾಗಿಯೂ ಸಮಾಧಾನಕರವಾಗಿಯೂ ಕಳೆದು ತನ್ನ ಭವಿಷ್ಯತ್ತಿನ ಜೀವನವನ್ನು ಯಶಸ್ವಿಗೊಳಿಸಬೇಕಾದರೆ ಶಾಲಾ ಕಟ್ಟಡವು ಅಷ್ಟೆ ಸುರಕ್ಷಿತವಾಗಿಬೇಕು. ಅಪೂರ್ಣವಾಗಿ ನಿರ್ಮಾಣಗೊಂಡ ಶಿಥಿಲವಾದ ಶಾಲಾ ಕಟ್ಟಡಗಳಲ್ಲಿ ಶಾಲೆಗಳನ್ನು ನಡೆಸದಂತೆ ಪಾಲಕರು ಮತ್ತು ಶಾಲಾ ಮಂಡಳಿಯವರು ಜವಾದ್ದಾರಿ ವಹಿಸಿಕೊಳ್ಳವುದು.

ಶಾಲೆಯ ಕಿಟಕಿ ಬಾಗಿಲುಗಳು, ಶಾಲಾ ವಿದ್ಯುತ್, ತಂತಿ ವ್ಯವಸ್ಥೆ, ಕಟ್ಟಡ ಸೋರುವುದು ಕಟ್ಟಡದ ಮೇಲ್ಭಾಗದಲ್ಲಿ ಕಸ ಮತ್ತು ನೀರು ನಿಲ್ಲುವುದು ಕಟ್ಟಡದ ಸುತ್ತಲೂ ನೀರು ನಿಲ್ಲುವುದು ಮುಂತಾದವುಗಳು ಕುರಿತು ಹೆಚ್ಚಿನ ಜಾಗೃತಿ ವಹಿಸುವುದು. ಶಾಲಾ ಕಟ್ಟಡಗಳನ್ನು ನಿರ್ಮಿಸುವಾಗ ರಾಷ್ಟೀಯಕಟ್ಟಡ ಸಂಹಿತೆಯ ಸೂಚನೆಗಳನ್ನು ಅಳವಡಿಸಿಕೊಂಡು ಕಟ್ಟಡಗಳನ್ನು ನಿರ್ಮಿಸಲು ಕ್ರಮಕೈಗೊಳ್ಳುವುದು.

• ಮಹಡಿಕಟ್ಟಡಗಳು ಇರುವ ಶಾಲೆಗಳ ಕೊಠಡಿಗಳ ಮುಂಭಾಗದಲ್ಲಿ ಓಡಾಡಲು ವಿಶಾಲವಾದ ಜಾಗಗಳನ್ನು ಬಿಡುವುದು ಹಾಗೂ ತಡೆಗೋಡೆಗಳನ್ನು ನಿರ್ಮಿಸುವುದು ಕಡ್ಡಾಯ.

• ಯಾವುದೇ ವಿದ್ಯಾರ್ಥಿಯು ಮಹಡಿ ಕಟ್ಟಡಗಳಿಂದ ಕೆಳಗೆ ಬೀಳಲು ಅವಕಾಶವಿರುವಂತಹ ಕಡೆ ತಡೆಗೋಡೆ ನಿರ್ಮಿಸುವುದು ಇಲ್ಲದಿದ್ದಲ್ಲಿ ಗ್ರಿಲ್‌ಗಳನ್ನು ಅಳವಡಿಸಿ ಸುರಕ್ಷತೆ ಕಾಪಾಡಲು ಸೂಚಿಸುವುದು.

• ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪದರ್ೇಶಕರುಯಾವುದೇ ಹೊಸ ಶಾಲೆಗೆ ಅನುಮತಿಯನ್ನು ನೀಡುವಾಗಅಂತಹ ಆಡಳಿತ ಮಂಡಳಿಗಳು ಸುರಕ್ಷಿತವುಳ್ಳ ಹಾಗೂ ರಾಷ್ಟೀಯಕಟ್ಟಡ ಸಂರಕ್ಷತೆಯ ಅನುಸಾರದ ಕಟ್ಟಡಎಂಬುದನ್ನು ಪರಿಶೀಲಿಸಿ ತರಗತಿ ನಡೆಸಲು ಅನುಮತಿ ನೀಡುವುದು.

**ಶಾಲಾ ಕಟ್ಟಡ ಸುರಕ್ಷತೆಗೆ ಚಟುವಟಿಕೆಗಳು**

ಶಿಬಿರಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿ ವಿದ್ಯಾರ್ಥಿಗಳಿಗೆ ಎಲ್ಲಾ ಸುರಕ್ಷಿತ ಕ್ರಮಗಳನ್ನು ಒಳಗೊಂಡ ಮಾದರಿ ಶಾಲಾ ಕಟ್ಟಡದ ನಕ್ಷೆ ಅಥವಾ ಶಾಲಾ ಕಟ್ಟಡದ ಮಾದರಿ ನಿರ್ಮಾಣ ಮಾಡಿಸುವುದು.

ಶಾಲಾ ಕಟ್ಟಡ ಮಾದರಿ ನಿರ್ಮಾಣ ಮಾಡಲು ಗುಂಪಿಗೆ ಅಗತ್ಯವಾದ ಕಾಲಾವಕಾಶ ನೀಡುವುದು.

ಶಾಲಾ ಕಟ್ಟಡ ಮಾದರಿ ನಿರ್ಮಾಣದಲ್ಲಿ ಗಮನಿಸಬೇಕಾದ ಅಂಶಗಳು:-

- ಸುಸ್ಥಿತಿಯ ಕಟ್ಟಡ
- ಶಾಲಾ ಸುತ್ತಲಿನ ಸ್ವಚ್ಛ ಪರಿಸರ ಮತ್ತು ಆಟದ ಮೈದಾನ
- ಶುದಕುಡಿಯುವ ನೀರಿನಘಟಕ

## ಸುರಕ್ಷಿತ ಶಾಲಾ ವಾಹನ

ಶಿಕ್ಷಣ ನಾಗರೀಕತೆಯ ಅವಿಭಾಜ್ಯ ಅಂಗ, ಮನೆಯ ಹತ್ತಿರದಲ್ಲಿ ಶಾಲೆ ಇಲ್ಲ. ಅದಕ್ಕಾಗಿ ದೂರದ ಶಾಲೆಗೆ ಸೇರ್ಪಡೆ ಹಾಗೂ ಹೋಗಿ ಬರುವುದು ಅನಿವಾರ್ಯ ಮಕ್ಕಳು ಶಾಲೆಯಿಂದ ಹಿಂದಿರುಗುವವರೆಗೂ ಪೋಷಕರು, ಶಾಲಾ ಆಡಳಿತ ಮಂಡಳಿ, ಬಸ್ ಚಾಲಕ ಮತ್ತು ಸಹಾಯಕರು ಬಹಳ ಎಚ್ಚರಿಕೆಯಿಂದ ತಮ್ಮ ಜವಾಬ್ದಾರಿಯನ್ನು ನಿಭಾಯಿಸಬೇಕಾಗುತ್ತದೆ.

ಶಾಲಾ ಆಡಳಿತ ಮಂಡಳಿಯವರು ಶಿಕ್ಷಣದ ಜೊತೆಗೆ ಮಕ್ಕಳ ಸುರಕ್ಷತೆಗೂ ಗಮನ ನೀಡಬೇಕಾಗಿದ್ದು, ಮನೆಯಿಂದ ಮಗು ಶಾಲೆಗೆ ಹಾಗೂ ಶಾಲೆಯಿಂದ ಮಗು ಮನೆ ತಲುಪುವವರೆಗೂ ಪಾಲಕರು ಮತ್ತು ಶಾಲಾ ಆಡಳಿತ ಮಂಡಳಿಯವರು ನಿಗಾವಹಿಸಬೇಕು ಸುಸ್ಥಿಯಲ್ಲಿರುವ ವಾಹನವನ್ನು ಮಾತ್ರ ಶಾಲಾ ವಾಹನವಾಗಿ ಬಳಕೆ ಮಾಡಿಕೊಂಡಿರುವುದನ್ನು ಪಾಲಕರು ಖಚಿತಪಡಿಸಿಕೊಳ್ಳಬೇಕು.

ವಾಹನ ಚಾಲಕರನ್ನು ನೇಮಿಸಿಕೊಳ್ಳುವಾಗ ಆತನ ಚಾಲನಾ ಅನುಭವ ಚಾಲನಾ ಪರವಾನಿಗೆ ಆತನ ಸಂಪೂರ್ಣ ವಿಳಾಸ ಆತನ ಈ ಹಿಂದಿನ ಚಾಲನಾ ಹಿನ್ನಲೆಯನ್ನು ಕಡ್ಡಾಯವಾಗಿ ಆಡಳಿತ ಮಂಡಳಿಯವರು ಪರಿಶೀಲಿಸಬೇಕು.

• 15 ವರ್ಷಕ್ಕಿಂತ ಹೆಚ್ಚು ಹಳೆಯ ವಾಹನ ಬಳಕೆ ಮಾಡಬಾರದು.
• ಶಾಲಾ ವಾಹನಗಳಲ್ಲಿ ಲಭ್ಯವಿರುವ ಆಸನಗಳಿಗಿಂತ ಒಂದೂವರೆಪಟ್ಟು ಮೀರಿ ಮಕ್ಕಳನ್ನು ಕರೆದೊಯ್ಯಬಾರದು.
• ಶಾಲಾ ವಾಹನ ಹಳದಿ ಬಣ್ಣದಲ್ಲೇ ಇರಬೇಕು ಎರಡು ಬದಿ 15 ಅಒಅಳತೆಯ ಚಿನ್ನದ ಕಂದು ಬಣ್ಣದ ಪಟ್ಟಿಯನ್ನು ಒಳಗೊಂಡಂತೆ ಶಾಲೆಯ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ ಇರಬೇಕು ಹೊರಭಾಗದ 4 ಭಾಗಗಳಲ್ಲಿ ಶಾಲಾವಾಹನ ಎಂದು ಬರೆಸಿರಬೇಕು
• GPS ಮತ್ತು CC Camera ಅಳವಡಿಸಬೇಕು.
• ಚಾಲಕನ ಜೊತೆಗೆ ವಿದ್ಯಾರ್ಥಿಗಳಿಗೆ ನೆರವಾಗಲು ಸಹಾಯಕ ಇರಬೇಕು, ವಾಹನ ಚಲಿಸುವಾಗ ಬಾಗಿಲು ಮುಚ್ಚಿರಬೇಕು, ಬಾಗಿಲುಗಳಿಗೆ ಸುರಕ್ಷಿತ ಲಾಕ್‌ಗಳನ್ನು ಹೊಂದಿರಬೇಕು.
• ವಾಹನಗಳಲ್ಲಿ ಕರೆದೊಯ್ಯುವ ಮಕ್ಕಳ ಹೆಸರು, ತರಗತಿ, ಮತ್ತು ಮನೆಯ ವಿಳಾಸ, ಮೊಬೈಲ್ ಸಂಖ್ಯೆ, ರಕ್ತದ ಗುಂಪು, ಮಾರ್ಗದ ವಿವರವುಳ್ಳ ಪಟ್ಟಿಯನ್ನು ವಾಹನಗಳಲ್ಲಿ ಇಟ್ಟಿರಬೇಕು.
• ಶಾಲಾ ವಾಹನದಲ್ಲಿ ಶಾಲಾ ಬ್ಯಾಗ ಇಡಲು ಆಸನಗಳ ಕೆಳಭಾಗದಲ್ಲಿ 500*300*350 ಮೀ ಅಳತೆಗೆ ಕಡಿಮೆ ಇರದಂತೆ ಅವಕಾಶ ಕಲ್ಪಿಸಬೇಕು.
• ಅನುಮೋದಿತ ಸ್ಪೀಡಗವರ್ನರ್ ಅಳವಡಿಸಿದ್ದು ವೇಗಮಿತಿ 40 ಕಿ. ಮೀ ಗೆ ನಿಯಂತ್ರಿತವಾಗು ವಂತಿರಬೇಕು.
• ಶಾಲಾ ವಾಹನ ಚಾಲನೆ ವೇಳೆ ಚಾಲಕನನ್ನು ಮಾತನಾಡಿಸಬಾರದು ಇದರಿಂದ ಆತನ ಗಮನ ಬೇರೆಡೆ ಹೋಗಿ ಅಪಘಾತ ಸಂಭವಿಸಬಹುದು.
• ಬಸ್ಸಿನ ಮೆಟ್ಟಿಲ ಮೇಲೆ ವಿದ್ಯಾರ್ಥಿಗಳಿಗೆ ನಿಲ್ಲಲು ಮತ್ತು ಕಿಟಕಿಯಿಂದ ತಲೆ/ಕೈ ಹೊರಗೆ ಹಾಕದಂತೆ ಎಚ್ಚರವಹಿಸುವುದು.

ಶಾಲಾ ವಾಹನ ಸುರಕ್ಷತೆಗೆ ಚಟುವಟಿಕೆಗಳು

ಪ್ರತಿ ಗುಂಪಿಗೂ ಪೂರ್ವಭಾವಿಯಾಗಿ ಶಾಲಾ ವಾಹನ ಅಪಘಾತ ಸಂಭವಿಸಿದ ಸಂದರ್ಭಗಳಲ್ಲಿ ಕೈಗೊಳ್ಳಬಹುದಾದ ಅಗತ್ಯ ಕ್ರಮಗಳ ಮತ್ತು ವಿದ್ಯಾರ್ಥಿ ನಿರ್ವಹಿಸಬೇಕಾದ ಪಾತ್ರಗಳ ಕುರಿತು ಮೊದಲೇ ವಿದ್ಯಾರ್ಥಿಗಳಿಗೆ ತರಬೇತಿಗೊಳಿಸುವುದು.

ಶಿಬಿರಾರ್ಥಿಗಳನ್ನು ಗುಂಪುಗಳನ್ನಾಗಿ ಮಾಡಿ, ಅಪಘಾತದ ಸನ್ನಿವೇಶ ನಿರ್ಮಾಣ ಮಾಡಿ, ಕ್ರಮಬದ್ಧವಾಗಿ ಗುಂಪುಗಳಿಗೆ ಅಪಘಾತ ಸನ್ನಿವೇಶದಲ್ಲಿ ಪ್ರವೇಶ ನೀಡುವುದು.ಗುಂಪುಗಳು ಆ ಸನ್ನಿವೇಶದಲ್ಲಿ ಯಾವ ರೀತಿ ಪ್ರತಿಕ್ರಿಯಿಸುತ್ತವೆ ಎಂಬುವುದನ್ನು ಪರಿಶೀಲಿಸುವಾಗ ಶಿಕ್ಷಕರು ಗಮನಿಸಬೇಕಾದ ಅಂಶಗಳು

1. ಪ್ರಥಮ ಚಿಕಿತ್ಸೆ
2. ಆ್ಯಂಬುಲೆನ್ಸ ಮತ್ತು ಪೋಲಿಸರಿಗೆ ಫೋನ ಮಾಡುವುದು
3. ಆಸ್ಪತ್ರೆಗೆ ಸಾಗಿಸುವುದು
4. ಗಾಯಾಳುಗಳಿಗೆ ನೀರಿನ ವ್ಯವಸ್ಥೆ
5. ತುರ್ತು ನಿರ್ಗಮನ ಬಳಸುವುದು

## ರಸ್ತೆ ಸುರಕ್ಷತೆ

ಭಾರತದಂತಹ ದೇಶಗಳು ತೀವ್ರಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವುದರಿಂದ ಆರ್ಥಿಕತೆಗೆ ಅನುಗುಣವಾಗಿ ರಸ್ತೆ ಮತ್ತು ವಾಹನಗಳ ಸಂಖ್ಯೆಯು ತೀವ್ರಗತಿಯಲ್ಲಿ ಏರುತ್ತಿದೆ.ವಾಹನಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಅಪಘಾತಗಳ ಸಂಖ್ಯೆಯು ಹೆಚ್ಚಾಗುತ್ತಿದೆ ಬಹಳಷ್ಟು ಜನರಿಗೆ ರಸ್ತೆ ನಿಯಮಗಳ ಅರಿವಿಲ್ಲದಿರುವುದರಿಂದ ಸಂಚಾರಿ ನಿಯಮಗಳನ್ನು ಜಾರಿ ಮಾಡುವಲ್ಲಿ ವಿಫಲತೆ ಹೊಂದಿದೆ.ಇವುಗಳಿಂದಾಗಿ ರಸ್ತೆ ಅಪಘಾತಗಳು ಹೆಚ್ಚಾಗುತ್ತಿದ್ದು ರಸ್ತೆ ಅಪಘಾತಗಳಲ್ಲಿ ಮರಣ ಹೊಂದುತ್ತಿರುವವರ ಸಂಖ್ಯೆಗಳಲ್ಲಿ ಮಕ್ಕಳ ಸಂಖ್ಯೆಗಳು ಹೆಚ್ಚಾಗಿವೆ. ಆದ್ದರಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವುದರ ಮುಖಾಂತರ ರಸ್ತೆ ಸುರಕ್ಷತೆಯನ್ನು ಅನುಸರಿಸುವುದು.

## ಸುರಕ್ಷತೆಗಾಗಿ ಮಾರ್ಗೋಪಾಯಗಳು

• ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ ಪೋಷಕರಿಗೆ,ವಾಹನ ಚಾಲಕರಿಗೆ, ಅರಿವು ಮೂಡಿಸಲು ಚರ್ಚಾಸ್ಪರ್ಧೆ, ಚಿತ್ರಕಲೆ ಸ್ಪರ್ಧೆ, ಸಂವಾದ ರಸ ಪ್ರಶ್ನೆ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

• ರಸ್ತೆಯ ಮೇಲೆ ಚಲಿಸುವಾಗ ಮಕ್ಕಳು ಸುರಕ್ಷಿತವಾಗಿ ರಸ್ತೆಯನ್ನು ದಾಟಲು ಅನುಕೂಲವಾಗುವಂತೆ ಮಕ್ಕಳಿಗೆ ಸಿಗ್ನಲ್ ವ್ಯವಸ್ಥೆ, **zebra crossing** ಸೂಚನಾ ಫಲಕಗಳ ಕುರಿತು ಮೊದಲೇ ಮಾಹಿತಿ ನೀಡುವುದು.

• ರಸ್ತೆಯನ್ನು ದಾಟುವಾಗ ಪೋಷಕರು ಮೊಬೈಲ್ ಮತ್ತು ಇನ್ನಿತರ ಎಲೆಕ್ಟ್ರಾನಿಕ ಉಪಕರಣಗಳನ್ನು ಬಳಸದೇ ತಮ್ಮ ಮಕ್ಕಳ ಮೇಲೆ ಗಮನವಿರಿಸಿ ರಸ್ತೆ ದಾಟಿಸುವುದು.

• 18 ವರ್ಷದ ಒಳಗಿನ ಮಕ್ಕಳಿಗೆ ದ್ವಿಚಕ್ರವಾಹನ, ಕಾರುಗಳನ್ನು ಚಲಾಯಿಸಲು ನಿರ್ಬಂಧಿಸುವ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದು ಮತ್ತು ವಾಹನಗಳನ್ನು ನೀಡುವ ಪೋಷಕರಿಗೆ ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸುವುದು.

• ಶಾಲೆಯ ಹತ್ತಿರ ಮಕ್ಕಳು ಹೆಚ್ಚಾಗಿ ಓಡಾಡುವುದರಿಂದ ರಸ್ತೆ ಬದಿಗಿನ ಶಾಲೆಗಳು ಕಂಪೌಂಡ್ ಮತ್ತು ಗೇಟ್ಗಳ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡುವುದು.

• ರಸ್ತೆಯ ಬದಿಯಲ್ಲಿ 200 ಮೀ ಅಂತರದಲ್ಲಿ ಪೊಲೀಸ್ ಸಹಾಯಕವಾಣಿ ಸಂಖ್ಯೆ ಮಕ್ಕಳ ಸಹಾಯಕವಾಣಿ ಸಮೀಪದ ಆಸ್ಪತ್ರೆಯ ದೂರವಾಣಿ ಸಂಖ್ಯೆ ಕಡ್ಡಾಯವಗಿ ಸೂಚನಾ ಫಲಕಗಳಲ್ಲಿ ಪ್ರದರ್ಶಿಸುವುದು.

## ರಸ್ತೆ ಸುರಕ್ಷತೆ ಕುರಿತು ಚಟುವಟಿಕೆಗಳು

•ರಸ್ತೆ ಸುರಕ್ಷತಾ ಚಿಹ್ನೆಗಳ ಮಿಂಚುಪಟ್ಟಿಗಳನ್ನು ತಯಾರಿಸಿ ಒಂದು ಪೆಟ್ಟಿಗೆಯಲ್ಲಿ ಹಾಕಿ ವಿದ್ಯಾರ್ಥಿಗಳಿಗೆ ಕ್ರಮ ಬದ್ಧವಾಗಿ ಒಂದೊಂದು ಕಾರ್ಡಗಳನ್ನು ತೆಗೆದುಕೊಂಡು ಅದರ ಕುರಿತು ವಿದ್ಯಾರ್ಥಿಯು ವಿವರಿಸುವುದು

•ರಸ್ತೆ ಸಂಚಾರ ಸುರಕ್ಷತಾ ಸಾಧನಗಳನ್ನು ಗೋಡೆಗೆ ಅಂಟಿಸಿ ವಿದ್ಯಾರ್ಥಿಗಳಿಗೆ ಅವುಗಳನ್ನು ಹೆಸರಿಸುವಂತೆ ತಿಳಿಸಿ ವಿದ್ಯಾರ್ಥಿಗಳುನೀಡಿದ ಸಂಚಾರ ಸುರಕ್ಷತೆಯ ಜ್ಞಾನವನ್ನು ಪರೀಕ್ಷಿಸುವುದು.

•ವಿದ್ಯಾರ್ಥಿಗಳಿಗೆ ಟ್ರಾಫಿಕ್ ಪೋಲಿಸರ ಕೈ ಸಿಗ್ನಲ್‌ಗಳ ಮಾಹಿತಿ ಮೊದಲೇ ನೀಡಿ ನಂತರ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ಸೂಚನೆಗಳನ್ನು ನೀಡಿ, ಸಿಗ್ನಲ್‌ನ್ನು ಕೈ ಮುಖಾಂತರ ತೋರಿಸುವಂತೆ ಚಟುವಟಿಕೆ ನಡೆಸುವುದು.

## ಶಾಲಾ ಹಂತದಲ್ಲಿ ಮಕ್ಕಳ ಸುರಕ್ಷತೆಗಾಗಿ ಚಟುವಟಿಕೆಗಳು:

1. ರಸ್ತೆ ಸುರಕ್ಷತೆಯ ಶಿಕ್ಷಣದ ಕಾರ್ಯಕ್ರಮಗಳನ್ನು ಶಾಲಾ ಶೈಕ್ಷಣಿಕ ಯೋಜನೆ ಹಾಗೂ ಶಾಲಾಭಿವೃದ್ಧಿ ಯೋಜನೆಗಳಲ್ಲಿ ಅಂತರ್ಗತಗೊಳಿಸುವುದು.
2. ಎಸ್.ಡಿ.ಎಮ್.ಸಿ ಪಾಲಕರ ಸಭೆ ಹಾಗೂ ಶಿಕ್ಷಕರ ಸಭೆಗಳಲ್ಲಿ ರಸ್ತೆ ಸುರಕ್ಷತೆಯ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುವುದು.
3. ರಸ್ತೆ ಸುರಕ್ಷತೆಯ ನೀತಿನಿಯಮಗಳು ಹಾಗೂ ಪ್ರಾಮುಖ್ಯತೆ ಜಾಗೃತೆಗಾಗಿ ಮಕ್ಕಳ ಜಾಥಾ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
4. ಸಂಚಾರ ನಿಯಮಗಳ ಉಲ್ಲಂಘನೆಯ ಪರಿಣಾಮಗಳನ್ನು ಬಿಂಬಿಸುವ ಬೀದಿ ನಾಟಕಗಳನ್ನು ಪ್ರದರ್ಶಿಸುವುದು.
5. ಶಾಲೆಗಳಲ್ಲಿ ವಿಡಿಯೋ ಪ್ರದರ್ಶನದ ಮೂಲಕ ತಿಳುವಳಿಕೆ ಮೂಡಿಸುವುದು.
6. ರಸ್ತೆ ಸಂಚಾರ ನಿಯಮಗಳ ಕುರಿತು ಚಿತ್ರಕಲಾ ಪ್ರದರ್ಶನ, ಭಾಷಣ ಪ್ರಬಂಧ ರಚನೆ, ಆಶುಭಾಷಣ, ರಸ ಪ್ರಶ್ನೆ, ವಿಚಾರಗೊಷ್ಠಿ ಮುಂತಾದ ಕಾರ್ಯಕ್ರಮಗಳನ್ನು ನಡೆಸುವುದು.
7. ರಸ್ತೆ ಸುರಕ್ಷತೆಗಾಗಿ ಪ್ರತಿಜ್ಞಾ ವಿಧಿಯನ್ನು ಮಕ್ಕಳಿಂದ ಮಾಡಿಸುವುದು .

೩. ರಸ್ತೆ ಸುರಕ್ಷತೆ ಕುರಿತು ಪರಿಕಲ್ಪನೆಯಾಧಾರಿತ ವಸ್ತು ಪ್ರದರ್ಶನ ಏರ್ಪಡಿಸುವುದು.

## ಮಳೆಗಾಲದಲ್ಲಿ ಮಕ್ಕಳ ಸುರಕ್ಷತೆ

ಮಳೆ ಎಂದರೆ ಸಂಭ್ರಮ ಹಸಿರು ಹಾಡಿನ ಚರಣ, ಮಳೆ ಬೀಳುವಾಗ, ಗಾಳಿ ನವಿರಾಗಿ ಬೀಸಿದರೆ ಮಳೆ ನಿಂತು ಸುರಿಯುತ್ತದೆ.ಮಳೆಯಲ್ಲಿ ನೆನೆಯುವುದೆಂದರೆ ಮಕ್ಕಳಿಗೆ ಪ್ರಕೃತಿಯ ಜೊತೆ ಒಂದಾಗುವ ಕ್ರಮ.

ಸುರಕ್ಷತೆಗಾಗಿ ಮಾರ್ಗೋಪಾಯಗಳು

 ಮಳೆ ಬರುವ ಸೂಚನೆಗಳು ಕಂಡು ಬಂದಲ್ಲಿ ಸಾಧ್ಯವಾದಷ್ಟು ಮಗು ತನ್ನ ಸುರಕ್ಷತೆಗೆ ಗಮನ ಕೊಡುವುದು ಅಗತ್ಯ.

 ಆಕಸ್ಮಿಕ ಮಳೆಯಿಂದಾಗಿ ಮಳೆಗೆ ಸಿಲುಕುವ ಮಗುವು ವಿದ್ಯುತ್ ಕಂಬಗಳಿಂದ, ಮರಗಿಡಗಳಿಂದ, ಶಿಥಿಲವಾಗಿರುವ ಕಟ್ಟಡಗಳಿಂದ ಅಪಾಯಕ್ಕೊಳಪಡುವುದರಿಂದ ಎಚ್ಚರವಿರುವುದು.

 ಮಳೆಯಿಂದಾಗುವ ಅನಾಹುತಗಳು ಮಗುವಿನ ಆರೋಗ್ಯ ಮತ್ತು ದೇಹದ ಸ್ಥಿತಿಗತಿಯ ಮೇಲೆ ಪರಿಣಾಮ ಬೀರುವುದರಿಂದ ಮಗುವು ಮುನ್ನೆಚ್ಚರಿಕೆ ಕ್ರಮಗಳಾದ ಮಳೆಯ ರಕ್ಷಣಾ ಸಾಮಗ್ರಿಗಳಾದ ಕೊಡೆ, ರೇನ್ಕೋಟ್‌ಗಳನ್ನು ಸಿದ್ದವಾಗಿಟ್ಟುಕೊಳ್ಳುವುದು ಸೂಕ್ತ.

 ತೀವ್ರ ಮಳೆಯ ಮುನ್ಸೂಚನೆಯಿದ್ದಲ್ಲಿ ಮುಗು ಶಾಲೆಗೆ ಹೋಗುವಾಗ ಹಾಗೂ ಶಾಲೆಯಿಂದ ಮನೆಗೆ ಹೋಗುವ ವೇಳೆಯಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಂಡು ಶಾಲೆಯ ಸುತ್ತಮುತ್ತಲಿನ ಆವರಣದಲ್ಲಿ ತಗ್ಗು ಗುಂಡಿಗಳಲ್ಲಿ ನೀರು ನಿಲುಗಡೆಯಾಗದಂತೆ ಎಚ್ಚರಿಕೆವಹಿಸುವುದು

ಗುಡುಗು ಸಹಿತ ಮಳೆಯ ಸಂದರ್ಭದಲ್ಲಿ ಅನುಸರಿಸಬೇಕಾದ ಸುರಕ್ಷತಾ ಕ್ರಮಗಳು

 ಗುಡುಗು ಸಹಿತ ಮಳೆಯಾಗುತ್ತಿರುವ ಸಂದರ್ಭದಲ್ಲಿ ಛತ್ರಿಯೊಂದಿಗೆ ಹೊರ ಹೋಗುವುದು ಸರಿ ಅಲ್ಲ ನೀವು ಬಯಲು ಪ್ರದೇಶದಲ್ಲಿದ್ದು ಯಾವುದೇ ಆಶ್ರಯ ತಾಣಗಳಿಲ್ಲದಿದ್ದರೆ ಎಲ್ಲಾ ಮರಗಳಿಂದ ಸಾಧ್ಯವಾದಷ್ಟು ದೂರವಿರಬೇಕು.

 ಲೋಹದ ಕಂಬಗಳು ಅಥವಾ ಇತರ ಲೋಹದ ವಸ್ತುಗಳಿಂದ ದೂರವಿರುವುದು.

 ಬಯಲಿನಲ್ಲಿ ಮಲಗಬಾರದು, ಬದಲಿಗೆ ಕುಕ್ಕುರುಗಾಲಿನಲ್ಲಿ ಕುಳಿತು ಎರಡೂ ಕೈಗಳಿಂದ ಮಂಡಿಯನ್ನು ಬಳಸಿ ತಲೆಯನ್ನು ಎರಡು ಕೈಗಳ ನಡುವೆ ಇರಿಸಿಕೊಳ್ಳಬೇಕು ಈ ಭಂಗಿಯು ಮಿಂಚಿನ ಆಘಾತದಿಂದ ನಿಮ್ಮನ್ನು ರಕ್ಷಿಸುತ್ತದೆ.

 ಗುಡುಗು ಸಹಿತ ಮಳೆಯಾಗುತ್ತಿರುವ ಸಮಯದಲ್ಲಿ ದೂರವಾಣಿ ತಂತಿ ವಿದ್ಯುತ್ ತಂತಿ ಮತ್ತು ಲೋಹದ ಕೊಳವೆಗಳ ಸಂಪರ್ಕದಿಂದ ಕಡ್ಡಾಯವಾಗಿ ದೂರವಿರಬೇಕು.

**ಮಳೆಯಿಂದ ಮಕ್ಕಳು ಸುರಕ್ಷತೆ ಪಡೆಯಲು ಚಟುವಟಿಕೆಗಳು**

- ❖ ಮಳೆಯಿಂದ ಮಕ್ಕಳು ಸುರಕ್ಷತೆ ಪಡೆಯಲು ಶಿಬಿರಾರ್ಥಿಗಳಾದ ನೀವು ನೀಡುವ ಅತ್ಯಮುಲ್ಯವಾದ 5 ಸಲಹೆಗಳನ್ನು ಬರೆಯಿರಿ/ಚರ್ಚಿಸಿರಿ
- ❖ ನಾನು ಶಾಲೆಗೆ ಹೋಗುವಾಗ ಜೋರಾಗಿ ಮಳೆ ಬಂದಾಗ ನನ್ನನ್ನು ನಾನು ಹೇಗೆ ರಕ್ಷಿಸಿಕೊಳ್ಳಬೇಕು ಮತ್ತು

## ಸುರಕ್ಷಿತ ಪ್ರವಾಸ

ಶೈಕ್ಷಣಿಕ ಪ್ರವಾಸ ಎಂಬುದು ಶಾಲಾ ಮಕ್ಕಳ ಅಥವಾ ಕಾಲೇಜು ವಿದ್ಯಾರ್ಥಿಗಳ ಕಲಿಕೆಯ ಒಂದು ಪ್ರಮುಖವಾದ ಭಾಗವೆಂದೇ ಹೇಳಬಹುದು ತಮ್ಮ ಸ್ವಂತ ಅನುಭವದ ಮೇಲೆ, ವೀಕ್ಷಣೆಯ ಮೇರೆಗೆ ಮಕ್ಕಳಿಗೆ ಕಲಿಯುವ ಒಂದು ಅವಕಾಶ, ಜ್ಞಾನವನ್ನು ಪ್ರಾಯೋಗಿಕವಾಗಿ ಪಡೆಯಲು ಮಾಡಬಹುದಾದಂತಹ ಒಂದು ಉತ್ತಮ ಪ್ರಯತ್ನವೇ ಶೈಕ್ಷಣಿಕ ಪ್ರವಾಸಗಳ ಕೈಗೊಳ್ಳುವಿಕೆ.

ಕೇವಲ ಪಾಠದ ವಿಷಯಕ್ಕಾಗಿ ಒಂದೇ ಅಲ್ಲದೇ ಈ ರೀತಿಯ ಪ್ರವಾಸಗಳು ಮಕ್ಕಳಲ್ಲಿ ಒಗ್ಗಟ್ಟು, ಸಹಬಾಳ್ವೆ, ಏಕತಾನತೆ, ಪರಸ್ಪರ ಸಹಕಾರ, ಸಂತೋಷ, ಹಂಚುವ ಭಾವನೆ, ತಮ್ಮ ವಯಸ್ಸಿಗೆ ತಕ್ಕ ಜವಾಬ್ದಾರಿ ನಿರ್ವಹಣೆ, ಇತರೆ ವ್ಯಕ್ತಿಯೆಡೆಗೆ ಗೌರವ, ಹೀಗೆ ಇನ್ನೂ ಹಲವು ಬಗೆಯ ಸೌಜನ್ಯ ನಡುವಳಿಕೆಗಳನ್ನು ತುಂಬಲು ಪ್ರೋತ್ಸಾಹ ನೀಡಿದಂತಾಗುತ್ತದೆ. ಪಠ್ಯ ಪುಸ್ತಕದಲ್ಲಿ ಕೇಳಿ ಓದಿ ತಿಳಿಯುವುದಕ್ಕಿಂತಲೂ ವಾಸ್ತವಿಕವಾಗಿ ನೋಡಿ ಅದರ ಅನುಭವ ಪಡೆಯುವುದು. ಹೆಚ್ಚಿನ ಮೌಲ್ಯವನ್ನು ಕೋಡುತ್ತದೆ. ಇದರ ಜೊತೆಗೆ ಈ ಹಿಂದೆ ನೋಡಿರದ, ಪರಿಚಯವಿಲ್ಲದ ಊರುಗಳಿಗೆ ತಿರುಗಾಡಿ ಅಲ್ಲಿಯ ನೆಲ,ಜಲ,ಜನ,ಪರಿಸ್ಥಿತಿ ಪ್ರತಿಯೊಂದನ್ನೂ ಹತ್ತಿರದಿಂದ ನೋಡಲು ಮತ್ತು ಮಿತ್ರರೊಡನೆ, ಕಲಿಸುವ ಗುರುಗಳೊಂದಿಗೆ ಆತ್ಮೀಯತೆಯನ್ನು ಪಡೆಯಲು ಅವಕಾಶವಾಗುತ್ತದೆ.

## ಪ್ರವಾಸ ಕೈಗೊಂಡಾಗ ಸುರಕ್ಷತೆಗಾಗಿ ಅನುಸರಿಸಬಹುದಾದ ಕ್ರಮಗಳು

 ಪ್ರವಾಸವು ಅತ್ಯಂತ ಸರಳ ಹಾಗೂ ಜಾಗರೂಕವಾಗಿ ಆಯೋಜಿಸಬೇಕು.

ಪ್ರವಾಸಕ್ಕೆ ಹೊರಡುವ ಸ್ಥಳದ ಕುರಿತು ಅಲ್ಲಿಯ ಸುರಕ್ಷತೆಯ ಕುರಿತು ಪೂರ್ವಭಾವಿಯಾಗಿ ಮಾಹಿತಿ ಸಂಗ್ರಹಿಸುವುದು.

ಪ್ರವಾಸಕ್ಕೆ ಹೊರಡುವ ಸ್ಥಳ, ವಾಹನ, ಊಟ, ವಸತಿ, ಕುರಿತು ಪೂರ್ವಭಾವಿಯಾಗಿ ಸೂಕ್ತ ಯೋಜನೆ ತಯಾರಿಸುವುದು.

ಪ್ರವಾಸಕ್ಕೆ ಹೊರಡುವ ವಾಹನ ಕುರಿತು ಅದರ ಸ್ಥಿತಿಗತಿಯ ಕುರಿತು ಚಾಲಕರ ಜಾಗೃತಿ ಕುರಿತು ಮೊದಲೇಮಾಹಿತಿ ಸಂಗ್ರಹಿಸಿಕೊಳ್ಳುವುದು.

ಪ್ರವಾಸಕ್ಕೆ ಹೊರಡುವ ವಿದ್ಯಾರ್ಥಿಗಳ ದೈಹಿಕ ಆರೋಗ್ಯ, ಮಾನಸಿಕ ಆರೋಗ್ಯದ ಕುರಿತು ವೈದ್ಯಾಧಿಕಾರಿಗಳಿಂದ ದೃಢಿಕರಣಗೊಳಿಸಿಕೊಂಡು ಪ್ರವಾಸಕ್ಕೆ ಹೊರಡುವ ವಿದ್ಯಾರ್ಥಿಗಳ ಪಟ್ಟಿ ತಯಾರಿಸುವುದು.

ಪ್ರವಾಸದ ಸಂದರ್ಭದಲ್ಲಿ ಸ್ವಚ್ಛ &ಶುದ್ಧವಾದ ಕುಡಿಯುವ ನೀರಿನ ವ್ಯವಸ್ಥೆ &ಆರೋಗ್ಯಕರವಾದ ಊಟದ ವ್ಯವಸ್ಥೆಯ ಕುರಿತು ಆಯೋಜಕರು ಜಾಗೃತಿ ವಹಿಸುವುದು.

ಪ್ರವಾಸದ ಅವಧಿಯಲ್ಲಿ ಯಾವುದೇ ಅಪಘಾತಗಳು ಸಂಭವಿಸದಂತೆ ಜಾಗೃತಿ ವಹಿಸುವುದು.

ಪ್ರವಾಸದ ಸ್ಥಳದಲ್ಲಿ ಕಡಿದಾದ ಜಲಪಾತಗಳಿದ್ದಲ್ಲಿ ಅಪಾಯಕಾರಿ ಬೆಟ್ಟಗಳಿದ್ದಲ್ಲಿ ಆಳವಾದ ಸಮುದ್ರ ತೀರಗಳಿದ್ದಲ್ಲಿ, ದಟ್ಟವಾದ ಅರಣ್ಯಗಳಿದ್ದಲ್ಲಿ ಆಯೋಜಕರು ತೀವ್ರ ನಿಗಾವಹಿಸುವುದು.

ಪ್ರವಾಸದ ಸಂದರ್ಭದಲ್ಲಿ ಅಪಘಾತಗಳು ಸಂಭವಿಸಿದಾಗ ನಿರ್ವಹಿಸಬೇಕಾದ ಪ್ರಥಮ ಚಿಕಿತ್ಸೆ ಮಾಹಿತಿಯನ್ನು ಆಯೋಜಕರು ತಿಳಿದಿರಬೇಕು ತಕ್ಷಣ ಕ್ರಮವಹಿಸಬೇಕು.

ಅಪಘಾತ ಸಂಭವಿಸಿದಾಗ, ಅಪಘಾತ ತೀವ್ರವಾಗಿದ್ದಲ್ಲಿ ಸಮೀಪದ ಆಸ್ಪತ್ರೆಗೆ ಹಾಗೂ ಪೋಲೀಸ್ ಠಾಣೆಗೆ ಸಂಪರ್ಕಿಸಿ ನೈಜ ಮಾಹಿತಿ ನೀಡುವುದು.

**ಪ್ರವಾಸದ ಕುರಿತು ಸುರಕ್ಷತಾ ಚಟುವಟಿಕೆಗಳು :-**

ಶಾಲಾ ಮಂಡಳಿಯು ವಿದ್ಯಾರ್ಥಿಗಳನ್ನು ಶೈಕ್ಷಣಿಕ ಪ್ರವಾಸಕ್ಕೆ ಕರೆದುಕೊಂಡು ಹೋಗಲು ನಿರ್ಧರಿಸುವುದು ಈ ವಿಷಯವನ್ನು ವಿದ್ಯಾರ್ಥಿಗಳಿಗೆ ತಿಳಿಸುವ ಸನ್ನಿವೇಶವನ್ನು ಅಭಿನಯಿಸುವುದು.ಕೆಲವು ವಿದ್ಯಾರ್ಥಿಗಳು ಶಿಕ್ಷಕರಂತೆ ಮತ್ತು ಇನ್ನೂ ಕೆಲವು ವಿದ್ಯಾರ್ಥಿಗಳು ವಿದ್ಯಾರ್ಥಿಗಳಂತೆ ನಟಿಸುವುದು. ಶಿಬಿರಾರ್ಥಿಗಳು ಶಿಕ್ಷಕ ಮತ್ತು ವಿದ್ಯಾರ್ಥಿಗಳಂತೆ ಅಭಿನಯಿಸುವುದು.

ಶೈಕ್ಷಣಿಕ ಪ್ರವಾಸಕ್ಕೆ ಹೊರಡುವ ಮುನ್ನ ಶಾಲೆಯು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು ಮತ್ತು ಪ್ರವಾಸಕ್ಕೆ ಹೋದಾಗ ವಿದ್ಯಾರ್ಥಿಗಳು ಅನುಸರಿದಬೇಕಾದ ಮುನ್ನೆಚರಿಕೆ ಕ್ರಮಗಳ ಕುರಿತು ಶಿಬಿರಾರ್ಥಿಗಳು ಚರ್ಚಿಸುವುದು.

## ಶಾಲಾ ಮಕ್ಕಳಲ್ಲಿ ವಿದ್ಯುತ್ ಸುರಕ್ಷತೆ

ದೈನಂದಿನ ಜೀವನದಲ್ಲಿ ವಿದ್ಯುತ್‌ಶಕ್ತಿಯು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ.ಆದರೆ ಇದು ಗುಪ್ತ ಅಪಾಯಗಳೊಂದಿಗೆ ಬರುತ್ತದೆ.ಆದ್ದರಿಂದ ಇಲ್ಲಿ ಮಕ್ಕಳಿಂದ ದೊಡ್ಡವರವರೆಗೂ ಇದರ ಅಪಾಯದ ಸುಳಿವು ಸಿಗುವುದೇ ಇಲ್ಲ.ವಿದ್ಯುಚ್ಛಕ್ತಿಯು ಒಂದು ಮೂಕ ಶಕ್ತಿಯಾಗಿದ್ದು ನಾವು ನಮ್ಮ ಇಂದ್ರಿಯಗಳಿಂದ ಕಂಡುಹಿಡಿಯಲಾಗುವುದಿಲ್ಲ. ಜನರನ್ನು ರಕ್ಷಿಸಲು ಮತ್ತು ವ್ಯವಹಾರಗಳು ಸುಗಮವಾಗಿ ನಡೆಯಲು ಗುರುತಿಸುವುದು ಮೊದಲ ಹಂತವಾಗಿದೆ.

1.ವಿದ್ಯುತ್ ಆಘಾತ 2.ಆರ್ಕ್ ಫ್ಲಾಶ್ ಸಾಮಾನ್ಯವಲ್ಲದಿದ್ದರೂ, ಅವು ಗಂಭೀರ ಹಾನಿಯನ್ನುಂಟುಮಾಡುತ್ತವೆ. ಜಾಗರೂಕರಾಗಿರುವುದು ಮತ್ತು ಸುರಕ್ಷತಾ ಕ್ರಮಗಳನ್ನು ಅರ್ಥಮಾಡಿಕೊಳ್ಳುವುದು ತಡೆಗಟ್ಟುವಿಕೆಗೆ ಪ್ರಮುಖವಾಗಿದೆ.

## ವಿದ್ಯುತ್ ಸುರಕ್ಷತಾ ಕ್ರಮ:

• ಶಾಲಾ ಮಕ್ಕಳಿಗೆ ವಿದ್ಯುತ್ ಅಪಾಯದ ಬಗ್ಗೆ ಶಾಲೆಗಳಲ್ಲಿ ಅರಿವು ಮೂಡಿಸಿ ತೆಗೆದುಕೊಳ್ಳಬಹುದಾದ ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸುವುದು.

• ಶಾಲೆಗಳಲ್ಲಿ ಮತ್ತು ಮನೆಗಳಲ್ಲಿ ಸುರಕ್ಷತೆ ಖಚಿತಪಡಿಸಿಕೊಳ್ಳಲು ಹೊರ ಹೋಗುವಾಗ ವಿದ್ಯುತ್ ದೀಪಗಳನ್ನು ಆಫ್ ಮಾಡಿ ಉಪಕರಣಗಳನ್ನು ಅನ್‌ಪ್ಲಗ್ ಮಾಡಲೇಬೇಕು ಏಕೆಂದರೆ ಆಫ್ ಮಾಡಿದಾಗಲೂ ವಿದ್ಯುತ್ ಹರಿಯುತ್ತದೆ.

• ರಸ್ತೆಯ ಮೇಲೆ ವಿದ್ಯುತ್ ತಂತಿ ಕಂಡುಬಂದರೆ, ಸ್ಥಾವರಗಳಲ್ಲಿ ವಿದ್ಯುತ್ ಸೋರಿಕೆ ಗಮನಕ್ಕೆ ಬಂದಲ್ಲಿ ತಕ್ಷಣವೇ ಹಿರಿಯರಿಗೆ ಬೆಸ್ಕಾಂ ಕಛೇರಿಗೆ ತಿಳಿಸಲು ಹೇಳಿರಿ.

• ನಿಮ್ಮ ಕೈಗಳು ಒದ್ದೆಯಾಗಿರುವಾಗ ಅಥವಾ ಗಾಯದಿಂದ ರಕ್ತ ಸೋರುತ್ತಿದ್ದಾಗ ಮಕ್ಕಳಾಗಲಿ, ದೊಡ್ಡವರಾಗಲಿ ವಿದ್ಯುತ್ ಸ್ವಿಚ್ ಅಥವಾ ಉಪಕರಣಗಳನ್ನು ಜೋಡಿಸಬೇಡಿ.

• ಒಡೆದ ಸ್ವಿಚ್, ಪ್ಲಗ್ ಸಾಕೆಟ್ಗಳನ್ನು ಬಳಸಬೇಡಿ.

• ವಿದ್ಯುತ್ ಕಂಭಗಳನ್ನು ಪ್ರಸರಣ ಗೋಪುರಗಳನ್ನು ಏರಬೇಡಿ.

• ವಿದ್ಯುತ್ ಕಂಬಕ್ಕೆ ಒರಗಿ ನಿಲ್ಲುವುದು, ಬಟ್ಟೆ ಒಣಗಿಸಲು ಅದನ್ನು ಬಳಸಿಕೊಳ್ಳಬೇಡಿ.

• ವಿದ್ಯುತ್ ತಂತಿಗಳು ಮತ್ತು ಉಪಕೇಂದ್ರಗಳಿಂದ ಸಾಕಷ್ಟು ದೂರ ನಿಮ್ಮ ಗಾಳಿಪಟದ ಹಾರಾಟ ಇರಲಿ.

• ಹೊಲಗದ್ದೆಗಳಲ್ಲಿ ಕಟ್ಟುವ ಬೇಲಿಯಲ್ಲಿ ವಿದ್ಯುತ್ ಹರಿಸದಂತೆ ಪಾಲಕರಿಗೆ ತಿಳಿಸಿ.

• ಅಗ್ನಿ ಆಕಸ್ಮಿಕದಲ್ಲಿ ಜೀವಂತ ವಿದ್ಯುತ್ ಉಪಕರಣದ ಮೇಲೆ ನೀರನ್ನು ಎಸೆಯಬೇಡಿ.

## ವಿದ್ಯುತ್ ಅವಘಡ ಸಂಭವಿಸಿದಾಗ

• ಮೊದಲು ಅಪಾಯ ಉಂಟಾಗಿರುವ ವ್ಯಕ್ತಿಗೂ ಹಾಗೂ ತಮಗೂ ಮತ್ತು ಬೇರೆಯವರಿಗೂ ಯಾವುದೇ ರೀತಿಯ ಅಪಾಯವಿಲ್ಲದಿರುವುದನ್ನು ಖಚಿತಪಡಿಸಿಕೊಳ್ಳುವುದು.

• ವಿದ್ಯುತ್ ಸಂಪರ್ಕ ಸಹಾಯ ಬಂದ್ ಮಾಡಿ ನಂತರ ಅಪಘಾತವಾದ ವ್ಯಕ್ತಿಗೆ ಸಹಾಯ ಮಾಡಬೇಕು.

• ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಸಾಧ್ಯವಾಗದಿದ್ದಲ್ಲಿ ಅಥವಾ ವಿಳಂಬವಾದಲ್ಲಿ ಅಪಘಾತವಾದ ವ್ಯಕ್ತಿಯನ್ನು ವಿದ್ಯುತ್ ಪ್ರವಹಿಸಿದಂತಹ ವಸ್ತುವನ್ನು ಬಳಸಿ ವಿದ್ಯುತ್ ಸಂಪರ್ಕದಿಂದ ಬೇರ್ಪಡಿಸಬೇಕು.

• ಕೂಡಲೇ ಆಂಬುಲೆನ್ಸ್ ಕರೆಯಬೇಕು. ವಿದ್ಯುತ್ ಅಪಘಾತವಾದ ವ್ಯಕ್ತಿಗೆ ಆದಷ್ಟು ತ್ವರಿತವಾಗಿ ವೈದ್ಯಕೀಯ ನೆರವಿನ ಅಗತ್ಯವಿರುತ್ತದೆ. ಮೇಲೆ ಕಾಣುವಂತಹ ಯಾವುದೇ ಗಾಯಗಳಿಲ್ಲದಿದ್ದರೂ,
ಆಂತರಿಕವಾಗಿ ಗಾಯಗಳಾಗಿರುವ ಸಾಧ್ಯತೆಗಳಿರುತ್ತವೆ. ಹಾಗಾಗಿ ಇದನ್ನು ಗಮನಿಸಬೇಕು.

ವಿದ್ಯುತ್‌ನಿಂದ ಸುರಕ್ಷತೆ ಪಡೆಯಲು ಚಟುವಟಿಕೆಗಳು

ವಿದ್ಯುತ್ ಸುರಕ್ಷತೆಯ ಕುರಿತು ಹಾಗೂ ವಿದ್ಯುತ್ ಉಪಕರಣಗಳ ಸುರಕ್ಷತ ಬಳಕೆಯ ಅರಿವು ಮೂಡಿಸಲು ಶಿಬಿರಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ ಏರ್ಪಡಿಸಿ ಈ ಕೆಳಗಿನ ವಿಷಯಗಳನ್ನು ನೀಡುವುದು.

•ದಿನ ಬಳಕೆಯ ವಿದ್ಯುತ್ ಉಪಕರಣಗಳ ಚಿತ್ರ ಬಿಡಿಸುವುದು.

•ವಿದ್ಯುತ್ತಿನ ಅಪಾಯಕ್ಕೆ ಒಳಗಾದ ವ್ಯಕ್ತಿಯನ್ನು ರಕ್ಷಿಸುವ ಚಿತ್ರ ಬಿಡಿಸುವುದು.

•ವಿದ್ಯುತ್ ತಂತಿಗಳು ಶಾಲಾಮಾರ್ಗದಲ್ಲಿ ಕೆಳಗೆ ಬಿದ್ದಿರುವ ಸನ್ನಿವೇಶವನ್ನು ಚಿತ್ರಿಸುವುದು.

- ವಿಶ್ವಆರೋಗ್ಯ ಸಂಸ್ಥೆಯ 1945 ಹೇಳಿಕೆಯ ಪ್ರಕಾರ ಒಂದು ಜೀವಿಯ ದೇಹ-ಮನಸ್ಸು ಸಂಪೂರ್ಣ ಸಮತೋಲನದಲ್ಲಿರು ಸ್ಥಿತಿಯನ್ನುಆರೋಗ್ಯಎಂದು ಕರೆಯಬಹುದು. ಆರೋಗ್ಯ ನಮ್ಮ ಜೀವನದ ಪ್ರಮುಖ ಅಂಶವಾಗಿದೆ.
- ಡಾ॥ಬ.ಬ.ಡಯರ್ಅವರುಹೇಳುತ್ತಾರೆ"ಆರೋಗ್ಯವಂತರಾಗಿರುವುದುಸಹಜವಾದುದು.ಅದನ್ನುಸಾಧಿಸಿಕೊಳ್ಳಲು ಅಗತ್ಯವಾದಅಂಶಗಳುಪ್ರತಿಯೊಬ್ಬರಲ್ಲೂಇದೆ
- ಎಲ್ಲರೂಕಾರ್ಬೋಹೈಡ್ರೇಟ್.ಪ್ರೋಟೀನು.ಕೊಬ್ಬು.ವಿಟಮಿನ್ಸ್ಮತ್ತುಲವಣಾಂಶಗಳು. ಹದವಾಗಿರುವಸಮತೋಲನದಆಹಾರವನ್ನುಸೇವಿಸಬೇಕುಈಆಹಾರದಪ್ರಮಾಣವುನಮ್ಮವಯಸ್ಸು. ಎತ್ತರಮತ್ತುಮಾಡುವಕೆಲಸಕ್ಕೆಅನುಗುಣವಾಗಿರಬೇಕು.
- ಧೂಮಪಾನ ಮತ್ತು ಮಧ್ಯಪಾನಗಳಂತ ಹಚಟಗಳಿಗೆ ನಾವು ಬಲಿಯಾಗಬಾರದು ಅವು ನಮ್ಮ ಆರೋಗ್ಯವನ್ನು ಸರ್ವನಾಶ ಮಾಡಿ ಸಾವನ್ನು ಹತ್ತಿರಕ್ಕೆಎಳೆದುತರುತ್ತದೆ. ಆರೋಗ್ಯವುಕೇವಲದೇಹಕ್ಕೆಮಾತ್ರಸಂಬಂಧಿಸಿದ್ದಲ್ಲಾ.ಆದರೆಸಂಪೂಣಸ್ವಾಸ್ಥ್ಯವನ್ನುಶರೀರಮತ್ತುಮನಸ್ಸುಗಳೆರಡರಆರೋಗ್ಯಕರಸ್ಥಿತಿಎಂದುಹೇಳಬಹುದು.
- ಜುವೆನಲ್ಎಂಬವಿಡಂಬನಕಾರನಪ್ರಸಿದ್ದಉಕ್ತಿಯೂ "ದೃಢವಾದಶರೀರದಲ್ಲಿದೃಢವಾದಮನಸ್ಸು"ಎಂಬುದನ್ನುನೆನಪಿನಲ್ಲಿಡಬೇಕು.

**ಚಟುವಟಿಕೆ :-**

ಐದು ಗುಂಪುಗಳನ್ನು ಮಾಡಿ ಪ್ರತಿಗುಂಪಿಗೆ ಒಂದು ಪರಿಕಲ್ಪನೆ ನೀಡಿ ಚರ್ಚೆಮಾಡಿ ವಿಷಯ ಮಂಡಿಸಲು ತಿಳಿಸುವುದು.

| ಪರಿಕಲ್ಪನೆ | ಚರ್ಚಿಸಬೇಕಾದಅಂಶಗಳು |
|---|---|
| ಸ್ವಚ್ಛಗಾಳಿ | 1. ಸ್ವಚ್ಛ ಗಾಳಿ ಎಂದರೇನು?<br>2. ಸ್ವಚ್ಛ ಗಾಳಿ ಅನುಕೂಲಗಳೇನು?<br>3. ಅಶುದ್ದ ಗಾಳಿಯಿಂದಾಗುವ ದುಷ್ಪಪರಿಣಾಮಗಳೇನು?<br>4.ಶಿಕ್ಷಕರು ಮಕ್ಕಳಿಗೆ ಸ್ವಚ್ಛಗಾಳಿಯ ಕುರಿತು ಅರಿವು ಮೂಡಿಸಬೇಕಾದ ಕ್ರಮಗಳು |
| ಪೌಷ್ಟಿಕಆಹಾರ | 1. ಪೌಷ್ಟಿಕ ಆಹಾರ ಎಂದರೇನು?<br>2. ಪೌಷ್ಟಿಕ ಆಹಾರದ ಪ್ರಾಮುಖ್ಯತೆ ಏನು?<br>3. ಪೌಷ್ಟಿಕ ಆಹಾರದ ಘಟಕಗಳು ಯಾವುವು?<br>4. ಶಿಕ್ಷಕರು ಮಕ್ಕಳಿಗೆ ಪೌಷ್ಟಿಕ ಆಹಾರ ಕುರಿತು ಅರಿವು ಮೂಡಿಸ ಬೇಕಾದ ಕ್ರಮಗಳು |
| ನೈರ್ಮಲ್ಯ ಅಥವಾ ಶುಚಿತ್ವ | 1. ನೈರ್ಮಲ್ಯ ಅಥವಾ ಶುಚಿತ್ವ ಎಂದರೇನು?<br>2. ಮಕ್ಕಳಲ್ಲಿನೈರ್ಮಲ್ಯ ಅಥವಾ ಶುಚಿತ್ವ ಕಾಪಾಡುವ ಹಂತಗಳು ಯಾವುವು?<br>3. ಶುಚಿತ್ವ ಕಾಪಾಡುವಲ್ಲಿ ಪೋಷಕರ ಜವಾಬ್ದಾರಿಗಳೇನು?<br>4. ಶಿಕ್ಷಕರು ಮಕ್ಕಳಿಗೆ ಶುಚಿತ್ವ ಕುರಿತು ಅರಿವು ಮೂಡಿಸ ಬೇಕಾದ ಕ್ರಮಗಳು |
| ವ್ಯಾಯಾಮಗಳು ಮತ್ತುಯೋಗ | 1.ವ್ಯಾಯಾಮ ಎಂದರೇನು?<br>2. ವ್ಯಾಯಾಮದಿಂದಾಗುವ ಪ್ರಯೋಜನಗಳು ಏನು?<br>3. ವ್ಯಾಯಾಮ ಮಾಡದೆಯಿದ್ದರೆ ಆರೋಗ್ಯದ ಮೇಲೆ ಉಂಟಾಗುವ ದುಷ್ಪಪರಿಣಾಮಗಳೇನು?<br>4. ಶಿಕ್ಷಕರು ಮಕ್ಕಳಿಗೆ ವ್ಯಾಯಾಮದ ಕುರಿತು ಅರಿವು ಮೂಡಿಸಬೇಕಾದ ಕ್ರಮಗಳು |

| | |
|---|---|
| **ಸರಿಯಾದ ಶಾರೀರಿಕ ಭಂಗಿ** | 1. ಸರಿಯಾಗಿ ನಿಲ್ಲುವ ಮತ್ತು ಕುಳಿತುಕೊಳ್ಳುವ ಶಾರೀರಿಕ ಭಂಗಿಗಳು ಯಾವವು?<br>2.ಸರಿಯಾದ ಶಾರೀರಿಕ ಭಂಗಿ ಇಲ್ಲದೇಯಿದ್ದರೆ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳೇನು?<br>3. ಸರಿಯಾದ ಶಾರೀರಿಕ ಭಂಗಿಯಿಂದ ಪ್ರಯೋಜನಗಳು ಏನು?<br>4. ಶಿಕ್ಷಕರು ಮಕ್ಕಳಿಗೆ ಸರಿಯಾದ ಶಾರೀರಿಕ ಭಂಗಿಗಳ ಕುರಿತು ಅರಿವು ಮೂಡಿಸಬೇಕಾದ ಕ್ರಮಗಳು |

## ಸ್ವಚ್ಛಗಾಳಿ

- ನಮ್ಮಆರೋಗ್ಯದಮೇಲೆಹೆಚ್ಚುಪ್ರಭಾವಬೀರುವಅಂಶವೆಂದರೆನಾವುಉಸಿರಾಡುವಗಾಳಿ.. ನಮ್ಮಸುತ್ತಮುತ್ತಲಿನವಾತಾವರಣವುಶುದ್ಧವಾಗಿಇರುವಂತೆನೋಡಿಕೊಳ್ಳುವುದುನಮ್ಮೆಲ್ಲರಹೊಣೆಯಾಗಿದೆ.
- ಅದಕ್ಕಾಗಿವಿದ್ಯಾರ್ಥಿಗಳಿಗೆವಾಯುಮಾಲಿನ್ಯಕ್ಕೆಕಾರಣಗಳುಯಾವವು? ಅದನ್ನುಹೇಗೆತಡೆಗಟ್ಟುವುದುಎಂಬುದರಬಗ್ಗೆಜಾಗೃತಿಮೂಡಿಸಬೇಕು. ಸ್ವಚ್ಛಗಾಳಿಯಮಹತ್ವಅದುಹೇಗೆದೊರೆಯುತ್ತದೆಎಂಬುದರಬಗ್ಗೆಪ್ರಾತ್ಯೇಕ್ಷಿಕವಾಗಿತೋರಿಸಿಕೊಟ್ಟುಹೆಚ್ಚುಮರಗಳನ್ನುಬೆಳೆಸುವಂತೆಮಕ್ಕಳಲ್ಲಿಮತ್ತುಸಮುದಾಯದಲ್ಲಿಜಾಗೃತಿಮೂಡಿಸುವುದು.ಅನಿವಾರ್ಯವಾಗಿದೆ.
- ಈನಿಟ್ಟಿನಲ್ಲಿ ಸರ್ಕಾರವೂಶಾಲಾಆವರಣದಲ್ಲಿಸಸಿಗಳನ್ನುನೆಡಲುಸಸ್ಯಶಾಮಲಾಎಂಬಕಾರ್ಯಕ್ರಮಹಮ್ಮಿಕೊಂಡಿದ್ದು. ಒಂದುಒಳ್ಳೆಯಪರಿಸರವನ್ನುರೂಪಿಸಲುಶ್ರಮಿಸುತ್ತಿದೆ.

## ಪೌಷ್ಟಿಕಆಹಾರ

- ಮನುಷ್ಯನಮೂಲಭೂತಅಗತ್ಯಗಳಲ್ಲಿಆಹಾರವೂಒಂದು.ನಾವುಬದುಕಲುಆಹಾರಬಹುಮುಖ್ಯ. ಆದರೆನಾವುಎಂಥಆಹಾರವನ್ನುಯಾವಾಗಎಷ್ಟುಪ್ರಮಾಣದಲ್ಲಿಸೇವಿಸಬೇಕೆಂಬುದುಬಹುಮುಖ್ಯ. ಪೌಷ್ಟಿಕಆಹಾರಎಂದರೆ?ಅದರಲ್ಲಿಕ್ಯಾಲೋರಿಜೊತೆಮಿನರಲ್ಸ. ವಿಟಮಿನ್ಸಹಾಗೂನಾರುಪದಾರ್ಥಗಳಿಂದಕೂಡದಂಥಹಆಹಾರವನ್ನುಪೌಷ್ಟಿಕಆಹಾರಅಥವಾಪರಿಪೂರ್ಣ ಆಹಾರಎಂದುಕರೆಯುತ್ತಾರೆ.
- ಎಲ್ಲಮಕ್ಕಳಿಗೆಪರಿಪೂರ್ಣಆಹಾರವೂದೊರೆಯುವಂತೆಪಾಲಕರೂಹಾಗೂಶಾಲೆಯಲ್ಲಿಶಿಕ್ಷಕರೂಮತ್ತುಅಧಿಕಾರಿವರ್ಗದವರೂಗಮನವಹಿಸುವುದುಬಹುಮುಖ್ಯವಾಗಿದೆ.

## ನೈರ್ಮಲ್ಯ ಅಥವಾ ಶುಚಿತ್ವ

- ಎಲ್ಲಮಕ್ಕಳಿಗೆಶುಚಿತ್ವದಬಗ್ಗೆಒಳ್ಳೆಯಮಾರ್ಗದರ್ಶನೀಡುವುದುಅವಶ್ಯಕವಾಗಿದೆ. ಕಾರಣಬಹಳಷ್ಟುಆರೋಗ್ಯಸಮಸ್ಯೆಗಳುವೈಯಕ್ತಿಕಶುಚಿತ್ವಯಿಲ್ಲದಕಾರಣಮಕ್ಕಳುಅನೇಕರೋಗಗಳಿಗೆತುತ್ತಾಗುವಂತೆಮಾಡುತ್ತಿದೆ.

## ಮಕ್ಕಳುಪಾಲಿಸಲೇಬೇಕಾದಆರುಶುಚಿತ್ವದಅಭ್ಯಾಸಗಳು :

- 1) **ಬಾಯಿಯ ಶುಚಿತ್ವ**
- 2) ಸ್ನಾನದ ಆಚರಣೆ
- 3) ಕೈಕಾಲು ಮತ್ತು ಪಾದದ ಶುಚಿತ್ವ

ಶಾಲೆಯಲ್ಲಿಮತ್ತುಮನೆಯಲ್ಲಿಕೈತೊಳೆಯುವಆರುಹಂತಗಳನ್ನುಹೇಳಿಕೊಟ್ಟುಆಹಂತಗಳನ್ನುಕೈತೊಳೆಯುವಾಗಅನ್ವಯಿಸಿಕೊಳ್ಳುವಂತೆನೋಡಿಕೊಳ್ಳುವುದು

- 4) ಶೌಚಾಲಯದಶುಚಿತ್ವ
- 5) **ಸೀನುವಾಗಮತ್ತುಕೆಮ್ಮುವಾಗನೈರ್ಮಲ್ಯತೆ**
- 6) ಮನೆಯಸ್ವಚ್ಛತೆ.

ಇಲ್ಲಿ ವೈಯಕ್ತಿಕ ಶುಚಿತ್ವ ಇಲ್ಲದಿದ್ದರೆ, ಸಾಮಾನ್ಯವಾಗಿ ಮಕ್ಕಳಲ್ಲಿ ಕಂಡು ಬರುವ ಮತ್ತೊಂದು ಆರೋಗ್ಯ ಸಮಸ್ಯೆ ಎಂದರೆ ಜಂತುಹುಳದ ಸಮಸ್ಯೆ, ಜಂತುಹುಳುಗಳಿಂದ ಮಕ್ಕಳಲ್ಲಿ ಕಂಡುಬರುವ ಆರೋಗ್ಯಸಮಸ್ಯೆಗಳೆಂದರೆ ಹೊಟ್ಟೆನೋವು ಅಜೀರ್ಣ ಹಾಗೂ ಗುದದ್ವಾರದಬಳಿಕೆರಿತ, ವಾಂತಿ ಹೊಟ್ಟೆಉಬ್ಬರ, ಕಾಮಾಲೆ ಹಾಗೂ ರಕ್ತಹೀನತೆ ಇತ್ಯಾದಿ ಈ ಎಲ್ಲಾ ಆರೋಗ್ಯಸಮಸ್ಯೆಗಳು ಬರಲು ಕಾರಣವೇನೆಂದರೆ ನೈರ್ಮಲ್ಯದ ಕೊರತೆಯಿಂದ ಬರುತ್ತದೆ.

- · ಮಕ್ಕಳು ಸರಿಯಾಗಿ ಕೈ ತೊಳೆಯದೆ ಇರುವುದು.
- · ನಿಯಮಿತವಾಗಿ ಉಗುರಗಳನ್ನು ಕತ್ತರಿಸದೇ ಇರುವುದು.
- · ತರಕಾರಿ ಹಣ್ಣುಗಳನ್ನು ಸ್ವಚ್ಛವಾಗಿ ತೊಳೆಯದೇ ಉಪಯೋಗಿಸುದರಿಂದ
- ಮಕ್ಕಳು ಪಾದರಕ್ಷೆಯನ್ನು ಬಳಸದೇ ಓಡಾಡುವುದು.

- **ಇವು ಎಲ್ಲವು ಜಂತುಹುಳುಗಳು ಶರೀರದಲ್ಲಿ ಸೇರಲು ಅವಕಾಶವನ್ನು ಕಲ್ಪಿಸುತ್ತವೆ. ಈ ಜಂತುಹುಳುಗಳ ನಿವಾರಣೆಗಾಗಿ** ಶಾಲೆಯಲ್ಲಿ ಪ್ರತಿ ವಿದ್ಯಾರ್ಥಿಗಳಿಗೆ ಜಂತುಹುಳದ ಮಾತ್ರೆಗಳನ್ನು ನೀಡುತ್ತಿದು. ಈ ಮಾತ್ರೆಯನ್ನು ಒಂದರಿಂದ ಹನ್ನೆರಡು ವರ್ಷವಯಸ್ಸಿನ ಮಕ್ಕಳು ತೆಗೆದುಕೊಳ್ಳಬಹುದು. ಮತ್ತು 2 ರಿಂದ ೧೯ ವರ್ಷದ ಮಕ್ಕಳು 400 ಟಿಐ ಮಾತ್ರೆಯನ್ನು ಆರು ತಿಂಗಳಿಗೊಮ್ಮೆ ತಗೆದುಕೊಳ್ಳಬೇಕು.ಇದು ಸರ್ಕಾರದ ಯೋಜನೆಯಾಗಿದೆ. ಈ ಮಾತ್ರೆಗಳನ್ನು ಪ್ರತಿಯೊಂದು ಮಗು ತೆಗೆದುಕೊಳ್ಳುವಂತೆ ಪಾಲಕರು ಶಾಲಾ ಸಿಬ್ಬಂದಿಗಳುಗಮನವಹಿಸಬೇಕೆ. ಅದು ಅಲ್ಲದೆ ರಕ್ತಹೀನತೆ ಮುಂತಾದುಗಳ ಕೊರತೆಗಳನ್ನುನೀಗಿಸಲುಶಾಲೆಗಳಲ್ಲಿಫೋಲೇಟ,ವಿಟಮಿನ,ಜಿಂಕ್ಮತ್ತುವಿಟಮಿನ್ಡಿಮಾತ್ರೆಗಳನ್ನುಒದಗಿಸುತ್ತಿದೆ. ಮಕ್ಕಳುಇದನ್ನುತಪ್ಪದೆಸೇವಿಸುವಂತೆಗಮನ ವಹಿಸುವುದು.

## ವ್ಯಾಯಾಮಗಳು




ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳುವ ನಿಯಮಿತವಾಗಿ ವ್ಯಾಯಾಮ ಮಾಡುವುದು ಅತ್ಯಗತ್ಯ. ಹಾಗಿಲ್ಲದೇ ಹೋದರೆ ದೈಹಿಕದೌರ್ಬಲ್ಯ ಮತ್ತು ಬೇನೆಗಳಿಂದ ಮನಸ್ಸು ವಿಕ್ಷಿಪ್ತವಾಗುತ್ತದೆ. ಆಯಾಸವಿಲ್ಲದೆ ದೈನಂದಿನ ಕೆಲಸವನ್ನುಸರಾಗವಾಗಿ ಮಾಡಲು ವ್ಯಾಯಾಮವು ನೆರವಾಗುತ್ತದೆ.ಇದು ನಿಮ್ಮಲ್ಲಿ ಇರುವ ಆನಂದದಮೂಲಸ್ರೋತ್ರವೂ ಹೌದು. ನಿತ್ಯವೂ ಮಾಡುವ ವ್ಯಾಯಾಮವು ನಿಮ್ಮ ಅವಯವಗಳನ್ನು ಮೆದುವಾಗಿಸಿ,ಅವುನಿಮ್ಮಇಚ್ಛೆಗನುಸಾರವಾಗಿ ಮಣಿಯುವಂತೆ ಮಾಡುತ್ತದೆ. ನಮ್ಮ ಶರೀರಕ್ಕೆ ಉತ್ತಮ ವ್ಯಾಯಾಮವನ್ನು ಒದಗಿಸುವ ಹಲವಾರು ಚಟುವಟಿಕೆಗಳಿವೆ.

•ವ್ಯಾಯಾಮವು ದೈಹಿಕಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

•ರಕ್ತಪರಿಚಲನಾ ವ್ಯವಸ್ಥೆಯು ಇದರಿಂದ ಉತ್ತಮಗೊಳ್ಳುವುದು.


•ರಕ್ತಕ್ಕೆ ಆಮ್ಲಜನಕವನ್ನು ಪೂರೈಸುವ ಕಾರ್ಯಸಾಮರ್ಥ್ಯವು ವ್ಯಾಯಾಮ ದಿಂದ ಅಭಿವೃದ್ಧಿಗೊಳ್ಳುವುದು.

•ಮಾನಸಿಕವಾಗಿ ಇದು ಆಳವಾದ ಪರಿಣಾಮವನ್ನು ಉಂಟುಮಾಡುವುದು, ಆತ್ಮಗೌರವಸ್ವಾಸ್ಥ್ಯ ಆತ್ಮವಿಶ್ವಾಸಗಳನ್ನು ವೃದ್ಧಿಪಡಿಸಿ ಮಾನಸಿಕ ಒತ್ತಡಗಳನ್ನು ತಾಳಿಕೊಳ್ಳುವ ಸಹಿಷ್ಣುತೆಯನ್ನು ಬೆಳೆಸುತ್ತದೆ.

•ಈಜುವಾಗಶರೀರದಎಲ್ಲಾಸ್ನಾಯುಗಳುದುಡಿಯುವುದರಿಂದಅದೊಂದು"ಸಮಗ್ರವ್ಯಾಯಾಮ"ವಾಗಿದೆಎಂದು ವೈದ್ಯರು ಅಭಿಪ್ರಾಯಪಡುತ್ತಾರೆ, ಒಟ್ಟಾರೆ ವ್ಯಾಯಾಮವು ವ್ಯಕ್ತಿಯ ಇಡೀ ಜೀವನಶೈಲಿಯನ್ನೆ ಪ್ರಭಾವಿಸುತ್ತದೆ.

ವ್ಯಾಯಾಮ ಮಾಡುವಾಗ ದೀರ್ಘವಾಗಿ ಉಸಿರಾಡುವುದು ಲಾಭದಾಯಕ, ವಾಸ್ತವವಾಗಿ ಇದೊಂದು ರೂಢಿಯಾದರೆ ಒಳ್ಳೆಯದು, ಬೇರೆ ಕೆಲಸಗಳನ್ನು ಮಾಡುವಾಗಲೂ ದೀರ್ಘವಾದ ಸಹಜಸ್ವಭಾವವೇ ಆಗಿ ಹೋಗಬೇಕು.ಯೋಗದಲ್ಲಿ ಹೇಳಿರುವ "ಪುಣಯಾಮದತತ್ವ" ಇದೇ ಆಗಿದೆ. ವ್ಯಾಯಾಮ ಆತ್ಮನಿಯಂತ್ರಣ ಶಕ್ತಿಯನ್ನುನೀಡಿ ತನ್ಮೂಲಕ ನಮ್ಮಚಾರಿತ್ರ್ಯವನ್ನು ಪುಷ್ಟಿಗೊಳಿಸುವುದು ಜೊತೆಗೆ ದೃಢವಾದ ದೇಹದಿಂದ ಪ್ರೇರಿತವಾದ ಮನಸ್ಸಿನ ಮೂಲಕ ಹೆಚ್ಚಿನ ಭೌದ್ಧಿಕ ಕೆಲಸವನ್ನು ಮಾಡಲುಬೇಕಾದ ಶಕ್ತಿದೊರೆಯುವುದು. ವ್ಯಾಯಾಮ ದಿಂದ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವ ವಿಷಯವನ್ನು ಮಕ್ಕಳಿಗೆ ಹೇಳಿಕೊಟ್ಟು. ವಿವಿಧ ರೀತಿ ವ್ಯಾಯಾಮ ಮತ್ತು ಯೋಗಾಸವನ್ನು ಶಾಲೆಯಲ್ಲಿ ಮಕ್ಕಳಿಗೆ ರೂಢಿ ಮಾಡಿಸುವುದು,ಪ್ರತಿವರ್ಷ ಜೂನ್ 21 ರಂದು ಅಂತರಾಷ್ಟ್ರೀಯ ಯೋಗ ದಿನಾಚರಣೆ ಆಚರಣೆ ಮಾಡಲಾಗುತ್ತಿದೆ. ಇದರಿಂದ ಮಕ್ಕಳಲ್ಲಿ ಮತ್ತು ಸಮಾಜದಲ್ಲಿ ವ್ಯಾಯಾಮವೂ ಆರೋಗ್ಯವಾಗಿರಲೂ ಎಷ್ಟುಮುಖ್ಯ ಎಂದು ಪ್ರತಿನಿಧಿಸುತ್ತದೆ.

### ಸರಿಯಾದ ಶಾರೀರಿಕ ಭಂಗಿ ನಿಂತಿರುವಾಗ,




ಕುಳಿತಿರುವಾಗ ಮಲಗಿರುವಾಗ ಮತ್ತು ನಡೆಯುವಾಗ ಗಾಂಭಿರ್ಯವನ್ನು ಸೂಸುವ ಸರಿಯಾದ ಶಾರೀರಿಕ ಭಂಗಿಯನ್ನು ಕಾಯ್ದು ಕೊಳ್ಳಬೇಕು,ಇದು ಮನಸ್ಸಿನ ಕ್ರೀಯಾಶೀಲತೆಯನ್ನು ಹೆಚ್ಚಿಸಿ ಆತ್ಮವಿಶ್ವಾಸವನ್ನು ಬೆಳೆಸುತ್ತದೆ. ತಪ್ಪು ಭಂಗಿಗಳು ಬೆನ್ನುಹುರಿಯಲ್ಲಿ ಅಸಹಜವಾದ ತಿರುವುಗಳನ್ನು ಉಂಟು ಮಾಡಿ ಶರೀರದ ಅಸಮತೋಲನಕ್ಕೆ ಕಾರಣವಾಗುತ್ತದೆ, ಮಂಕು ಹಿಡಿದವರಂತೆ ತೂರಾಡುತ್ತ ನಡೆದರೆ ನೀವು ಶಕ್ತಿಯನ್ನು ಸರಿಯಾಗಿ ಬಳಸುತ್ತಿಲ್ಲ ಎಂದರ್ಥ. ಬೆನ್ನನ್ನು ನೇರವಾಗಿಟ್ಟು ಕೊಂಡು ಭುಜಗಳನ್ನು ಸರಿಯಾಗಿ ಹಿಂದಕ್ಕೆ ಎಳೆದು ಎದೆಯನ್ನು ಮುಂದೆ ಚಾಚಿ ನಡೆಯುವ ವ್ಯಕ್ತಿಯು ಶಕ್ತಿವಂತ ನಾಗಿರುತ್ತಾನೆ, ಇದು ಆತನ ಶರೀರ ಮತ್ತು ಮನಸ್ಸನ್ನು ಲವಲವಿಕೆಯಿಂದಡುವುದು ಮಾತ್ರವಲ್ಲದೆ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ, "ನಿಮ್ಮಶರೀರವು ನಿಮ್ಮ ಕಾಲುಗಳ ಮೇಲೆ ದೃಢವಾಗಿ ನಿಂತಾಗ ಉಪನಿಷತ್ತುಗಳನ್ನು ಮತ್ತು ಆತ್ಮದಹಿರಿಮೆಯನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಮರ್ಥರಾಗಿರುತ್ತೀರಿ ಎನ್ನುತ್ತಾರೆ ಸ್ವಾಮಿವಿವೇಕಾನಂದರು.

### ಮಕ್ಕಳು ಹೊಂದಬಹುದಾದ ಶಾರೀರಿಕ ಭಂಗಿಗಳು

•ನಿಂತಿರುವಾಗ ಎರಡೂ ಕಾಲುಗಳ ಮೇಲೆ ಸಮಭಾರವನ್ನು ಬಿಟ್ಟುನಿಂತು ಕೊಳ್ಳಬೇಕು
•ಪಕ್ಕದಲ್ಲಿರುವ ಗೋಡೆಗೆ ಒರಗಿ ನಿಲ್ಲುವುದು ಒಳ್ಳೇಯ ಲಕ್ಷಣವಲ್ಲ.
•ತೋಳುಗಳನ್ನು ಮಡಚಿ ಕೊಂಡಿರಬಾರದು ಎದೆಯನ್ನು ಮುಂದೆ ಮಾಡಿ ಗಲ್ಲವನ್ನು ಮೇಲೆ ತ್ರಿಭುಜಗಳನ್ನು ಸಡಿಲ ಬಿಟ್ಟು ಮುಂದಕ್ಕೆ ಅಥವಾ ಹಿಂದಕ್ಕೆ ಭಾಗದೆ ನೆಟ್ಟಗೆ ನಿಲ್ಲಬೇಕು.
•ಓಡುವಾಗ ಮತ್ತು ಬರೆಯುವಾಗ ಕುರ್ಚಿಯನ್ನು ಮೇಜಿಗೆ ಹತ್ತಿರವಾಗಿ ಎಳೆದು ಕೊಂಡಲ್ಲಿ ನೆಟ್ಟಗೆ ಕುಳಿತು ಕೆಲಸಮಾಡಲು ಸಹಾಯ ವಾಗುವುದು, ಇದರಿಂದ ಹೆಚ್ಚು ಕಾಲ ಆಯಾಸವಿಲ್ಲದೇ ಕೆಲಸ ಮಾಡುವುದು ಸಾಧ್ಯವಾಗುತ್ತದೆ.
•ಕುರ್ಚಿಯ ಮೇಲೆ ಕುಳಿತಾಗ ಕಾಲುಗಳನ್ನು ಮುಂದಕ್ಕೆ ಚಾಚಿರ ಬಾರದು ಮುಖ್ಯವಾದ ಸಂಗತಿಯೆಂದರೆ ಎಲ್ಲಾ ಶಾರೀರಿಕ ಭಂಗಿಗಳಲ್ಲಿಯೂ ನೀವು ಕ್ರಿಯಾಶೀಲರಾಗಿದ್ದೀರಿ ಎಂಬ ಅಂಶ ಎದ್ದು ಕಾಣುವಂತಿರಬೇಕು.
•ಅಸಮರ್ಪಕ ಶಾರೀರಿಕ ಭಂಗಿಗಳಿಂದ ಸೊಟ್ಟಕಾಲುಗಳು,ಗೋನು,ಶರೀರಿದ ಕೆಳಭಾಗದ ಬೆನ್ನುನೋವು ಉಂಟಾಗುತ್ತದೆ. ಜೊತೆಗೆ ಉಬ್ಬಸ ನಂತಹ ಸಮಸ್ಯೆಗಳು ಉದ್ಭವಿಸಬಹುದು.

**ದೈಹಿಕಮತ್ತುಮಾನಸಿಕಸದೃಢತೆಗೆಅನುಸರಿಸುವಕ್ರಮಗಳುಯಾವವು?**

## 7. ಸಂತುಲಿತ ಆಹಾರ

ಮನುಷ್ಯನ ಮೂಲಭೂತ ಅಗತ್ಯಗಳಲ್ಲಿ ಆಹಾರವೂ ಒಂದು,ನಾವು ಬದುಕಲು ಆಹಾರ ಬಹುಮುಖ್ಯ, ಆದರೆ ನಾವು ಎಂಥ ಆಹಾರವನ್ನು ಯಾವಾಗ ಎಷ್ಟು ಪ್ರಮಾಣದಲ್ಲಿ ಸೇವಿಸ ಬೇಕೆಂಬುದು ಬಹುಮುಖ್ಯ.ನಮ್ಮ ಆರೋಗ್ಯಕ್ಕೂ ಹವಾಮಾನಕ್ಕೂ ಹತ್ತಿರದ ಸಂಬಂಧವಿದೆ.ಅದಕ್ಕೆ ತಕ್ಕಂತೆ ನಮ್ಮ ಆಹಾರ ವ್ಯವಸ್ಥೆಯನ್ನು ಹೊಂದಿಸಿಕೊಳ್ಳಬೇಕು. ಉದಾಹರಣೆಗೆ ಚಳಿಗಾಲದಲ್ಲಿ ದೇಹವನ್ನು ಬೆಚ್ಚಗಿರುವ ಎಣ್ಣೆಪದಾರ್ಥಗಳು ತರಕಾರಿಗಳು ಬಿಸಿಯಾದ ಆಹಾರವನ್ನು ಸೇವಿಸಬೇಕು ಆದರೆ ಬೇಸಿಗೆಯಲ್ಲಿ ತಂಪಾದ ಆಹಾರ ಪದಾರ್ಥ ಲಘು ಪೋಷಕಾಂಶಗಳು ತರಕಾರಿಗಳು ಹೆಚ್ಚಾಗಿ ದ್ರವರೂಪದ ಪದಾರ್ಥಗಳನ್ನು ಸೇವಿಸುವುದು ಉತ್ತಮ.

**ಆಹಾರ ಎಂದರೇನು ?**

**ಜೀವಿಗಳ ಶರೀರವನ್ನು ಪೋಷಿಸಲು ಅಗತ್ಯವಾದ ರಸಾಯನಿಕ ಅಂಶಗಳನ್ನು ಹೊಂದಿರುವ ವಸ್ತುಗಳಿಗೆ ಆಹಾರ ಎನ್ನುತ್ತಾರೆ.** ನಾವು ಸೇವಿಸಿದ ಆಹಾರ ಎಷ್ಟು ಚೆನ್ನಾಗಿ ಜೀರ್ಣವಾಗುತ್ತದೆ ಮತ್ತು ಜೀವಕೋಶಗಳಿಗೆ ತಲುಪುತ್ತದೆ ಎಂಬುದರ ಮೇಲೆ ನಮ್ಮ ಆರೋಗ್ಯ ಅವಲಂಬಿತವಾಗಿರುತ್ತದೆ.

**ಉತ್ತಮ ಆರೋಗ್ಯಕ್ಕೆ 07 ರೀತಿಯ ಆಹಾರದ ಘಟಕಗಳು ಅವಶ್ಯಕ ಅವುಗಳು.**

1) ಕಾರ್ಬೋಹೈಡ್ರೇಟ್ಸ್‌ಗಳು
2) ಲಿಪಿಡ್ಸ್‌ಗಳು
3) ಪ್ರೋಟೀನುಗಳು
4) ಜೀವಸತ್ವಗಳು
5) ಲವಣಗಳು
6) ನೀರು
7) ನಾರುಪದಾರ್ಥಗಳು



ಮಕ್ಕಳು ಸೇವಿಸ ಬೇಕಾದ ಆಹಾರಗಳು ಮತ್ತು ಪಾಲಿಸಬೇಕಾದ ಶುಚಿತ್ವಗಳು

- ಮಕ್ಕಳಿಗೆ ಪರಿಪೂರ್ಣಆಹಾರ ದೊರೆಯುವಂತೆ ನೋಡಿಕೊಳ್ಳಬೇಕು, ಅಂದರೆ ಏಳು ರೀತಿಯ ಆಹಾರದ ಘಟಕಗಳನ್ನು ಹೊಂದಿರು ಆಹಾರ
- ಮಕ್ಕಳು ಹಸಿ ತರಕಾರಿಗಳು ಸೊಪ್ಪು ಮತ್ತು ಹಣ್ಣುಗಳನ್ನು ಸೇವಿಸುವಂತೆ ನೋಡಿಕೊಳ್ಳಬೇಕು.
- ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸೇವಿಸಬೇಕು.

ಮಕ್ಕಳು ಎಲ್ಲ ರೀತಿಯ ಧಾನ್ಯಗಳು ಅದರಲ್ಲಿ ಮುಖ್ಯವಾಗಿ ಸಿರಿಧಾನ್ಯಗಳನ್ನು ಸೇವಿಸುವಂತೆ ಗಮನವಹಿಸ ಬೇಕು ಮತ್ತು ಇವುಗಳ ಸೇವನೆಯಿಂದ ಆಗುವ ಅನೂಕೂಲತೆಯ ಬಗ್ಗೆ ಮಕ್ಕಳಿಗೆ ತಿಳಿಸಬೇಕು.

ಪೌಷ್ಟಿಕಆಹಾರವನ್ನು ಸೇವಿಸುವುದು ಎಷ್ಟು ಮುಖ್ಯವೋ ಆಹಾರವನ್ನು ತಯಾರಿಸುವಾಗ ಎಚ್ಚರಿಕೆಯನ್ನು ವಹಿಸುವುದೂ ಅಷ್ಟೇ ಮುಖ್ಯವಾಗಿದೆ.

**ಅನಾರೋಗ್ಯಕರ ಆಹಾರ ಅಥವಾ ಜಂಕ್ಫುಡ್ಸ್:**

ಯಾವ ಆಹಾರದಲ್ಲಿ ಕೇವಲ ಕ್ಯಾಲೋರಿ ಮಾತ್ರವಿದ್ದು ವಿಟಾಮಿನ್ಗಳು ಮಿನರಲ್ಗಳು ನಾರುಪದಾರ್ಥ ಇಲ್ಲದೆ ಇದ್ದರೆ ಇಂತಹ ಆಹಾರವನ್ನು ಅನಾರೋಗ್ಯಕರ ಅಥವಾ ಜಂಕಫುಡ್ಸ್ ಎಂದು ಕರೆಯುತ್ತಾರೆ.

ಈ ಜಂಕಫುಡ್ಸ ಅಟ್ರಾಪ್ರೋಸೆಸ್ಡಫುಡ್ಸಲ್ಲಿ ಹೆಚ್ಚಾಗಿ ಸಕ್ಕರೆ ಉಪ್ಪು ಮತ್ತು ಫ್ಯಾಟ ಇರುತ್ತದೆ. ಇದು ಆರೋಗ್ಯಕ್ಕೆ ಉತ್ತಮ ಅಲ್ಲ.



**ಮಕ್ಕಳು ಸೇವಿಸದಂತೆ ನೋಡಿಕೊಳ್ಳುವ ಕೆಲವು ಅನಾರೋಗ್ಯಕರ ಆಹಾರಗಳು:**

- ಚಿಜ್ಹಾಗೂಪಿನಟಬಟರ್
- ಕೆಚೆಫ್
- ಚಾಕಲೆಟ್ಸ ಮತ್ತು ಕ್ಯಾಂಡಿಗಳು
- ಫ್ರೂಟಜ್ಯೂಸಗಳು
- ಐಸ್ಕ್ರೀಮ್ಸಗಳು
- ಬಿಸ್ಕೀಟಗಳು ಮತ್ತು ಕೂಕಿಗಳು
- ಕಾರ್ಬೋನೇಟೇಟ ತಂಪು ಪಾನಿಗಳು
- ಬೇಕರಿ ಉತ್ಪನ್ನಗಳು
- 

ಫಿಜಾ,ಬಗರ್,ಮ್ಯಾಗಿ,ಪ್ರೇಂಚ್ಫ್ರಾಯಿಜ್,ಚೈನಿಜ್ಫುಡ್ಇಂತಹಆಹಾರಗಳನ್ನುಮಕ್ಕಳುಸೇವಿಸದಂತೆ ಪಾಲಕರು ಕಾಳಜಿ ವಹಿಸಬೇಕು.

**ಅನಾರೋಗ್ಯಕರ ಆಹಾರ ಸೇವನೆಯಿಂದ ಮಕ್ಕಳಲ್ಲಿ ಉಂಟುಮಾಡುವ ದುಷ್ಪರಿಣಾಮಗಳು:**

ಅಪೌಷ್ಟಿಕ ಆಹಾರ ಸೇವನೆಯಿಂದ ಮಕ್ಕಳಲ್ಲಿ ಅನೇಕ ಸಮಸ್ಯೆಗಳು ಅವರನ್ನು ಬಾದಿಸುತ್ತವೆ, ಅವುಗಳು.

- ಹೈಪರ್ಟೆನಶನ
- ಕುಂಠಿತ ಬೆಳವಣಿಗೆ
- ಸ್ಥೂಲಕಾಯ
- ಖಿನ್ನತೆ

ಇತ್ಯಾದಿ ಸಮಸ್ಯೆಗಳನ್ನು ಮಗು/ಮಕ್ಕಳು ಎದುರಿಸಬೇಕಾಗುತ್ತದೆ.

ಮಕ್ಕಳ ಸರ್ವತೋಮುಖ ಬೆಳವಣಿಗೆ ಅವರು ಊಟ ಮಾಡುವ ತಟ್ಟೆಯೂ ಅರ್ಧದಷ್ಟು ಹಣ್ಣು ಮತ್ತು ತರಕಾರಿಯಿಂದ ತುಂಬಿರ ಬೇಕು ಕಾಲು ಭಾಗಧಾನ್ಯಗಳು ಇರಬೇಕು ಮತ್ತು ಕಾಲುಭಾಗ ಪ್ರೋಟಿನ ಇರಬೇಕು ಹಾಗೂ ಇನ್ನುಳಿದ ಭಾಗ ಹಾಲುಮೊಸರು ಅಥವಾ ಹಾಲಿನ ಉತ್ಪನ್ನದಿಂದ ಮಾಡಿದ ಆಹಾರ ಇರಬೇಕು.

ಪ್ರತಿಯೊಂದುಮಗುಪೌಷ್ಠಿಕಆಹಾರವನ್ನುಸೇವಿಸುವುದುಅದರಹಕ್ಕುಆಗಿದೆ. ಯಾವುದೇ ಮಗು ಪೌಷ್ಠಿಕ ಆಹಾರ ದಿಂದ ವಂಚಿತ ವಾಗದಂತೆ ಪಾಲಕರೂ, ಶಿಕ್ಷಕರು ಇದರ ಬಗ್ಗೆ ಅತೀವವಾಗಿ ಕಾಳಜಿವಹಿಸಿ ಗುಣಮಟ್ಟತೆ ಕಾಪಾಡಲು ಕೈ ಜೊಡಿಸಬೇಕು.

## 8. ಅಂತರ್ಜಾಲ

**ಅಂತರ್ಜಾಲದ ಬಳಕೆಯಿಂದಾಗುವ ಲಾಭಹಾನಿಗಳ ಕುರಿತು ಚರ್ಚೆ.........**

**ನಾವುಇಂಟರ್ನೆಟ್ಯುಗದಲ್ಲಿವಾಸಿಸುತ್ತೀದ್ದೇವೆ,ಅದು ನಮ್ಮ ಜೀವನದ ಪ್ರಮುಖ ಭಾಗವಾಗಿದೆ. ಇಂದಿನ ಜನರ ಜೀವನದಲ್ಲಿ ಅಂರ್ಜಾಲವು ಮಹತ್ವದ ಪಾತ್ರವನ್ನು ವಹಿಸುತ್ತದೆ. ಇದು ಜನರು ಮಾಹಿತಿಯನ್ನು ಹಂಚಿಕೊಳ್ಳಲು ಮತ್ತು ಯಾವುದೇ ಮೂಲೆಯಲ್ಲಿ ಕುಳಿತಿರುವ ಯಾರೊಂದಿಗೂ ಸಂವಹನ ನಡೆಸಲು ಸಹಾಯ ಮಾಡುವ ಅಮೂಲ್ಯವಾದ ಮಾಹಿತಿಯ ಮೂಲವಾಗಿದೆ. ಎಲ್ಲವನ್ನು ಹೆಚ್ಚು ಸುಲಭವಾಗಿ ಮತ್ತು ತ್ವರಿತವಾಗಿ ಮಾಡಬಹುದಾಗಿದೆ.ಅವುಗಳು ಸುರಕ್ಷತೆ ಮತ್ತು ಗೌಪ್ಯತೆಯ ಸಮಸ್ಯೆಗಳು, ನಿಜಜೀವನದಲ್ಲಿ ಮತ್ತು ಅಪರಿಚಿತರಲ್ಲಿ ಮಕ್ಕಳಿಗೆ ತಿಳಿದಿರಬಹುದಾದ ಸಾಮಾಜಿಕ ಸಮಸ್ಯೆಗಳು ಹಾಗೂ ಅಂತರ್ಜಾಲ ಬಳಕೆಯಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳು ಸೇರಿದಂತೆ ವ್ಯಾಪಕವಾದ ಅಪಾಯಗಳಿವೆ. ಎಲ್ಲಾ ವಯಸ್ಸಿನ ಮಕ್ಕಳ ಪಾಲಕರು ಅಂತರ್ಜಾಲ ಸುರಕ್ಷತೆಯ ಬಗ್ಗೆ ಕಾಳಜಿ ವಹಿಸಬೇಕು. ಆದರೆ ಈ ಅಪಾಯಗಳು 1 ರಿಂದ 10 ನೇ ತರಗತಿಯಲ್ಲಿ ಓದುತ್ತಿದ್ದ ಮಕ್ಕಳ ಮೇಲೆ ಕೇಂದ್ರೀಕರಿಸುತ್ತದೆ. ಆದರೆ ಮೊದಲನೆಯದಾಗಿ ಅಂತರ್ಜಾಲ ತನ್ನ ಬಳಕೆದಾರರಿಗೆ ಅನೇಕ ಪ್ರಯೋಜನಗಳನ್ನು ಒದಗಿಸುತ್ತದೆ. ಎಂಬುದನ್ನು ಗಮನಿಸುವುದು ಮುಖ್ಯ, ಸಮೂಹಮಾಧ್ಯಮಗಳು ಅಭೂತಪೂರ್ವ ಪ್ರಮಾಣದ ಮಾಹಿತಿಗೆ ಪ್ರವೇಶವನ್ನು ಹೊಂದಿದೆ, ಹಾಗೂ ಪ್ರಪಂಚದಾದ್ಯಂತ ಹೆಚ್ಚಿನ ಸಂಖ್ಯೆಯ ಜನರನ್ನು ಸಂಪರ್ಕಿಸಲು ಅವಕಾಶ ನೀಡುವದರಿಂದ ಖಂಡಿತವಾಗಿಯೂ ಪ್ರಯೋಜನವಾಗುತ್ತದೆ. ಆದಾಗ್ಯೂ ಅಂತರ್ಜಾಲವನ್ನು ಬಳಸುವುದರಿಂದ ಖಂಡಿತವಾಗಿಯೂ ಅಪಾಯಗಳ ನ್ಯಾಯೋಚಿತಪಾಲು ಸಹಬರುತ್ತದೆ.ವೆಬ್ನ್ನುಹೇಗೆಸುರಕ್ಷಿತವಾಗಿ ಟೋನ್ವಿಗೇಟ್ಮಾಡುವುದು ಎಂದು ತಿಳಿದಿಲ್ಲದ ಮಕ್ಕಳಿಗೆ ಈ ಅಪಾಯಗಳು ವರ್ಧಿಸುತ್ತವೆ, ಪೋಷಕರಾಗಿ ಈ ಅಪಾಯಗಳ ಬಗ್ಗೆ ತಿಳಿದಿರಬೇಕು, ಆದ್ದರಿಂದ ನೀವು ನಿಮ್ಮ ಮಕ್ಕಳನ್ನು ಉತ್ತಮವಾಗಿ ರಕ್ಷಿಸಬಹುದು ಮತ್ತು ಅವರು ಆನ್ಲೈನ್ನಲ್ಲಿ ಧನಾತ್ಮಕ ಮತ್ತು ಸುರಕ್ಷಿತ ಅನುಭವಗಳನ್ನು ಹೊಂದಿದ್ದಾರೆಂದು ಖಚಿತ ಪಡಿಸಿಕೊಳ್ಳಬಹುದು.**

## ಸೈಬರ್ಬುಲ್ಲಿಂಗ್ಎಂದರೇನು?

**ಪರಿಕಲ್ಪನೆಯು ತುಲನಾತ್ಮಕವಾಗಿ ನೇರವಾಗಿರುತ್ತದೆ, ಸೆಲ್ಫೋನಗಳು ಕಂಪ್ಯೂರ್ಮ್ ತ್ತು ಟ್ಯಾಬ್ಲೆಟ್ಗಳಂತಹ ಡಿಜಿಟಲ್ಸಾಧನಗಳ ಮೂಲಕ ಸಂಭವಿಸುವ ಬೆದರಿಸುವಿಕೆ ಸೈಬರ್ಬುಲ್ಲಿಂಗ್ ಆಗಿದೆ, ಈ ಸಾಧನಗಳನ್ನು ಬಳಸುವುದರಿಂದ** SMS,**ಪಠ್ಯಗಳು, ಆಪ್ಲೀಕೇಶಗಳು, ಅಥವಾ ಇತರೆ ಸಮೂಹಮಾಧ್ಯಮ ಪ್ಲಾಟ್ಫಾರ್ಮಗಳು, ವೇದಿಕೆಗಳು ಅಥವಾ ಗೇಮಿಂಗ್ಮೂಲಕ ಸೈಬರ್ಬುಲ್ಲಿಂಗ್** ಸಂಭವಿಸುತ್ತದೆ, **ಈ ಪ್ಲಾಟ್ಫಾರ್ಮಗಳು ವಿಷಯವನ್ನು ವೀಕ್ಷಿಸಲು, ಬಾಗವಹಿಸಲು ಅಥವಾ ಹಂಚಿಕೊಳ್ಳಲು ಜನರಿಗೆ ಅವಕಾಶಮಾಡಿ ಕೊಡುತ್ತವೆ. ಸೈಬರ್ಬುಲ್ಲಿಂಗ್ ಆಗಾಗ್ಗೆ ಪೋಸ್ಟ ಮಾಡುವುದು ಅಥವಾ ಋಣಾತ್ಮಕ, ಹಾನಿಕಾರಕ ತಪ್ಪು ಅಥವಾ ಬೇರೊಬ್ಬರ ಬಗ್ಗೆ ಅಥವಾ ಗುಪ್ತವಿಷಯವನ್ನು ಹಂಚಿಕೊಳ್ಳುವುದನ್ನು ಒಳಗೊಂಡಿರುತ್ತದೆ, ಕೆಲವೊಮ್ಮೆ ಮುಜುಗರ ಅಥವಾ ಅವಮಾನವನ್ನು ಉಂಟುಮಾಡುವ ಬೇರೊಬ್ಬರ ಬಗ್ಗೆ ವೈಯಕ್ತಿಕ ಅಥವಾ ಖಾಸಗಿ ಮಾಹಿತಿಯನ್ನು ಹಂಚಿಕೊಳ್ಳುವುದನ್ನು ಒಳಗೊಂಡಿರುತ್ತದೆ.ಈ ನಡುವಳಿಕೆ ಸಾಮಾನ್ಯವಾಗಿ ಕ್ರಿಮಿನಲ್ ಅಲ್ಲದಿದ್ದರೂ ಕೆಲವೊಮ್ಮೆ ಸೈಬರ್ಬುಲ್ಲಿಂಗ್ ವ್ರುಸ್ವರೂಪಗಳನ್ನು ಪಡೆದುಕೊಳ್ಳುತ್ತದೆ, ಕಿರುಕುಳವು ಚಿಕ್ಕದಾರೂ ಅದು ಸಮಸ್ಯೆಗಳಿಗೆ ಕಾರಣವಾಗಬಹುದು. ಆದರಿಂದ ಪಾಲಕರು ಈ ವಿಷಯದಲ್ಲಿ ತುಂಬಾ ಎಚ್ಚರಿಕೆ ಯಿಂದ ವಿಷಯ ವನ್ನು ಅರ್ಥೈಸಿಕೊಂಡು ಸೂಕ್ತಕ್ರಮದಿಂದ ಮಕ್ಕಳನ್ನು ಇದರಿಂದ ರಕ್ಷಿಸಬೇಕು ಮತ್ತು ಅವರ ಮೇಲೆ ಸದಾಗಮನವನ್ನು ಇಡಬೇಕು. ಮಾನಸಿಕ ಆರೋಗ್ಯದ ಕಾಳಜಿ ನಮ್ಮ ಮಾನಸಿಕ ಆರೋಗ್ಯಕ್ಕೆ ತಂತ್ರಜ್ಞಾನವು ಯಾವಾಗಲೂ ಪ್ರಯೋಜನಕಾರಿಯಲ್ಲ, ವಿಶೇಷವಾಗಿ ಮಕ್ಕಳು ಈ ಅಪಾಯಗಳಿಗೆ ಗುರಿಯಾಗುತ್ತಾರೆ,ಉದಾಹರಣೆ,ಅಂತರ್ಜಾಲ ಚಟ ಇದಕ್ಕೆ ಸಂಬಂಧಿತ ನೈಜ-ಪ್ರಪಂಚದಪರಿಣಾಮಗಳು ಆತಂಕ ಮತ್ತು ಖಿನ್ನತೆಗಳು ಕಳೆದ ಕೆಲವು ವಷಗಳಿಂದ ಅತಿಯಾದ ಇಂಟರ್ನೆಟ ಬಳಕೆ ಮತ್ತು ಮಾನಸಿಕ ಅಸ್ವಸ್ಥತೆಗಳ ನಡುವಿನ ಪರಸ್ಪರ ಸಂಬಂಧದ ಅಧ್ಯಯನವು ನಡೆದಿದೆ, ಈ ಅಧ್ಯಯನದಿಂದ ಇಂಟರ್ನೆಟ ಆಡಿಕ್ಷನ್ (Iಂ) ಎಂಬಪದವನ್ನು 1998ರ ಅಧ್ಯಯನದಲ್ಲಿ ಬಳಸಲಾಯಿತು, ಇದು ಅಮಲು ಪದಾರ್ಥವನ್ನು ಒಳಗೊಂಡಿದರ ಉದ್ವೇಗ ನಿಯಂತ್ರಣ ಅಸ್ವಸ್ಥತೆ ಎಂದು ವ್ಯಾಖ್ಯಾನಿಸಲಾಗಿದೆ. Iಂ ಎನ್ನುವದು ಅಂತರ್ಜಾಲದ ಮೇಲೆಮನೋವೈಜ್ಞಾನಿಕಅವಲಂಬನೆಯಾಗಿದೆ, ಅದ**ರ **ಬಳಕೆಯ ಮೇಲೆ ಕೇಂದ್ರಿಕರಿಸುತ್ತದೆ. ಮಾನಸಿಕ ಅಸ್ವಸ್ಥತೆಗಳಿಗಾಗಿ ಡಯಾಗ್ನೋಸ್ಟಿಕ್ಮತ್ತುಸ್ಟಾಟಿಸ್ಟಿಕಲ್ಮ್ಯಾನ್ಯುಯಲ್ನ ಹೊಸಆವೃತ್ತಿ (ಆSಒ-S) ಪಟ್ಟಿಮಾಡಲಾಗಿದೆ. ಇಂಟರ್ನೇಟವ್ಯಸನವು ಗುರುತಿಸಲ್ಪಟ್ಟ ಅಸ್ವಸ್ಥ ರೋಗಲಕ್ಷಣಗಳು.ಕಳಪೆ ಯೋಜನಾ ಸಾಮರ್ಥ್ಯಗಳು,ಅನಹಿಷ್ಟುಣತೆ,ದುರ್ಬಲ ನಿಯಂತ್ರಣ, ಅತಿಯಾದ ಆನ್ಲೈನ ಬಳಕೆಯಿಂದ ಸಮಯದ ವ್ಯಯವಾಗುತ್ತದೆ ಎಂಬುದನ್ನು ಅರಿಕೆ ಮಾಡುವುದು.**

## ದೈಹಿಕ ಆರೋಗ್ಯದ ಮೇಲೆ ಪರಿಣಾಮ:

ಹೆಚ್ಚಿನ ಸಮಯ ಆನ್ಲೈನ್ನಲ್ಲಿ ಸಮಯ ಕಳೆಯುದರಿಂದ ನಿಮ್ಮ ಮಗುವಿನ ದೈಹಿಕ ಆರೋಗ್ಯದ ಮೇಲೂ ಪರಿಣಾಮ ಬೀರಿತ್ತದೆ, ಇದು ಅಸಂಖ್ಯಾತ ಸಮಸ್ಯೆಗಳಿಗೆ ಕಾರಣವಾಗಬಹುದು, ಉದಾಹರಣೆಗೆ ಮಸುಕಾದ ದೃಷ್ಟಿ ಕುತ್ತಿಗೆ ಮತ್ತು ಬೆನ್ನುನೋವು ಅಧಿಕ ರಕ್ತದೊತ್ತಡ, ಬೊಜ್ಜುಹೆಚ್ಚುತ್ತದೆ.ಅತಿಯಾದ ಕಂಪ್ಯೂಟರ ಆಟಗಳು, ದೂರದರ್ಶನವನ್ನು ವೀಕ್ಷಿಸುವುದು ಮತ್ತು ಇಂಟರ್ನೆಟ ಬಳಕೆಗಳು ಭೌತಿ ಕಚಟುವಟಿಕೆಯನ್ನು ಕಡಿಮೆವಾಗಿಸಿವೆ. ಆದ್ದರಿಂದ ಈ ಸಮಸ್ಯೆಗಳಿಗೆ ಪರಿಹಾರವು. ಮಕ್ಕಳಿಗೆ ದೈಹಿಕಶ್ರಮವನ್ನು ವಹಿಸುವಂತೆ ಚಟುವಟಿಕೆ ನೀಡುವುದು. ಇದು ಪಾಲಕರ ಮತ್ತು ಶಿಕ್ಷಕರ ಜವಾಬ್ದಾರಿಯಾಗಿದೆ. ಸೂಕ್ತವಲ್ಲದ ವಿಷಯ ಮಕ್ಕಳು ವೀಕ್ಷಿಸಲು ಗ್ರಾಫಿಕ್, ಲೈಗಿಂಕ ಅಥವಾ ಸೂಕ್ತವಲ್ಲದ ಚಿತ್ರಗಳು, ವೀಡಿಯೋಗಳು ಮತ್ತು ಮಾಹಿತಿಯಿಂದ ಅಂತರ್ಜಾಲ ತುಂಬಿದೆ, ಇಲ್ಲಿ ಹುಡುಕಾಟ, ಪೋಷಕರ ನಿಯಂತ್ರಣಗಳು ಹಾಗೂ ಕಂಟೆಂಟಫಿಲ್ಟ್ರಳಂತಹ ವೈಶಿಷ್ಟಗಳು ಸಹ ಇದ್ದರು ಆಗಾಗ ಮಕ್ಕಳು ಹಾನಿಕಾರಕ ವಿಷಯವನ್ನು ಎದುರಿಸುತ್ತಾರೆ. ದುರದೃಷ್ಟವಶಾತ್, ಚಿಕ್ಕವಯಸ್ಸಿನ ಮಕ್ಕಳು ಅಂದರೆ'8'ಮತ್ತು 9 ವರ್ಷ ವಯಸ್ಸಿನವರು ಆಗಾಗ್ ಆನ್ಲೈನನಲ್ಲಿ ಅನುಚಿತ ವಿಷಯವನ್ನು ಎದುರಿಸುತ್ತಾರೆ.ಇಂತಹ ಮಕ್ಕಳು ನಂತರದ ಜೀವನದಲ್ಲಿ ಅನುಭವಿಸ ಬಹುದಾದ ಕೆಲವು ಪ್ರಮುಖ ಋಣಾತ್ಮಕ ಪರಿಣಾಮಗಳು ಈ ರೀತಿಯಾಗಿವೆ.

**ಆರಂಭಿಕಲೈಂಗಿಕತೆ:-**ಮಾಧ್ಯಮದಲ್ಲಿ ಲೈಂಗಿಕತೆಯ ವಿಷಯಕ್ಕೆ ಸಂಬಂಧಿಸಿದ ವಿಡಿಯೋಚಿತ್ರಗಳು ಆಗಾಗ್ಗೆ ಮಾಧ್ಯಮಗಳು ಆರಂಭಿಕ ಲೈಂಗಿಕ ಪ್ರಯೋಗವನ್ನು ಸಾಮಾನ್ಯಗೊಳಿಸಿದವು, ಇದು ಲೈಗಿಂಕತೆಯನ್ನು ಪ್ರಾಸಂಗಿಕ ಅಸುರಕ್ಷಿತ ಮತ್ತು ಪರಿಣಾಮ ಮುಕ್ತವಾಗಿ ಚಿತ್ರಿಸುತ್ತದೆ. ಮಕ್ಕಳು ಭಾವನಾತ್ಮಕವಾಗಿ, ಸಾಮಾಜಿಕವಾಗಿ ಹಾಗೂ ಭೌದ್ಧಿಕವಾಗಿ ಸಿದ್ದವಾಗುವ ಮುಂಚೆಯೇ ಇದು ಖಂಡಿತವಾಗಿ ಯೂ ಲೈಂಗಿಕ ಚಟುವಟಿಕೆಯನ್ನು ಪ್ರೋತ್ಸಾಹಿಸುತ್ತದೆ.

**ಪರಭಕ್ಷಕರು:-**ಇಂಟರ್ನೆಟ್ ಇದನ್ನು ಬಳಸುವ ಮೂಲಕ ವಯಸ್ಕರು ದುರದೃಷ್ಟವಶಾತ್ಮಕ್ಕಳನ್ನು ಗುರಿಯಾಗಿಸಲು ಬಳಸುತ್ತಿದ್ದು, ಮಕ್ಕಳು ನಿಜಜೀವನದಲ್ಲಿ ಅಪರಿಚಿತರ ಬಗ್ಗೆ ಜಾಗರೂಕರಾಗಿರಬೇಕು, ಅಂತರ್ಜಾಲ ಬಳಸುವಾಗ ಅಂತಹ ಜನರ ಬಗ್ಗೆ ಜಾಗರೂಕರಾಗಿರಬೇಕು, ಪರಭಕ್ಷಕರು ಮಕ್ಕಳನ್ನು ಗುರಿಯಾಗಿಸಲು ತಂತ್ರಜ್ಞಾನವನ್ನು ಬಳಸುತ್ತಾರೆ, ಇದು ಗಂಭೀರವಾದ ಗಮನಾರ್ಹವಾದ ಅಪರಾಧವಾಗಿದ್ದರೂ ನಂಬಲಾಗದ ಪರಿಣಾಮಗಳನ್ನು ಉಂಟುಮಾಡುತ್ತದೆ.

**ಹಾನಿಗೊಳಗಾದಖ್ಯಾತಿ:**- ನಿಮ್ಮ ಮಗು ಆಕಸ್ಮಿಕವಾಗಿ ಸಂದೇಶವನ್ನು ಕಳುಹಿಸಬಹುದು ಅಥವಾ ಸ್ಥಿತಿ ನವೀಕರಣವನ್ನು ಪೋಸ್ಟ ಮಾಡಬಹುದು ಇದು ಪಾಲಕರನ್ನು ಮುಜುಗರಕೊಳ್ಳಗಾಗುವಂತೆ ಮಾಡಬಹುದು, ಆದರಿಂದ ಪಾಲಕರೂಜಾಗರೂಕರಾಗಿ ನಿರ್ವಹಿಸಬೇಕು.

**ಆನ್ಲೈನ್ವಂಚನೆಗಳು:-**ಜನರು ಪ್ರಯತ್ನಿಸಿದ ಮಾರ್ಗಗಳಿಗೆ ಅಂತ್ಯವಿಲ್ಲ ಇಂಟರ್ನೆಟ ಬಳಸಿ ಇತರರನ್ನು ವಂಚಿಸುವುದು. ಮಕ್ಕಳು ಈ ವಂಚನೆಗಳಿಗೆ ಸುಲಭವಾಗಿ ಬೀಳಬಹುದು, ವಿಶೇಷವಾಗಿ ಅವರು ಏನನ್ನು ನೋಡಬೇಕೆಂದು ಅವರಿಗೆ ತಿಳಿದಿಲ್ಲದಿದ್ದರೆ, ಸಾಮಾನ್ಯ ಹಗರಣಗಳ ಬಗ್ಗೆ ಮತ್ತು ಅವುಗಳನ್ನು ತಪ್ಪಿಸಲು ಅವರು ಏನುಮಾಡಬಹುದು ಎಂಬುದನ್ನು ನಿಮ್ಮ ಮಗುವಿಗೆ ಕಲಿಸಲು ಮರೆಯದಿರಿ.

**ಗುರುತಿನಕಳ್ಳತನ :-**ಗುರುತಿನ ಕಳ್ಳತನವು ಆನ್ಲೈನ್ನಲ್ಲಿ ದೊಡ್ಡಸಮಸ್ಯೆಯಾಗಿದೆ. ಏಕೆಂದರೆ ಖಾಸಗಿ ಗುರುತಿಸುವ ಮಾಹಿತಿಯನ್ನು ಕದಿಯಲು ಇಂಡರ್ನೆಟ ಕಳ್ಳರಿಗೆ ಹೆಚ್ಚಿನ ಮಾರ್ಗಗಳನ್ನು ಒದಗಿಸಿದೆ. ಗುರುತಿನ ಕಳ್ಳತನದ ಸಾಮಾನ್ಯಗುರಿಗಳಲ್ಲಿ ಮಕ್ಕಳು ಸೇರಿದ್ದಾರೆ, ಅವರಕ್ಲೀನ್ಕ್ರಖಲೆಗಳ ಕಾರಣದಿಂದಾಗಿ ನಿಮ್ಮ ಸ್ವಂತ ಮಗುವನ್ನು ಗುರಿಯಾಗಿಸಬಹುದು. ಆದರಿಂದ ನೀವು ಯಾವಾಗಲೂ ಲುಕ್ಔಟ್ ಆಗಿರಬೇಕು. ಗುರುತಿನ ಕಳ್ಳತನವು ನಿಸ್ಸಂಶಯವಾಗಿ ಗಂಭೀರ ಸಮಸ್ಯೆಯಾಗಿದೆ.

**ಅನಾರೋಗ್ಯಕರ ಮಾರ್ಗಗಳು ಡಿಜಿಟಲ್ಜಾಹೀರಾತುಗಳು ಮಕ್ಕಳನ್ನು ಗುರಿಯಾಗಿಸಬಹುದು:** ಟಿವಿ ಜಾಹೀರಾತುಗಳಂತೆ ಮಕ್ಕಳನ್ನು ಗುರಿಯಾಗಿಟ್ಟುಕೊಂಡು ಜಾಹೀರಾತು ಮಾಡುವುದು ಹೊಸದೇನಲ್ಲ. ಇಂದಿನ ಡಿಜಿಟಲ್ಸ್ಪೇಪನಲ್ಲಿ ಆದಾಗ್ಯೂ ಮಾರ್ಕೆಟಿಂಗ್ ಸಂದೇಶಗಳು ಕಡಿಮೆ ಸ್ಪಷ್ಟವಾದ ಆದರೆ ಹೆಚ್ಚು ನೇರವಾಗಿ ಮಾರ್ಗಗಳಲ್ಲಿ ಯುವಜನರನ್ನು ತಲುಪುತ್ತವೆ. ಇಂಟರ್ನೆಟ್.ಸಮೂಹಮಾಧ್ಯಮ,ವೀಡಿಯೋಗೇಮಗಳು, ಮೊಬೈಲ್ ಆಪ್ಲಿಕೇಶನಗಳು ಅಥವಾ ವೆಬ್ಸಂಪರ್ಕಿತ "ಸ್ಮಾರ್ಟ್" ಆಟಿಕೆಗಳು ಮತ್ತು ಇತರ ಸಾಧನಗಳನ್ನು ಬಳಸುತ್ತಿರುವ ಮಕ್ಕಳು ಮತ್ತು ಹದಿಹರೆಯದವರು ಮಾರ್ಕೆಟಿಂಗ್ಸಂ ದೇಶಗಳಿಗೆ ಗುರಿಯಾಗುತ್ತಾರೆ, ಉದಾಹರಣೆಗಾಗಿ"ಗೇಮಿಫೈಡ್"

ಜಾಹೀರಾತುಗಳು (ಆಡ್ವರಗೇಮಗಳು) ಎಂದು ಕರೆಯುತ್ತಾರೆ, 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗಾಗಿ ಹೆಚ್ಚು ಡೌನಲೋಡ ಮಾಡಲಾದ 96% ಉಚಿತ ಆಪಲಿಕೇಶನಗಳು ವಾಣಿಜ್ಯ ವಿಷಯವನ್ನು ಹೊಂದಿವೆ ಎಂದು ಸಂಶೋಧನೆ ತೋರಿಸುತ್ತದೆ. ಅಮೇರಿಕನ ಅಕಾಡೆಮಿ ಆಫ್ಪಿಡಿಯಾಟಿಕ್ಸಆನ್ಲೈನ್ಮಾರ್ಕೆಟಿಂಗ್ಮಕ್ಕಳ ಆರೋಗ್ಯ ಮತ್ತು ಯೋಗಕ್ಷೇಮದ ಮೇಲೆ ನಕಾರಾತ್ಮಕ ಪರಿಣಾಮಗಳನ್ನು ಬೀರುವ ವಿಧಾನಗಳನ್ನು ಎತ್ತಿ ತೋರಿಸುತ್ತದೆ. ಇಂಥಹ ಒಂದು ಸಂದರ್ಭದಲ್ಲಿ ಪೋಷಕರು ಏನು ಮಾಡಬಹುದು. ನಿಮ್ಮ ಮಕ್ಕಳಿಗೆ ಡಿಜಿಟಲ್ಸಾಕ್ಷರತೆಯ ಬಗ್ಗೆ ಮಾರ್ಗದರ್ಶನ ನೀಡಿ, ಹೇಗೆ ಜಾಹೀರಾತುಗಳು ಮತ್ತು ಮಾರ್ಕೆಟಿಂಗ್ಸಂದೇಶಗಳನ್ನು ಅರ್ಥಮಾಡಿಕೊಳ್ಳಲು ಮತ್ತು ವಿಮರ್ಶಾತ್ಮಕವಾಗಿ ಯೋಚಿಸಲು ಸಹಾಯಮಾಡಿರಿ, ಕಡಿಮೆ ಜಾಹೀರಾತುಗಳೊಂದಿಗೆ ಗುಣಮಟ್ಟದ ಮಾಧ್ಯಮ ವಿಷಯದ ಕಡೆಗೆ ಮಾರ್ಗದರ್ಶನ ಡಿಜಿಟಲ್ ಉತ್ಪನ್ನಗಳನ್ನು ತಪ್ಪಿಸಲು ಮತ್ತು ಅವರು ಬಳಸುವ ಶಿಕ್ಷಣ ತಂತ್ರಜ್ಞಾನ ಸಾಧನೆಗಳಲ್ಲಿ ಡಿಜಿಟಲ್ಗೌಪ್ಯತೆ ಸೆಟ್ಟಿಂಗ್ಗಳನ್ನು ಬಳಸುವ ಕುರಿತು ಶಾಲಾ ನಿರ್ವಾಹಕರು ಮತ್ತು ಶಿಕ್ಷಕರೊಂದಿಗೆ ಮಾತನಾಡಿ. ನಿರಂತರ ಸಮೂಹಮಾಧ್ಯಮಗಳ ಬಳಕೆಯಿಂದ ಮಕ್ಕಳು ಹಾಗೂ ಹದಿಹರೆಯದವರ ಮೇಲೆ ಹೇಗೆ ಪರಿಣಾಮ ಬೀರಬಹುದು ಅದರ ಅಪಾಯಗಳು ಮತ್ತು ಪ್ರಯೋಜನಗಳು ಇಂದಿನ ಮಕ್ಕಳು ಮತ್ತು ಹದಿಹರೆಯದವರು ಡಿಜಿಟಲ್ಮಾಧ್ಯಮದಲ್ಲಿ ಮುಳುಗಿಬೆಳಯುತ್ತಿದ್ದಾರೆ, ಇದು ಟಿವ್ಹಿ ಮತ್ತು ವೀಡಿಯೊಗಳಿಂದ ಸಾಮಾಜಿಕಮಾಧ್ಯಮ ವೀಡಿಯೋಗೇಮಗಳು ಮತ್ತು ಇನ್ನೂ ಹೆಚ್ಚಿನದವರೆಗೆ ಇರುತ್ತದೆ ಮತ್ತು ಇದು ಬಹುಸಾಧನಗಳಲ್ಲಿ,ಕಂಪ್ಯೂಟರಗಳು,ಇ-ರೀಡರಗಳು,ಗೇಮಿಂಗ್, ಸ್ಮಾರ್ಟಫೋನ್ಗಳು ಮತ್ತು ಇತರೆ ಪರದೆಗಳಲ್ಲಿ ಲಭ್ಯವಿದೆ.

## ಮಕ್ಕಳು ಮತ್ತು ಮಾಧ್ಯಮ ಬಳಕೆ:

ಇತ್ತೀಚಿನ ಅಂಕೆ ಸಂಖ್ಯೆಗಳ ಪ್ರಕಾರಕಾ ಮನಸೆನ್ಸ ಮೀಡಿಯಾ ವರದಿಯ ಪ್ರಕಾರ ಮಕ್ಕಳು (ವಯಸ್ಸು 8-12 ವಷಗಳು) ಮತ್ತು ಹರಿಹರೆಯದವರ(ವಯಸ್ಸು13-18ವಷಗಳು).ಸಮೂಹಮಾಧ್ಯಮಗಳಬಳಕೆಯು ಆಗಿದೆ. 19 ಸಾಂಕ್ರಾಮಿಕ ದಿಂದ ಎರಡು ವರ್ಷಗಳಲ್ಲಿ ನಾಲ್ಕುವಷಗಳ ಹಿಂದಿನದಕ್ಕಿಂತ ವೇಗವಾಗಿ ಎಂದೆ ಎಂದು ಸಂಶೋಧನೆ ತೋರಿಸುತ್ತದೆ.8 ರಿಂದ 12 ವರ್ಷವಯಸ್ಸಿನವರು ದಿನಕ್ಕೆ ಸರಾಸರಿ ಐದೂವರೆ ಗಂಟೆಗಳ ಕಾಲಪರದೆಯ ಮುಂದೆ ಮತ್ತು ಸಮೂಹಮಾಧ್ಯಮವನ್ನು ಬಳಸುತ್ತಿದ್ದಾರೆ ಎಂದು ಸಂಶೋಧನೆಯು ಕಂಡುಹಿಡಿದಿದೆ. ಆದರ ಹದಿಹರೆಯದವರಿಗೆ ದಿನಕ್ಕೆ ಒಂದೂವರೆ ಗಂಟೆಗಳವರೆಗೆ ಹೆಚ್ಚಾಗುತ್ತದೆ.

ಡಿಜಿಟಲ್ಮಾಧ್ಯಮವನ್ನುಏಕೆಬಳಸಬೇಕು? ಡಿಜಿಟಲ್ಮೀಡಿಯಾ ಬಳಕೆಯಿಂದ ಹೊಸ ಆಲೋಚನೆಗಳು ಮತ್ತು ಮಾಹಿತಿಗೆ ಬಳಕೆದಾರರನ್ನು ಬಹಿರಂಗಪಡಿಸಿ,ಪ್ರಸ್ತುತ ಘಟನೆಗಳು ಮತ್ತು ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಿ, ಸಮುದಾಯದ ಭಾಗವಹಿಸುವಿಕೆಯನ್ನು ಉತ್ತೇಜಿಸಿ, ನಿಯೋಜಿನೆಗಳು ಮತ್ತು ಯೋಜನೆಗಳಲ್ಲಿ ಇತರೊಂದಿಗೆ ಕೆಲಸ ಮಾಡಲು ವಿದ್ಯಾರ್ಥಿಗಳಿಗೆ ಸಹಾಯಮಾಡಿ, ಪ್ರಯೋಜನೆಗಳನ್ನು ತಿಳಿಸಿರಿ. ಕುಟುಂಬಗಳು ಮತ್ತು ಸ್ನೇಹಿತರು ಅವರು ಎಲ್ಲಿ ವಾಸಿಸುತ್ತಿದ್ದರೂ ಸಂಪರ್ಕದಲ್ಲಿರಲು ಅನುಮತಿಸಿ, ವಿಶೇಷವಾಗಿ ಅನಾರೋಗ್ಯ ಅಥವಾ ಅಂಗವೈಕಲ್ಯ ಹೊಂದಿದ ಜನರಿಗೆ ಕ್ಷೇಮ ಮತ್ತು ಆರೋಗ್ಯಕರ ನಡುವಳಿಕೆಗಳನ್ನು ಉತ್ತೇಜಿಸಲು ಸಹಾಯಮಾಡಿ, ಉದಾಹರಣೆಗೆ ಧೂಮಪಾನವನ್ನು ತೊರೆಯುವುದು ಅಥವಾ ಆರೋಗ್ಯಕರವಾಗಿ ತಿನ್ನುವುದು ಹೇಗೆ. ಮಕ್ಕಳು ಮತ್ತು ಹದಿಹರೆಯದವರು ಹೇಗೆ ಭಾವಿಸುತ್ತಾರೆ. ಕಲಿಯುತ್ತಾರೆ ಯೋಚಿಸುತ್ತಾರೆ,ಮತ್ತು ವರ್ತಿಸುತ್ತಾರೆ ಎಂಬುದನ್ನು ಮಾಧ್ಯಮವು ಪ್ರಭಾವಿಸುತ್ತದೆ. ಇದಕ್ಕಾಗಿಯೇ ಡಿಜಿಟಲ್ಮೀಡಿಯಾಗಳ ಅಪಾಯಗಳು ಮತ್ತು ಪ್ರಯೋಜನಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ನಿಮ್ಮ ಕುಟುಂಬಕ್ಕೆ ಅವುಗಳನ್ನು ಹೇಗೆ ಸಮತೋಲನದಲ್ಲಿ ಇಡುವುದು ಎಂಬುದನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ.

## ಮಕ್ಕಳ ಮೇಲೆ ಆನಲೈನ್ವಿಡಿಯೋಗೇಮಗಳ ಋಣಾತ್ಮಕ ಪರಿಣಾಮಗಳು:

ಮಕ್ಕಳು ಆನ್ಲೈನ್ವಿಡಿಯೋ ಗೇಮಗಳನ್ನು ಆಡುವುದರಿಂದ ಕನಿಷ್ಠ 12 ಋಣಾತ್ಮಕ ಪರಿಣಾಮಗಳನ್ನು ಎದುರಿಸುತ್ತಾರೆ ಅವುಗಳು ಹೀಗಿವೆ.

1) ಕಳಪೆ ನಿದ್ರೆ
2) ದೈಹಿಕ ಆರೋಗ್ಯಕ್ಷೀಣತೆ
3) ನಿಶ್ಯಕ್ತಿ
4) ನಿರ್ಜಲೀಕರಣ
5) ಬೊಜ್ಜು ಮತ್ತು ಹೃದಯದ ತೊಂದರೆಗಳು
6) ಆಕ್ರಮಣಶೀಲತೆ
7) ಪ್ರೇರಣೆಯಕೊರತೆ
8) ಖಿನ್ನತೆ
9) ಆತ್ಮಹತ್ಯಾಆಲೋಚನೆಗಲು
10) ಸಾಮಾಜಿಕ ಆತಂಕ
11) ಕಳಪೆ ಭಾವನಾತ್ಮಕ ನಿಯಂತ್ರಣ
12) ಪರಸ್ಪರ ಸಂಘರ್ಷ

ಮಕ್ಕಳಿಗೆ ಆರೋಗ್ಯಕರ ತಂತ್ರಜ್ಞಾನದ ಬಳಕೆಯನ್ನು ಉತ್ತೇಜಿಸುವುದು ಇಲ್ಲಿ ತಜ್ಞರ ಪ್ರಕಾರ ಪಾಲಕರು ತಮ್ಮ ಮಗು/ಮಕ್ಕಳು ಪರದೆಯ ಮುಂದೆ ಎಷ್ಟು ಸಮಯ ಕಳೆಯುತ್ತಾರೆ ಎಂಬುದನ್ನು ತಿಳಿದುಕೊಳ್ಳುವುದರ ಜೊತೆಗೆ ಪೋಷಕರು ಆಮಾಧ್ಯಮದ ವಿಷಯ ಮತ್ತು ಅವರು ಅದನ್ನು ಬಳಸುತ್ತಿರುವ ಸಂದರ್ಭವನ್ನು ಪರಿಗಣಿಸಬೇಕೆಂದು ತಜ್ಞರ ಸಲಹೆ ನೀಡುತ್ತಾರೆ. ಪೋಷಕರು ತಮ್ಮ ಮಕ್ಕಳು ಸುರಕ್ಷಿತ, ತೃಪ್ತಿಕರ ವಾದ ತಂತ್ರಜ್ಞಾನದ ಬಳಕೆಗಾಗಿ ಕೆಲವು ಮಾರ್ಗಸೂಚಿಗಳನ್ನು ರೂಪಿಸಿಕೊಳ್ಳಬೇಕು. ಇಷ್ಟವಿರಲಿ ಇಲ್ಲದಿರಲಿ ತಂತ್ರಜ್ಞಾನವು ನಮ್ಮಆಧುನಿಕ ಜಗತ್ತಿನ ಪ್ರಮುಖ ಭಾಗವಾಗಿದೆ, ನಾವು ಮಿತಿಮೀರಿದ ನಿರ್ಬಂಧವನ್ನು ತಂತ್ರಜ್ಞಾನದ (ಸಮೂಹಮಾಧ್ಯಮ) ವಿಷಯದಲ್ಲಿ ಮಕ್ಕಳ ಮೇಲೆ ಹೇರಿದಾಗ ತಂತ್ರಜ್ಞಾನವು ಭಯ ಪಡಬೇಕಾದ ವಿಷಯ ಎಂಬ ಸಂದೇಶ ಕಳುಹಿಸಿದಂತೆ ಆಗುತ್ತದೆ, ಅದು ಮಕ್ಕಳಿಗೆ ಸಹಾಯ ಮಾಡುವುದಿಲ್ಲ. ಇದರ ಬದಲಾಗಿ ಮಕ್ಕಳಿಗೆ ಜೀವಿತಾವಧಿಯವರೆಗೂ ಉಳಿಯುವಂಥಹ ಒಳ್ಳೆಯ ಅಭ್ಯಾಸಗಳನ್ನು ಮಕ್ಕಳಲ್ಲಿ ರೂಢಿಸಿರಿ.

ಚಿಕ್ಕವಯಸ್ಸಿನಿಂದಲೇ ಮಕ್ಕಳಿಗೆ ತಂತ್ರಜ್ಞಾನದ ಬಗ್ಗೆ ಕಲಿಸಿ ಮತ್ತು ತಿಳಿವಳಿಕೆ ನೀಡಿ, ಟ್ಯಾಬ್ಲೇಟಗಳು, ಕಂಪ್ಯೂಟರಗಳು ಮತ್ತು ಇತರ ಸಮೂಹಮಾಧ್ಯಮ ಸಾಧನೆಗಳು ಆಟಿಕೆ ಸಾಮಾನುಗಳಲ್ಲ ಇವುಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು ಎಂದು ವಿವರಿಸಿ. ತಂತ್ರಜ್ಞಾನದ ಅನೇಕ ಪ್ರಯೋಜನಗಳು ಮತ್ತು ಅಪಾಯಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸಿ. ಅವರನ್ನು ಹೆದರಿಸಬೇಡಿ, ಆದರೆ ಗೌಪ್ಯತೆಯನ್ನು ಗೌರವಿಸುವ ಮತ್ತು ವಯಸ್ಸಿಗೆ ಸೂಕ್ತವಾದ ರೀತಿಯಲ್ಲಿ ವೈಯಕ್ತಿಕ ಮಾಹಿತಿಯನ್ನು ರಕ್ಷಿಸುವ ಪ್ರಾಮುಖ್ಯತೆಯನ್ನು ಚರ್ಚಿಸಿ. ಪರದೆಯ ಸಮಯದ ಮಿತಿಗಳು ಸಾಮಾನ್ಯವಾಗಿ ಒಳ್ಳೆಯ ಉಪಾಯವಾಗಿದ್ದರೂ ಪೋಷಕರು ತಂತ್ರಜ್ಞಾನದ ಬಳಕೆಯನ್ನು ಅಂತರ್ಗತವಾಗಿ ಹಾನಿಕಾರಕವೆಂದು ಭಾವಿಸಭಾರದು ಎಂದು ತಜ್ಞರು ಎಚ್ಚರಿಸುತ್ತಾರೆ. ತಂತ್ರಜ್ಞಾನದ ಬಳಕೆಗಾಗಿ ನಿಮ್ಮ ಕುಟುಂಬದ ನಿಯಮಗಳನ್ನು ರೂಪಿಸುವ ಸಂದರ್ಭದಲ್ಲಿ ಅಜ್ಜಅಜ್ಜಿಯರೊಂದಿಗೆ ವೀಡಿಯೋ ಚಾಟ್ಮಾಡುವುದು ವೀಡಿಯೋಗೇಮ್ ಆಡುವುದಕ್ಕಿಂತ ಭಿನ್ನವಾಗಿದೆ ಎಂದು ಪರಿಗಣಿಸುವುದು. ನಿಮ್ಮ ಮಗು ಬಳಸುತ್ತಿರುವ ಮಾಧ್ಯಮವನ್ನು ಅರ್ಥಮಾಡಿಕೊಳ್ಳಲು ಸಂಶೋಧನೆಯನ್ನು ಮಾಡಿ. ಅವರು ಯಾವ ಸೈಟ್ಗಳಿಗೆ ಭೇಟಿನೀಡುತ್ತಾರೆ ಎಂಬುದನ್ನು ನೋಡಲು ನಿಮ್ಮ ಮಗುವಿನ ಬೌಸ್ ಇತಿಹಾಸವನ್ನು ಪರಿಶೀಲಿಸಿ ಮಿತಿಯಿಲ್ಲದ ವಿಷಯಕ್ಕೆ ಪ್ರವೇಶವನ್ನು ಫಿಲ್ಟ್ರ್ಮಾಡಲು ಅಥವಾ ನಿರ್ಬಂಧಿಸಲು ಎಕ್ಸಪ್ಲರ್ರಾಸ್ಪಟ್ವೇರ ಬಳಸಿ ಉತ್ತಮ ಆನ್ಲೈನ್ನಡವಳಿಕೆಯನ್ನು ಕಲಿಸಿ.ಕೆಲವು ವೆಬ್ಸೈಟಗಳ ಮಾಹಿತಿ ವಿಶ್ವಾಸಾರ್ಹಮೂಲಗಳಾಗಿವೆಯೇ ಅಥವಾ ಇಲ್ಲವೇ ಎಂಬುದನ್ನು ಊಹಿಸಲು ಕಷ್ಟವಾಗಬಹುದು.

ಆನ್ಲೈನ್ನಲ್ಲಿ ದೃಢೀಕರಣ ಮತ್ತು ನಿಖರತೆಯನ್ನು ಹೇಗೆ ಮೌಲ್ಯಮಾಪನ ಮಾಡುವುದು ಎಂಬುದರ ಕುರಿತು ಮಕ್ಕಳೊಂದಿಗೆ ಸಂವಾದಗಳನ್ನು ನಡೆಸಿ ಮಕ್ಕಳಿಗೆ ತಮಗೆ ಪರಿಚಯವಿಲ್ಲದ ಕಾರ್ಯಕ್ರಮಗಳನ್ನು ಏಕೆ ಡೌನಲೋಡ ಮಾಡಬಾರದು ಎಂಬುದನ್ನು

ವಿವರಿಸಿ. ಅನುಮಾನಾಸ್ಪದ ಲಿಂಕಗಳ ಮೇಲೆ ಕ್ಲಿಕ್ಮಾಡುದಾಗಲಿ ಮತ್ತು ಅಪರಿಚಿತ ಆಪ್ಲಿಕೇಶನಗಳು ಅಥವಾ ವೆಬ್ಸೈಟ್ಗಳಲ್ಲಿ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳಬೇಡಿ ಎಂದು ಮಕ್ಕಳಿಗೆ ಕಲಿಸಿರಿ ಅಥವಾ ತಿಳಿಹೇಳಿರಿ. ಅಪರಿಚಿತರಿಂದ ಬರುವ ಅಪೇಕ್ಷಿಸದ ಸಂದೇಶಗಳಿಗೆ ಪ್ರತಿಕ್ರಿಯಿಸದಂತೆ ತಿಳಿ ಹೇಳಿ ಒಂದು ವೇಳೆ ಆ ರೀತಿಯ ಯಾವುದೇ ಸಂದೇಶ ಪಡೆದರೆ ನಿಮಗೆ ತಿಳಿಸಲು ಪ್ರೋತ್ಸಾಹಿಸಿರಿ, ಕೆಲವು ಮಕ್ಕಳು ನಿಜಜೀವನದಲ್ಲಿ ಸ್ನೇಹಿತರೊಂದಿಗೆ ಆಟವಾಡುವುದಕ್ಕಿಂತ ಹೆಚ್ಚಿನ ಸಮಯವನ್ನು ಆನ್ಲೈನ್ನಲ್ಲಿ ಕಳೆಯುತ್ತಿದ್ದಾರೆ, ಅವರಿಗೆ ಡಿಜಿಟಲ್ಸ್ನೇಹಗಳು ನಿಜವಾದ ವಿಷಯಕ್ಕೆ ಬದಲಿಯಾಗಿಲ್ಲ ಎಂದು ಮನವರಿಕೆ ಮಾಡಿಕೊಡಬೇಕು.

## 9.ಮೂಢನಂಬಿಕೆಗಳು

**ಮಾನವರು ಸಮಾಜದಲ್ಲಿ ವಾಸಿಸುವಾಗ ಕೆಲವು ನಂಬಿಕೆಗಳನ್ನು ಅಳವಡಿಸಿ ಕೊಂಡಿರುತ್ತಾರೆ. ಅದೇ ರೀತಿ ಕೆಲವು ಮೂಡನಂಬಿಕೆಗಳನ್ನು ಕೆಲವೊಂದು ಸಾರಿ ತಮಗೆ ಗೊತ್ತಿಲ್ಲದೆಯೇ ಅನುಸರಿಸುತ್ತಾರೆ. ಮೂಡನಂಬಿಕೆ ಎಂದರೇನು? ಯಾವುದೇ ನಂಬಿಕೆಯು ಮೌಢ್ಯತೆ ಯಿಂದ ಕೂಡಿದ್ದರೆ ಅತಾರ್ಕಿಕವಾಗಿದ್ದರೆ ವಿಚಾರ ರಹಿತವಾಗಿದ್ದರೆ ಅಂತಹ ನಂಬಿಕೆಗಳನ್ನು ಮೂಢನಂಬಿಕೆಗಳು ಎನ್ನಬಹುದು.**
**"ಮೂಡನಂಬಿಕೆಯು ಒಂದು ಕತ್ತಲೆಯ ಜಗತ್ತಾಗಿದೆ. ಪ್ರಕೃತಿಯ ನಿಯಮಗಳಿಗೆ ಅಥವಾ ಬ್ರಹ್ಮಾಂಡದ ವೈಜ್ಞಾನಿಕ ತಿಳುವಳಿಕೆಗೆ ಅನುಗುಣವಾಗಿಲ್ಲದ ಶಕ್ತಿಗಳು ಅಥವಾ ಘಟಕಗಳ ಆಸ್ತಿತ್ವದ ನಂಬಿಕೆ. ಮಾನವನ ವೈಜ್ಞಾನಿಕ ಜ್ಞಾನದ ಕೊರತೆಯಿಂದ ಮೂಡನಂಬಿಕೆಗಳು ಆಚರಣೆಯಲ್ಲಿವೆ. ಅಸ್ಪಷ್ಟವಾಗಿ ಆರಂಭವಾದ ಮೂಡನಂಬಿಕೆಗಳು ಕಾಲಕ್ರಮೇಣ ವ್ಯವಸ್ಥಿತ ರೂಪವನ್ನು ತಾಳಿದವು. ಧರ್ಮಾಂಧತೆ, ಸಂಪ್ರದಾಯ ಜ್ಯೋತಿಷ್ಯ, ಗ್ರಹಬಲ, ಪವಾಡಗಳು, ರಾಹುಕಾಲ, ಯಮಗಂಡಕಾಲ, ವಾಸ್ತು ಇತ್ಯಾದಿಯಾಗಿ ರೂಪ ಪಡೆದುಕೊಂಡು ತಲೆಮಾರಿಂದ ತಲೆಮಾರಿಗೆ ಮುಂದುವರೆಯುತ್ತಾ ಬಂದವು. ಈ ಮೂಡನಂಬಿಕೆಗಳು ಜಗತ್ತಿನ ಪ್ರತಿಯೊಂದು ದೇಶದಲ್ಲಿ ಪ್ರತಿಯೊಂದು ಜನಾಂಗದಲ್ಲಿ ಮತ್ತು ಎಲ್ಲಾ ಕಾಲದಲ್ಲಿ ಕಾಣಸಿಗುತ್ತವೆ. ಹೀಗೆ ಮೂಡನಂಬಿಕೆಗಳು ಸಾರ್ವತ್ರಿಕವಾದವು.**

| **ನಂಬಿಕೆಗಳು** | **ಮೂಡನಂಬಿಕೆಗಳು** |
|---|---|
| ಬದುಕಿನಲ್ಲಿ ಎದುರಾಗುವ ಹೊಸ ಅಪರಿಚಿತ, ವಿಚಿತ್ರ, ನಿಗೂಢ ವಿದ್ಯಮಾನಗಳನ್ನು ಸನ್ನಿವೇಶಗಳನ್ನು ನಿರ್ವಹಿಸಲು ನಂಬಿಕೆಗಳು ನಮಗೆ ನೆರವಾಗುತ್ತವೆ. | ಬದುಕಿನಲ್ಲಿ ಎದುರಾಗುವ ಹೊಸ ಅಪರಿಚಿತ, ವಿಚಿತ್ರ, ನಿಗೂಡ ವಿದ್ಯಾಮಾನಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವದಿಲ್ಲ. |
| ಇನ್ನೊಬ್ಬರು ನಂಬಿದ ವಿಷಯವನ್ನು ನಡೆದ ದಾರಿಯನ್ನು ಅಂದಾಭಿಮಾನದಿಂದ ಅನುಸರಿಸುವುದಿಲ್ಲ. | ಇನ್ನೊಬ್ಬರು ನಂಬಿದ ವಿಷಯವನ್ನು ನಡೆದದಾರಿಯನ್ನು ಅಂದಾಭಿಮಾನದಿಂದ ಅನುಸರಿಸಲಾಗುತ್ತದೆ. |
| ಇದು ವಿವೇಚನಾಸಹಿತ ಅನುಭವ ವೇದ್ಯ ತಿಳಿವಳಿಕೆ ಹೊಂದಿದ ನಂಬಿಕೆಗಳು | ವಿವೇಚನಾ ರಹಿತವಾಗಿ ಅನುಭವ ವೇದ್ಯವಲ್ಲದ ತಿಳಿವಳಿಕೆ ಹೊಂದಿಲ್ಲದ ನಂಬಿಕೆಗಳು ಮೂಡನಂಬಿಕೆಗಳಾಗುತ್ತವೆ. |
| ನಂಬಿಕೆಗಳು ಜನರ ಗಮನವನ್ನು ಸಮಸ್ಯೆಯ ಮೂಲಕಾರಣ ಕಂಡುಹಿಡಿದು ಅದಕ್ಕೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳುವಂತೆ ಮಾಡುತ್ತದೆ. ಅವರಲ್ಲಿ ಸಹಾಯಕತೆ ಮತ್ತು ಗೆಲುವಿನ ಭಾವನೆಯನ್ನು ಹುಟ್ಟು ಹಾಕುತ್ತದೆ. | ಮೂಡನಂಬಿಕೆಗಳು ಜನರ ಗಮನವನ್ನು ಸಮಸ್ಯೆಯ ಮೂಲಕಾರಣ ದಿಂದ ಪ್ರತ್ಯೇಕಿಸಿ, ಅದಕ್ಕೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳುವಂತೆ ತಡೆದು ಅವರಲ್ಲಿ ಅಸಹಾಯಕತೆ ಮತ್ತು ಸೋಲಿನ ಭಾವನೆಯನ್ನು ಹುಟ್ಟು ಹಾಕುತ್ತದೆ. |
| ನಂಬಿಕೆಗಳು ಆತ್ಮವಿಶ್ವಾಸ, ಧೈರ್ಯ, ಶಾಂತಿ, ಸಮಾಧಾನ ಮತ್ತು ಮನಸ್ಸಿಗೆ ಮುದ ನೀಡುತ್ತೇವೆ. | ಮೂಢನಂಬಿಕೆಗಳು ಕ್ರೂರ ಅನಾರೋಗ್ಯಕರ, ಅಪಾಯಕಾರಿ ಅಮಾನವೀಯ, ವಿಧ್ವಂಸಕಾರಿ ಸ್ವರೂಪದ್ದಾಗಿರುತ್ತವೆ. |

**ಚಟುವಟಿಕೆ**:-

| ಮೂಡನಂಬಿಕೆಗಳು | ಮಕ್ಕಳು ಹೊಂದುವ ಬದಲಾವಣೆಗಳು | ಪರಿಹಾರೋಪಾಯಗಳು |
|---|---|---|
| | | |
| | | |

**ವ್ಯಕ್ತಿಯು ಎಷ್ಟು ಮೂಢನಂಬಿಕೆಗಳನ್ನು ಅವಲಂಬಿಸಿದ್ದಾನೆಂದರೆ ಬಾಬಾನ ಸೂಚನೆಗಳ ಪ್ರಕಾರ, ದಿನ ಭವಿಷ್ಯವಾಣಿ ಪ್ರಕಾರಗಳ ಮೂಲಕ ಜೀವನವನ್ನು ನಡೆಸುತ್ತಿರುತ್ತಾರೆ. ಇದರಿಂದ ಕೆಲವರು ತಮ್ಮ ಜೀವನವನ್ನೇ ಹಾಳುಮಾಡಿ ಕೊಳ್ಳುತ್ತಾರೆ.**

• ತಿಳುವಳಿಕೆ ಇಲ್ಲದವರ ಮನಸ್ಸನ್ನು ದುರ್ಬಲಗೊಳಿಸಿ ತಮ್ಮ ಶಕ್ತಿಸಾಮರ್ಥ್ಯಗಳ ಅರಿವಿಲ್ಲದ ಸೋಮಾರಿಗಳನ್ನಾಗಿ ಮಾಡುತ್ತವೆ.

.ಜನರಅಂತ:ಶಕ್ತಿಯನ್ನು ಕುಗ್ಗಿಸಿ ಪ್ರಾರಂಭಕ್ಕೆ ದಾಸರನ್ನಾಗಿ ಮಾಡುತ್ತವೆ.

. ಮೂಢನಂಬಿಕೆಗಳು ಜಾತಿ.ಮತ,ವರ್ಣ.ಲಿಂಗಾಧಾರಿತ ಅಸಮಾನತೆಯನ್ನು ಹುಟ್ಟು ಹಾಕಿ ಶೋಷಣೆ.ಗುಲಾಮಗಿರಿ.ಅಸ್ಪೃತ್ಯತೆ ಮೇಲುಕೀಳು ಎಂಬ ಭಾವನೆಗಳನ್ನು ಪ್ರಚೋದಿಸುತ್ತವೆ.

.ಇಂತಹ ಮೂಢನಂಬಿಕೆಗಳನ್ನು ಅಸ್ತ್ರಗಳನ್ನಾಗಿ ಮಾಡಿಕೊಂಡು ಅರಿವಿಲ್ಲದ ಸಾಮಾನ್ಯಜನರನ್ನು ವಂಚಿಸಿ. ಮೋಸಗೊಳಿಸಿ ಶೋಷಣೆಗೆ ಒಳಪಡಿಸುವುದನ್ನು ಕಾಣಬಹುದಾಗಿದೆ.

. ಮೌಢ್ಯತೆ ಬಡತನವನ್ನು ತರುವುದರ ಜೊತೆಗೆ ಪಕ್ಷಪಾತ ಕೋಮುದ್ವೇಷ ಜಾತಿಭೇದ. ಪ್ರಾಂತೀಯ ಭೇದ ಇತ್ಯಾದಿಗಳು ಬೆಳೆಯಲು ಕಾರಣವಾಗಿದೆ.

ಮಕ್ಕಳು ಮೂಡನಂಬಿಕೆಗಳಿಗೆ ಬಲಿಪಶುವಾಗದಂತೆ ಯಾವ ಕ್ರಮಗಳನ್ನು ಕೈಗೊಳ್ಳಬೇಕು:

• ನಮ್ಮ ಸಂವಿಧಾನದ ಅನುಚ್ಛೇದ 51 ಎ ರಲ್ಲಿ ನಾಗರಿಕ ಕರ್ತವ್ಯಗಳ ಬಗ್ಗೆ ತಿಳಿಸಲಾಗಿದೆ. ವಿಷಯಕ್ಕೆ ಸಂಬಂಧಿಸಿದ ಕರ್ತವ್ಯವೆಂದರೆ,"ವೈಜ್ಞಾನಿಕ ಮನೋಭಾವನೆ ಮಾನವೀಯತೆ ಮತ್ತು ಅನ್ವೇಷಣೆ ಮತ್ತು ಸುಧಾರಣೆ ಪ್ರವೃತ್ತಿಗಳನ್ನು ಬೆಳೆಸುವುದು "ವೈಜ್ಞಾನಿಕ ಮನೋವೃತ್ತಿಯನ್ನು ಬೆಳೆಸಿಕೊಳ್ಳುವುದು, ನಮ್ಮ ಇಷ್ಟಕ್ಕೆ, ಆಯ್ಕೆಗೆ ಬಿಟ್ಟ ಪ್ರಶ್ನೆಯಲ್ಲ, ಈ ದೇಶದ ಪ್ರತಿಯೊಬ್ಬ ಪ್ರಜೆಯು ಸಂವಿಧಾನದಲ್ಲಿ ತಿಳಿಯಪಡಿಸಿರುವ ಕರ್ತವ್ಯಗಳನ್ನು ಪಾಲಿಸುವುದು ಅವರ ಆದ್ಯಕರ್ತವ್ಯ, ವೈಜ್ಞಾನಿಕ ಮನೋವೃತ್ತಿಯನ್ನು ಬೆಳೆಸಿಕೊಳ್ಳುವುದು,ಪ್ರತಿಪಾದಿಸುವುದು,ಪ್ರಸಾರ ಮಾಡುವುದು ಪ್ರತಿಯೊಬ್ಬರ ಮೂಲಭೂತಕರ್ತವ್ಯ, ವೈಜ್ಞಾನಿಕ ಮನೋವೃತ್ತಿಯನ್ನು ಬೆಳೆಸುವಂತೆ ಶಾಲೆಯಲ್ಲಿ ಮನೆಯಲ್ಲಿ ಮತ್ತು ಸಮುದಾಯದಲ್ಲಿ ಉತ್ತೇಜಿಸುವುದು ವೈಚಾರಿಕ ಮನೋಭಾವನೆಯೂ ತಮ್ಮಲ್ಲಿ ಧೈರ್ಯವನ್ನು ತುಂಬಿ ಸಮರ್ಥರನ್ನಾಗಿ ಮಾಡುತ್ತದೆ,ಸ್ವತಂತ್ರ ವ್ಯಕ್ತಿತ್ವ ಪ್ರವೃತ್ತಿ,ಸ್ವಾಭಿಮಾನ ಸ್ವಾವಲಂಬನೆ ಬೆಳೆಯಲು ಸಹಾಯ ಮಾಡುತ್ತದೆ.

. ವೈಚಾರಿಕಬುದ್ಧಿಯು ಪ್ರತಿಯೊಂದನ್ನು ವಸ್ತುನಿಷ್ಟವಾಗಿ ಪ್ರಶ್ನೆಯು ಒರೆಗಲ್ಲಿನಲ್ಲಿ ತಿಕ್ಕಿನೋಡುವುದರಿಂದ ಎಲ್ಲಾ ಕಂದಾಚಾರ. ಸಾಂಪ್ರದಾಯಿಕ ಮೌಢ್ಯಗಳನ್ನು ಹೋಗಲಾಡಿಸಲು ಪ್ರಬಲವಾದ ಸಾಧನದಂತೆ ಕೆಲಸ ಮಾಡುತ್ತದೆ.

• ಮೂಡನಂಬಿಕೆಗಳನ್ನು ಅಳಿಸುವಲ್ಲಿ ಶಿಕ್ಷಣ ಹಾಗೂ ಆರ್ಥಿಕ ಅಭಿವೃದ್ಧಿಗಳು ತಕ್ಕಮಟ್ಟಿಗೆ ಸಹಾಯಕವಾಗುತ್ತವೆ ಎಂಬುದು ಸತ್ಯ.ಆದರೆ ಅದಕ್ಕಿಂತಲೂ ಮುಖ್ಯವಾಗಿ ವೈಜ್ಞಾನಿಕ ಮನೋಭಾವ ಮತ್ತು ಪ್ರಶ್ನಿಸುವ ಪ್ರಶ್ನೆಗಳ ಅಗತ್ಯವು ಹೆಚ್ಚಿನದ್ದಾಗಿದೆ.ಆದ್ದರಿಂದ ಪಾಲಕರೂ ಹಾಗೂ ಶಾಲೆಯಲ್ಲಿ ಶಿಕ್ಷಕರು ಮತ್ತು ಸಮೂದಾಯದಲ್ಲಿ ವೈಜ್ಞಾನಿಕಮನೋಭಾವನೆ ಬೆಳೆಸುವುದು. ಇದರಿಂದಾಗಿ ಮಕ್ಕಳು ನಮ್ಮ ಸುತ್ತಲಿನ ಜಗತ್ತಿನ ರಚನೆಯನ್ನು ವಿದ್ಯಮಾನಗಳ ಅರಿವನ್ನು ಹಾಗೂ ಈ ಜಗತನ್ನು ಅರ್ಥಮಾಡಿಕೊಳ್ಳುವ ಬಗೆಯನ್ನು ವೈಜ್ಞಾನಿಕಮನೋಭಾವವು ನಮಗೆ ಕಲಿಸುತ್ತದೆ. ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಸಿದರೆ ಅವರ ಜೀವನದಲ್ಲಿ ಬಂದಂಥ ಹಲವಾರು ಪ್ರಶ್ನೆಗಳಿಗೆ ತಾರ್ಕಿಕವಾಗಿ ಉತ್ತರಗಳನ್ನು ಕಂಡುಹಿಡಿದು ಆ ಮೂಲಕ ಆತ್ಮವಿಶ್ವಾಸ.ಘನತೆಗಳನ್ನು ಹೆಚ್ಚಿಸಿ ಭ್ರಮಾಲೋಕದಿಂದ ನಮ್ಮನ್ನು ಹೊರತಂದು ಜೀವನವನ್ನು ಅದರ ಎಲ್ಲಾ ವಾಸ್ತವತೆಗಳೊಂದಿಗೆ ಅರ್ಥೈಸಿಕೊಳ್ಳುವುದನ್ನು ಕಲಿಸುತ್ತದೆ.ಶಾಲೆಯಲ್ಲಿ ಒಳ್ಳೆಯ ನುರಿತ ವಿಜ್ಞಾನಿಗಳಿಂದ ಉಪನ್ಯಾಸ ಕ್ರಮವನ್ನು ನಡೆಸಿ ಮಕ್ಕಳಿಗೆ ಇಂಥಹ ಸಂದೇಹಗಳನ್ನು ಬಗೆ ಹರಿಸುವುದು.

ಶಾಲೆಗಳಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಗಳು ದಿನದಂದು ಮೂಢನಂಬಿಕೆಯ ಸಂಬಂಧಿಸಿದ ನಾಟಕಗಳನ್ನು ಮಾಡಿಸುವುದು. ಬೀದಿನಾಟಕಗಳನ್ನು ಮಾಡಿಸಿ ಮಕ್ಕಳಲ್ಲಿ ಮತ್ತು ಸಮುಧಾಯದಲ್ಲಿ ಇದರ ಬಗ್ಗೆ ಜಾಗೃತಿ ಮೂಡಿಸುವುದು. ಪ್ರತಿಯೊಂದು ಮೂಢನಂಬಿಕೆಯ ಹಿಂದಿನ ವೈಜ್ಞಾನಿಕ ಕಾರಣವನ್ನು ಮಕ್ಕಳಿಗೆ ಪ್ರಾಯೋಗಿಕವಾಗಿ ತಿಳಿಸಿಕೊಡುವುದು. ಮನೆಯಲ್ಲಿದ್ದ ಹಿರಿಯರು ಮಕ್ಕಳ ಮೇಲೆ ಪರಿಣಾಮ ಬಿರುವಂತಹ ಯಾವುದೇ ಆಚರಣೆ ಮತ್ತು ವಿಚಾರಗಳನ್ನು ಹೇಳಕೂಡದು.

**ಮೂಡನಂಬಿಕೆ ವಿರೋಧಿ ಕಾನೂನುಗಳು:**ವಿಚಾರವಾದಿಗಳು ಮತ್ತು ಸ್ವಯಂಸೇವಾ ಸಂಸ್ಥೆಗಳು ಪವಾಡಗಳನ್ನು ಬಯಲುಮಾಡಿ ಸ್ವಯಂಘೋಷಿತ ದೇವಮಾನವರ ಮತ್ತು ಧರ್ಮದ ಹೆಸರಿನಲ್ಲಿ ಜನರಿಗೆ ಮೋಸ ಮಾಡುತ್ತಿದ್ದ ವಂಚಕರನ್ನು ಬಯಲಿಗೆಳೆದಿವೆ. ಅಂಧಶ್ರದ್ದೆಯ ನಿರ್ಮೂಲನೆಗಾಗಿ

ಮಸೂದೆಯೊಂದನ್ನು 2017 ರಲ್ಲಿ ಕರ್ನಾಟಕ ಸರಕಾರವು ಕಾಯಿದೆಯನ್ನು ಜಾರಿಗೆತಂದಿದೆ. ಸಾವಿರಾರು ವರ್ಷಗಳಿಂದ ಬಂದಿರುವ ಮೂಢನಂಬಿಕೆಗಳು ಕಾನೂನು ರಚಿಸುವುದರಿಂದ ನಿವಾರಣೆ ಆಗುವುದಿಲ್ಲ, ಅಂದರೆ ಮೂಢನಂಬಿಕೆಗಳ ನಿವಾರಣೆಗೆ ಕಾನೂನು ಬೇಡವೆಂಬ ವಾದವಲ್ಲ! ಕಾನೂನುಗಳು ಬೇಕು ಮತ್ತು ಜನರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಬೇಕು ಮತ್ತು ಶಿಕ್ಷಣದ ಮೂಲಕ ವೈಜ್ಞಾನಿಕ ದೃಷ್ಟಿಕೋನವನ್ನು ಬೆಳೆಸುವ ಮೂಲಕ ಮೂಢನಂಬಿಕೆಗಳನ್ನು ನಿರ್ಮೂಲನೆ ಮಾಡಬಹುದಾಗಿದೆ.

## 10. ಸ್ವರಕ್ಷಣಾ ತಂತ್ರಗಳು

ಸುರಕ್ಷತೆ ಪ್ರತಿಯೊಂದು ಮಗುವಿನ ಹಕ್ಕಾಗಿದೆ ಮನೆಯಲ್ಲಿ ಸಮುದಾಯದಲ್ಲಿ ಶಾಲೆಯಲ್ಲಿ ಹೊರಗಿನ ವಾತಾವರಣದಲ್ಲಿ ಸುರಕ್ಷಿತವಾದ ಅವಕಾಶವನ್ನು ಪಡೆಯುವುದು ಪ್ರತಿಯೊಂದು ಮಗುವಿನ ಹಕ್ಕು. ಪ್ರತಿ ಮಗುವಿಗೂ ಸುರಕ್ಷತೆಯನ್ನು ಒದಗಿಸುವುದು ಪ್ರತಿಯೊಬ್ಬ ಪ್ರೌಢ ವ್ಯಕ್ತಿಯ ಜವಾಬ್ದಾರಿಯಾಗಿದೆ. ಅಂದರೆ ಪ್ರತಿ ಮಗುವಿಗೆ ದೈಹಿಕವಾಗಿ ಮಾನಸಿಕವಾಗಿ ಹಾಗೂ ಭಾವನಾತ್ಮಕವಾಗಿ ಸುರಕ್ಷತೆಯನ್ನು ಒದಗಿಸುವ ನಿಟ್ಟಿನಲ್ಲಿ ಎಲ್ಲ ಪ್ರೌಢರು ಕಾರ್ಯನಿರ್ವಹಿಸಬೇಕಾಗಿರುವುದು ಅತ್ಯಂತ ಮಹತ್ವದ್ದು. ಮಗು ಮನೆಯ ವಾತಾವರಣದಲ್ಲಿ ಪರಿಚಿತರೊಂದಿಗೆ ಅಪರಿಚಿತರೊಂದಿಗೆ ಹೊರಗಿನ ವಾತಾವರಣದಲ್ಲಿ ಸ್ನೇಹಿತರೊಂದಿಗೆ ಶಿಕ್ಷಕರೊಂದಿಗೆ ಸಮುದಾಯದ ಬೇರೆ ಬೇರೆ ವ್ಯಕ್ತಿಗಳೊಂದಿಗೆ ವರ್ತಿಸುವಾಗ ಸುರಕ್ಷಿತವಾದಂತಹ ಅವಕಾಶವನ್ನು ಪಡೆಯುವುದು ಮತ್ತು ತನ್ಮೂಲಕ ಎಲ್ಲರಿಗೂ ಸುರಕ್ಷಿತವಾಗಿರುವಂತಹ ಅವಕಾಶವನ್ನು ಒದಗಿಸುವ ನಿಟ್ಟಿನಲ್ಲಿ ಪ್ರಯತ್ನಿಸುವುದು ಎಲ್ಲರ ಕರ್ತವ್ಯವಾಗಿದೆ. ಈ ಸಂದರ್ಭದಲ್ಲಿ ಮಗುವಿನ ಮನೆಯ ವಾತಾವರಣದಲ್ಲಿ ಅವಶ್ಯಕತೆ ಇರುವಂತಹ ಸುರಕ್ಷಿತ ತಂತ್ರಗಳು ಸಮುದಾಯದಲ್ಲಿ ಶಾಲೆಯಲ್ಲಿ ಸುರಕ್ಷಿತವಾಗಿರಲು ಮಗು ಏನೆಲ್ಲಾ ಅಂಶಗಳನ್ನು ಕಲಿತುಕೊಳ್ಳಬೇಕು , ಮತ್ತು ಸ್ವ ರಕ್ಷಣೆಗೆ ತಾನು ಮಾನಸಿಕವಾಗಿ ದೈಹಿಕವಾಗಿ ಯಾವ ರೀತಿಯಾಗಿ ತಯಾರಾಗಬೇಕೆನ್ನುವುದು.

**ಚಟುವಟಿಕೆ -1. ನಾನು ಸುರಕ್ಷಿತವೇ?**

**ಕಲಿಕಾ ಫಲ :**

ಮಗು ಬಾಲ್ಯದ ದಿನಗಳಲ್ಲಿ ಅನುಭವಿಸಿರಬಹುದಾದ ಗಮನಿಸಿರ ಬಹುದಾದ ಅಸುರಕ್ಷಿತ ಸನ್ನಿವೇಶಗಳನ್ನು ಸ್ಮರಣೆ ಮಾಡಿಕೊಳ್ಳೋದು ಬೇಕಾಗುವ ಅವಧಿ ಒಂದು.

ಈ ಅವಧಿಯ ನಂತರದ ಬದಲಾವಣೆ ಸುರಕ್ಷಿತವಾದ ಮತ್ತು ಸುರಕ್ಷಿತವಲ್ಲದ ಸನ್ನಿವೇಶಗಳನ್ನು ಅರಿತುಕೊಳ್ಳುವುದು .

ವಾಸ್ತವದಲ್ಲಿ ಮತ್ತು ಮುಂದಿನ ದಿನಗಳಲ್ಲಿ ಸುರಕ್ಷಿತವಾದ ಮತ್ತು ಸುರಕ್ಷಿತವಲ್ಲದ ಸನ್ನಿವೇಶಗಳನ್ನು ಗಮನಿಸುವುದು. ಸುರಕ್ಷಿತವಾಗಿ ಇರಲು ತೀರ್ಮಾನಗಳನ್ನು ತೆಗೆದುಕೊಳ್ಳುವುದು.

ಸಂಪನ್ಮೂಲ: ಗುಂಪು ಚರ್ಚೆಗೆ ಬೇಕಾದ ಬಣ್ಣದ ಪೆನ್ನುಗಳು, ಬಣ್ಣದ ಕಾಗದ, ಹಾಗೂ ಕಾರ್ಯಹಂಚಿಕೆಯ ಚೀಟಿಗಳು. ಸಂಪನ್ಮೂಲ ವ್ಯಕ್ತಿಗಳಿಗ ವ್ಯಕ್ತಿಗಳ ತಿಳುವಳಿಕೆಗೆ ಮಕ್ಕಳು ಬಾಲ್ಯದ ಸಂಪರ್ಕದಲ್ಲಿ ಅನುಭವಿಸಿರ ಬಹುದಾದ ಗಮನಿಸ ಬಹುದಾದ ಅಸುರಕ್ಷಿತ ಸನ್ನಿವೇಶಗಳನ್ನು ಪಟ್ಟಿ ಮಾಡುವುದು

ಅಪಾಯಕಾರಿ ಸನ್ನಿವೇಶಗಳನ್ನ ಪಟ್ಟಿ ಮಾಡುವುದಾದರೆ

1. ರಸ್ತೆಯಲ್ಲಿ ನಡೆಯುವಾಗ ಅಥವಾ ಆಟ ಆಡುವಾಗ

2. ಮನೆಯ ಬಾಗಿಲು ಕದಗಳನ್ನು ತೆರೆಯುವಾಗ ಹಾಕುವಾಗ .

3. ಕಿಟಕಿ ಬಾಗಿಲುಗಳ ಮೇಲೆ ಹತ್ತಿ ಆಟ ಆಡುವಾಗ

4. ಕುರ್ಚಿ, ಟೇಬಲ್ ಮೇಲೆ ಹತ್ತುವಾಗ ಇಳಿಯುವಾಗ

5. ಪೆನ್ಸಿಲ್ ಅನ್ನು ಶಾರ್ಪ ಮಾಡುವಾಗ ಅರಿತವಾದ ಸಾಮಗ್ರಿಗಳನ್ನು ಹಿಡಿಯುವಾಗ

6. ಮನೆಯಲ್ಲಿ ಮಕ್ಕಳನ್ನು ಗಮನಿಸದೇ ದೊಡ್ಡವರು ತಮ್ಮ ಕೆಲಸದಲ್ಲಿ ತೊಡಗಿಕೊಂಡಾಗ ಓಡಾಡುವಾಗ ನಡೆದಾಡುವಾಗ

7. ಅಕ್ಕಪಕ್ಕದಲ್ಲಿರುವವರನ್ನು ಗಮನಿಸಿದೆ ಸಾಮಗ್ರಿಗಳನ್ನು ಎಸೆಯುವಾಗ

**8. ಗೊತ್ತಿಲ್ಲದೆ ಬಿಸಿ ಪಾತ್ರೆಗಳನ್ನ ಬಿಸಿಯಾಗಿರುವ ವಸ್ತುಗಳನ್ನು ಮುಟ್ಟಿದಾಗ ಉರಿಯುವ ಗ್ಯಾಸ್ ದೀಪ ಅಥವಾ ಇನ್ಯಾವುದೇ ಅಂತಹ ವಸ್ತುವಿನ ಸಂಪರ್ಕಕ್ಕೆ ಬಂದಾಗ ದೇವರ ಮುಂದೆ ಹಚ್ಚಿದ ದೀಪ ಊದಿನ ಕಡ್ಡಿ ಕರ್ಪೂರಗಳನ್ನು ಮುಟ್ಟಿದಾಗ**

**9. ಆಟದ ಮೈದಾನದಲ್ಲಿ ಆಡುವಾಗ ಓಡುವಾಗ ಜಿಗಿಯುವಾಗ ಎಸೆಯುವಾಗ ತಳ್ಳುವಾಗ.**

**10.ನೀರಿನಲ್ಲಿ ಆಟವಾಡುವಾಗ ಈಜುವಾಗ ಜಿಗಿಯುವಾಗ.**

**11 ಮನೆಯ ಸಂಬಂಧಿಕರು ಹಿತಕರವಲ್ಲದಂತೆ ಮುಟ್ಟಿದಾಗ ಮನೆಗೆ ಬಂದ ಸಂಬಂಧಿಕರು ಹಿತಕರವಲ್ಲದಂತೆ ಮುಟ್ಟಿದಾಗ ಮನೆಗೆ ಬಂದ ಸಂಬಂಧಿತ ಅಲ್ಲದವರು ಹಿತಕರವಾಗಿ ಹಿತಕರವಲ್ಲದಂತೆ ಮುಟ್ಟಿದಾಗ ಮನೆಯ ಅಕ್ಕ ಪಕ್ಕದವರು ಸ್ನೇಹಿತರು ಶಿಕ್ಷಕ ಶಿಕ್ಷಕಿಯರು ಹಿತಕರವಲ್ಲದಂತೆ ಮುಟ್ಟಿದಾಗ.**

**12. ದೈಹಿಕ ದೋಷಗಳನ್ನು ಗುರುತಿಸಿ ವರ್ತನೆಗಳನ್ನು ಗುರುತಿಸಿ ಮಗುವಿನ ರೂಪ ಬಣ್ಣವನ್ನು ಗುರುತಿಸಿ ಚಲನೆ ಮಾತು ನೋಟ ಇವುಗಳನ್ನು ವಿಶೇಷವಾಗಿ ಗಮನಿಸಿ ಕೌಟುಂಬಿಕ ಆರ್ಥಿಕ ಪರಿಸ್ಥಿತಿಯನ್ನು ಗುರುತಿಸಿ ವೇಷಭೂಷಣ ಸಮವಸ್ತ್ರಗಳನ್ನು ಲಿಂಗ ವ್ಯತ್ಯಾಸವನ್ನು ಗುರುತಿಸಿ ಶರೀರದ ಬಣ್ಣ ಗುರುತಿಸಿ ಎತ್ತರ ಗಿಡ್ಡ ಆಕೃತಿಯನ್ನು ಗುರುತಿಸಿ ಭಾಷೆ ಮಾತನಾಡುವ ವಿಧಾನವನ್ನು ಗುರುತಿಸಿ .**

**13. ರೋಗಗಳ ಬಗ್ಗೆ ಮಾಹಿತಿ ಇಲ್ಲದೆ ಅಂತಹ ವಾತಾವರಣದಲ್ಲಿ ತೊಡಗಿಸಿ ಕೊಂಡಾಗ ಮನೆಯಲ್ಲಿರುವ ಕೃಷಿ ಉಪಕರಣಗಳಾದ ನೇಗಿಲು ಕೂರಿಗೆ ಕುಂಟೆ ಕೊಡಲಿ ಮುಂತಾದ ಸಾಮಗ್ರಿಗಳ ಸಂಪರ್ಕಕ್ಕೆ ಬಂದಾಗ .**

**14. ಗೊತ್ತಿಲ್ಲದೆ ತಂತಿ ಬೇಲಿ ದಾಟುವಾಗ ಆಟದ ಮೈದಾನದಲ್ಲಿ ಹೊಲಗಳಲ್ಲಿ ನೆಗ್ಗಲು ಮುಳ್ಳಿನಂತಹ ಜಾಲಿ ಮುಳ್ಳಿನಂತಹ ಅಪಾಯವೇ ವೆನಿಸುವ ಸಸ್ಯಗಳ ಸಂಪರ್ಕಕ್ಕೆ ಬಂದಾಗ .**

**15. ಆಧುನಿಕ ಪರಿಸ್ಥಿತಿಯಲ್ಲಿ ಮೊಬೈಲು ಟಿವಿ ಕಂಪ್ಯೂರ್ಗಳನ್ನ ವೀಕ್ಷಿಸುವ ಸಂರ್ಭದಲ್ಲಿ ಮನೆ ಹಿರಿಯರು ಬಳಸುವ ತಂಬಾಕು ಸಾಮಗ್ರಿಗಳು ಮಾದಕ ವಸ್ತುಗಳ ಸಂಪರ್ಕಕ್ಕೆ ಬಂದಾಗ .**

**ಈ ರೀತಿಯಾದಂತಹ ಹಲವಾರು ಸಂದರ್ಭಗಳಲ್ಲಿ ಮಗು ಅಪಾಯಕ್ಕೆ ಒಳಗಾಗುವುದರಿಂದ ಈ ಎಲ್ಲಾ ಸಂದರ್ಭಗಳಲ್ಲಿ ಮಗುವನ್ನು ಅಪಾಯದಿಂದ ರಕ್ಷಿಸುವ ಮತ್ತು ಮಗು ತನ್ನನ್ನು ತಾನೇ ರಕ್ಷಿಸಿಕೊಳ್ಳುವ ವಿಧಾನಗಳನ್ನು ಕೌಶಲ್ಯಗಳನ್ನು ಮಗುವಿಗೆ ಒದಗಿಸಿಕೊಡುವ ಕಾರ್ಯ ಕಲಿಸಿಕೊಡುವ ಕಾರ್ಯವಾತಾವರಣದಲ್ಲಿ ಒಂದರಿಂದ 10ನೇ ತರಗತಿಯ ಸಂದರ್ಭಗಳಲ್ಲಿ ನಿರಂತರವಾಗಿ ನಡೆಯಬೇಕು**

## 11.ಮಕ್ಕಳ ಸುರಕ್ಷತಾ ಪರಿಕರಗಳು

ಶಾಲೆ ಎಂದರೆ ಜ್ಞಾನದ ಮಂದಿರ ಇದನ್ನು ಮಕ್ಕಳ ಎರಡನೇ ಮನೆ ಎಂದು ಕರೆಯುತ್ತಾರೆ. ಅಷ್ಟೇ ಅಲ್ಲದೆ ಇದು ಮಕ್ಕಳ ಸುರಕ್ಷಿತ ತಾಣ ಜೀವನದ ಅಗತ್ಯತೆಗಳನ್ನು ಕಲಿಯಲು ಅವರ ದೈಹಿಕ ಮಾನಸಿಕ ಹಾಗೂ ಜೀವನದ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ಪ್ರಮುಖ ಸ್ಥಳ ಎಂದರೆ ನಮ್ಮ ಶಾಲೆ.ಈ ನಮ್ಮ ಶಾಲೆಯು ಮಕ್ಕಳ ಸುರಕ್ಷತಾ ತಾಣವಾಗ ಬೇಕಾಗುತ್ತದೆ ತಮ್ಮನ್ನು ಹಾಗೂ ತಮ್ಮ ಸಹಪಾಠಿಗಳನ್ನು ರಕ್ಷಿಸುವಂತಹ ಪರಿಕರಗಳು ಪ್ರತಿಯೊಂದು ಶಾಲೆಗಳು ಎಂದರೆತಪ್ಪಾಗದು.

ಶಾಲೆಯ ಪ್ರತಿಯೊಬ್ಬ ವಿದ್ಯಾರ್ಥಿಗಳು ನಾವು ಈ ಪರಿಸರದಲ್ಲಿ ಸುರಕ್ಷಿತವಾಗಿದ್ದೇವೆ ಎಂಬ ದೃಢನಂಬಿಕೆ ಇರಬೇಕು ಹಾಗೂ ಪಾಲಕರಿಗೆ ನಮ್ಮ ಮಕ್ಕಳು ಈ ಶಾಲಾ ಪರಿಸರದಲ್ಲಿ ಸುರಕ್ಷತೆಯೊಂದಿಗೆ ಉತ್ತಮ ನಡವಳಿಕೆಯ ಶಿಕ್ಷಣ ಪಡೆಯುತ್ತಿದ್ದಾರೆ ಎಂದು ಅಚಲ ನಂಬಿಕೆ ಹೊಂದಬೇಕು ಮಕ್ಕಳ ಸುರಕ್ಷತೆಯನ್ನು ಕಾಪಾಡಿಕೊಳ್ಳುವ ಜೊತೆಗೆ ಅವರ ಸ್ವಯಂ ರಕ್ಷಣೆಗೆ ಹಲವು ಕಲೆಗಳು ಪರಿಕರಗಳು ಶಾಲೆ ಹೊಂದಿರಬೇಕಾಗುತ್ತದೆ ಒಂದು ಶಾಲೆಯು ಮಕ್ಕಳ ಸರ್ವಾಂಗಿನ ಪ್ರಗತಿಯ ಜೊತೆಗೆ ಮಕ್ಕಳ ಸುರಕ್ಷತೆಗೆ ಪ್ರಮುಖ ಆದ್ಯತೆ ನೀಡುತ್ತಿದೆ ಎಂದು ಕಾಲಕಾಲಕ್ಕೆ ಶಾಲೆಗೆ ಭೇಟಿ ನೀಡುವ ಅಧಿಕಾರಿಗಳು ಸುರಕ್ಷತಾ ಕ್ರಮಗಳನ್ನು ಪರಿಶೀಲಿಸಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಬೇಕಾಗುತ್ತದೆ.

ಹಾಗಾದರೆ ಶಾಲೆಯಲ್ಲಿ ಯಾವೆಲ್ಲಾ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು.

**ದೈಹಿಕ ಸುರಕ್ಷತೆ**

**ಭಾವನಾತ್ಮಕ ಸುರಕ್ಷತೆ**

**ವೈಯಕ್ತಿಕ ಸುರಕ್ಷತೆ**

- ಪ್ರವಾಹ ಚಂಡಮಾರುತ ಭೂಕುಸಿತ ಸಮಯದಲ್ಲಿ ತೆಗೆದುಕೊಳ್ಳಬಹುದಾದ ಎಚ್ಚರಿಕೆಯ ಕ್ರಮಗಳು
- ಆಟದ ಮೈದಾನದಲ್ಲಿ ಸುರಕ್ಷತಾ ಕ್ರಮಗಳು
- ಕ್ರೀಡಾ ಚಟುವಟಿಕೆ ಸ್ಪರ್ಧಾ ಸಮಯದಲ್ಲಿ ಸುರಕ್ಷತಾ ಕ್ರಮಗಳು
- ನೀರಿನ ಸುರಕ್ಷತೆ ಶಾಲಾ ಪ್ರಯೋಗಾಲಯದಲ್ಲಿ ಸುರಕ್ಷತಾ ಕ್ರಮಗಳು
- ಶಾಲಾ ರಕ್ಷಣಾತ್ಮಕ ಗೋಡೆಗಳು
- ವಿವಿಧ ವಯಸ್ಸಿನ ಹಾಗೂ ಗುಂಪುಗಳಿಗೆ ಪ್ರತ್ಯೇಕ ಶೌಚಾಲಯಗಳ ವ್ಯವಸ್ಥೆ
- ತರಗತಿಯ ವಿಶೇಷ ಚೇತನ ಮಕ್ಕಳ ವಿಶೇಷ ಆಸನದ ವ್ಯವಸ್ಥೆ
- ತರಗತಿಯಲ್ಲಿ ಬೆಳಕು ಹಾಗೂ ಗಾಳಿಯ ವ್ಯವಸ್ಥೆ
- ವಿದ್ಯಾರ್ಥಿಗಳಿಗೆ ಅವರ ವಯಸ್ಸಿಗೆ ಅನುಗುಣವಾಗಿ ಸರಿಯಾದ ನಡವಳಿಕೆ ಮತ್ತು ಸಾಮಾಜಿಕ ಕೌಶಲ್ಯಗಳನ್ನು ಕಲಿಸುವುದು
- ಕೋಪ, ಒತ್ತಡ, ಭಯ ,ಭಾವನೆಗಳನ್ನು, ಸರಿಯಾಗಿ ನಿಭಾಯಿಸುವುದು ಹಾಗೂ ಎದುರಿಸುವುದು ಹೇಗೆಂದು ಮಾರ್ಗದರ್ಶನ ನೀಡುವ ಪ್ರತ್ಯೇಕ ಅವಧಿಗಳ ವ್ಯವಸ್ಥೆ
- ಮಕ್ಕಳನ್ನು ಬೆದರಿಸುವ, ಟೀಕೆ, ಕೆಟ್ಟ ಭಾಷೆಗಳನ್ನು ಆಡುವುದು, ಸಹಪಾಠಿ ವಿದ್ಯಾರ್ಥಿಗಳನ್ನು ಕೀಳಾಗಿ ಕಾಣುವ ಮನೋಭಾವವನ್ನು ಹೊಂದಿರದಂತೆ ತಿಳಿ ಹೇಳುವ ಚಟುವಟಿಕೆಗಳು ನಡೆಸುವುದು
- ಶಾಲಾ ಪರಿಸರದಲ್ಲಿ ಮಕ್ಕಳನ್ನು ಪ್ರೀತಿಯಿಂದ ಕಾಣುವ ಹಾಗೂ ಆತ್ಮಸ್ಥೈರ್ಯ ತುಂಬುವಂತಹ ಕಾರ್ಯಕ್ರಮಗಳನ್ನು ನಡೆಸುವುದು
- ಅಮೂಲ್ಯವಾದ ಅಧ್ಯಯನ ಸಮಯ ಹಾಳಾಗದಂತೆ ವ್ಯರ್ಥವಾಗದಂತೆ ಸಾಮಾಜಿಕ ಜಾಲತಾಣಗಳ ಬಳಕೆಯ ಬಗ್ಗೆ ಜಾಗೃತಿ ಮೂಡಿಸುವುದ
- ತಂತ್ರಜ್ಞಾನದ ಸುರಕ್ಷಿತ ಬಳಕೆಯ ಬಗ್ಗೆ ತಿಳಿ ಹೇಳುವುದು
- ಶಾಲಾ ಪರಿಸರದಲ್ಲಿ ಸುರಕ್ಷತೆಯ ಘೋಷ ವಾಕ್ಯಗಳನ್ನು ಸರಿಯಾದ ಸ್ಥಳದಲ್ಲಿ ಪ್ರದರ್ಶಿಸುವುದು.

ನಮಗೆ ಈ ಮೇಲಿನ ಎಲ್ಲ ಸುರಕ್ಷಿತಹ ಕ್ರಮಗಳನ್ನು ಹೊಂದಿರಬೇಕಾದರೆ ಹಲವು ಪರಿಕರಗಳು ಸಾಧನಗಳ ಹಾಗೂ ತಂತ್ರಗಳ ಅವಶ್ಯಕತೆ ಇದೆ ಇವುಗಳನ್ನು ಹೊಂದುವುದು ಪ್ರತಿಯೊಂದು ಸಂಸ್ಥೆಯ ಆದ್ಯ ಕರ್ತವ್ಯವಾಗಿದೆ ಹಾಗಾದರೆ

**ಆ ಸಾಧನಾ ತಂತ್ರಗಳು ಯಾವವು?**

- ಪ್ರಥಮ ಚಿಕಿತ್ಸಾ ಪೆಟ್ಟಿಗೆ
- ಮಕ್ಕಳ ಸಮಸ್ಯೆ ಪೆಟ್ಟಿಗೆ
- ಪಾಲಕರ ಸಲಹಾ ಪೆಟ್ಟಿಗೆ.

**ಪ್ರಥಮ ಚಿಕಿತ್ಸೆ ಎಂದರೇನು?**
**ಪ್ರಥಮ ಚಿಕಿತ್ಸೆ ಎಂದರೆ ಗಾಯ ಅಥವಾ ಅವಘಡಗಳಾದಾಗ ರೋಗಿಯನ್ನು ವೈದ್ಯರ ಬಳಿ ಕರೆದುಕೊಂಡು ಹೋಗುವ ಪೂರ್ವದಲ್ಲಿ ಒದಗಿಸುವ ಆರಂಭಿಕ ಚಿಕಿತ್ಸೆಯನ್ನು ಪ್ರಥಮ ಚಿಕಿತ್ಸೆ ಎನ್ನುತ್ತಾರೆ**
**ಉದಾಹರಣೆಗೆ-ಮಗು ಆಟದ ಮೈದಾನದಲ್ಲಿ ಬಿದ್ದು ಗಾಯವಾಗಿದ್ದರೆ ಮೊದಲು ಗಾಯವನ್ನು ಶುದ್ಧ ನೀರಿನಿಂದ ಸ್ವಚ್ಛವಾಗಿ ತೊಳೆಯಿರಿ ನಂತರ ನಂಜುರೋಧಕ ಪ್ರಥಮ ಚಿಕಿತ್ಸಾ ಪೆಟ್ಟಿಗೆಯಿಂದ ಪಡೆದು ಹತ್ತಿ ಬಟ್ಟೆಯಿಂದ ಗಾಯದ ಮೇಲೆ ಇರಿಸಿ ಕಟ್ಟಿ ಹೆಚ್ಚಿನ ಗಾಯವಿದ್ದರೆ ವೈದ್ಯರ ಬಳಿ ಕಳಿಸುವುದು**
**ಚಟುವಟಿಕೆ :**
**ಶಿಕ್ಷಕರು ತರಬೇತಿ ಸಮಯದಲ್ಲಿ ಇತರೆ ಪ್ರಥಮ ಚಿಕಿತ್ಸಾ ವಿಧಾನಗಳನ್ನು ಗುಂಪುಗಳಲ್ಲಿ ಪಟ್ಟಿಮಾಡಿ ಓದುವದು.**
**ಪ್ರಥಮ ಚಿಕಿತ್ಸಾ ಪೆಟ್ಟಿಗೆಯಲ್ಲಿ ಇರಬೇಕಾದ ಸಾಮಗ್ರಿಗಳು ಪ್ರತಿಯೊಂದು ಶಾಲೆ ಮನೆ ವಾಹನ ಕಚೇರಿಗಳಲ್ಲಿ ಬಸ್ ನಿಲ್ದಾಣಗಳಲ್ಲಿ ರೈಲು ನಿಲ್ದಾಣಗಳಲ್ಲಿ ಇತರೆ ಜನಸಂದನೆ ಪ್ರದೇಶಗಳಲ್ಲಿ ಕಡ್ಡಾಯವಾಗಿ ಪ್ರಥಮ ಚಿಕಿತ್ಸೆ ಪೆಟ್ಟಿಗೆ ನೀಡುವುದು ಆ ಪೆಟ್ಟಿಗೆಯಲ್ಲಿ ಇರಬೇಕಾದ ಅವಶ್ಯಕತೆ ಸಾಮಗ್ರಿಗಳು ಈ ಕೆಳಗಿನಂತಿವೆ.**

- **ನಂಜು ನಿರೋಧಕ ಕ್ರೀಮ್ ಬ್ಯಾಂಡೇಜ್**
- **ಚಿಮುಟ**
- **ನೋವು ನಿವಾರಕ ಮಾತ್ರೆಗಳು**
- **ಹತ್ತಿ**
- **ಕತ್ತರಿ**
- **ಬ್ಯಾಂಡೇಜ್**
- **ಸುತ್ತುವ ಪಟ್ಟಿಗಳು**

**ಶಾಲಾ ಹಂತದ ಚಟುವಟಿಕೆಗಳು :- ಈ ಎಲ್ಲ ಸಾಧನಗಳನ್ನು ಒಳಗೊಂಡಿರುವ ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ನಿರ್ವಹಣೆ ಮಾಡಲು ಐದು ಜನ ವಿದ್ಯಾರ್ಥಿಗಳ ತಂಡವನ್ನು ರಚಿಸಬೇಕು ಈ ತಂಡದಲ್ಲಿ ಎರಡು ಜನ ಹುಡುಗಿಯರು ಇರುವಂತೆ ಕ್ರಮವಹಿಸಬೇಕು.ಈ ತಂಡಕ್ಕೆ ಪ್ರಥಮ ಚಿಕಿತ್ಸೆಯ ಸಂಪೂರ್ಣ ಮಾಹಿತಿ ಇರುವಂತೆ ತರಬೇತಿ ನೀಡಬೇಕು.ಈ ತಂಡಕ್ಕೆ ಒಬ್ಬ ಮೇಲ್ವಿಚಾರಕ ಶಿಕ್ಷಕರನ್ನು ನೇಮಿಸಬೇಕು.ವರ್ಷದಲ್ಲಿ ಎರಡು ಸಾರಿ ಆದರೂ ಸ್ಥಳೀಯ ವೈದ್ಯರಿಂದ ಪ್ರಥಮ ಚಿಕಿತ್ಸೆಯ ಕುರಿತು ಶಾಲೆಯಲ್ಲಿ ಉಪನ್ಯಾಸ ಏರ್ಪಡಿಸಬೇಕು.**

**ತರಬೇತಿ ಹಂತದ ಚಟುವಟಿಕೆ.ಪ್ರಥಮ ಚಿಕಿತ್ಸೆಗೆ ಸಂಬಂಧಿಸಿದಂತೆ ಹಲವು ಬ್ಯಾಂಡೇಜ್ ಕಟ್ಟುವ ವಿಧಾನವನ್ನು ವಿಡಿಯೋ ಮೂಲಕ ತೋರಿಸುವುದು.ಈ ವಿಡಿಯೋ ವೀಕ್ಷಿಸಿದ ನಂತರ ಬ್ಯಾಂಡೇಜ್ ಕಟ್ಟುವ ವಿಧಾನವನ್ನು ಗುಂಪುಗಳಲ್ಲಿ ಮಾಡಿಸುವುದು.ಉದಾಹರಣೆಗೆ; ಹೆಡ್ ಬ್ಯಾಂಡೇಜ್, ಟ್ರಯಾಂಗಲ್ ಬ್ಯಾಂಡೇಜ್, ನೀ ಬ್ಯಾಂಡೇಜ್ ಈ ಚಟುವಟಿಕೆಯ ವಿಡಿಯೋಗಳಿಗಾಗಿ ಸ್ಕೌಟ್ ಆ್ಯಂಡ್ ಗೈಡ್ಸ್ ಗೆ ಸಂಬಂಧಿಸಿದ ಜಾಲತಾಣಗಳಲ್ಲಿ ವಿಡಿಯೋಗಳನ್ನು ಪಡೆದುಕೊಂಡು ವೀಕ್ಷಿಸುವುದು.**

**ಮಕ್ಕಳ ಸಮಸ್ಯೆ ಪೆಟ್ಟಿಗೆ:ಮಕ್ಕಳು ತಮಗೆ ಶಾಲಾ ಪರಿಸರದಲ್ಲಿ ಉಂಟಾಗುವ ಸಮಸ್ಯೆಗಳನ್ನು ಶಿಕ್ಷಕರು ಎದುರು ಹೇಳಿಕೊಳ್ಳಲು ಭಯಪಡುತ್ತಾರೆ.ಈ ಭಯದ ವಾತಾವರಣ ಹೋಗಲಾಡಿಸಿ ಅವರಿಗೆ ರಕ್ಷಣೆ ಜೊತೆಗೆ ಉತ್ತಮ ಶಿಕ್ಷಣ ನೀಡುವುದು ನಮ್ಮ ಕರ್ತವ್ಯ ಈ ದಿಶೆಯಲ್ಲಿ ಪ್ರಥಮ ಚಿಕಿತ್ಸೆ ಪೆಟ್ಟಿಗೆಯಂತೆ ಮಕ್ಕಳ ಸಮಸ್ಯೆ ಪೆಟ್ಟಿಗೆ ಇಡುವುದು ಪ್ರತಿವಾರಕ್ಕೆ ಒಂದು ಸಾರಿ ಈ ಸಮಸ್ಯೆಗಳನ್ನು ಅವಲೋಕಿಸಿ ಪರಿಹಾರ ಕಂಡುಕೊಳ್ಳುವುದು.ಸಮಸ್ಯೆ ಪರಿಹಾರ ಕಂಡುಕೊಳ್ಳಲು ಶಿಕ್ಷಕರು ಸಹಪಾಠಿಗಳು, ಕುಟುಂಬದ ಸದಸ್ಯರು ಸಮುದಾಯ ಎಸ್‌ಡಿಎಂಸಿ ಅವರು ಹಾಗೂ ಇಲಾಖೆಯ ಎಲ್ಲಾ ಹಂತದ ಅಧಿಕಾರಿಗಳು ಸೂಕ್ತ ಮಾರ್ಗದರ್ಶನ ಸಲಹೆಗಳನ್ನು ನೀಡುವದು.**

*** ತರಬೇತಿ ಹಂತದಲ್ಲಿ ಶಿಕ್ಷಕರಿಗೆ ಚಟುವಟಿಕೆ**
**ಗುಂಪು ಚರ್ಚೆ**
**1)ಮಗು ತನ್ನ ಸಮಸ್ಯೆಗಳನ್ನು ಹೇಳಲು ಏಕೆ ಹಿಂಜರಿಯುತ್ತದೆ.?**
**2)ಶಾಲೆ ಮತ್ತು ಶಾಲೆಯಿಂದ ಹೊರಗೆ ಮಗು ಎದುರಿಸುತ್ತಿರುವ ಸಮಸ್ಯೆಗಳ ಪಟ್ಟಿ ಮಾಡುವುದು.**
**3)ಈ ಸಮಸ್ಯೆಗಳಿಗೆ ಪರಿಹಾರ ಹೇಗೆ ಕಂಡುಕೊಳ್ಳುವುದು ?**
**ಈ ಮೇಲಿನ ಮೂರು ಅಂಶಗಳ ಮೇಲೆ ಶಿಕ್ಷಕರಲ್ಲಿ ಮೂರು ಗುಂಪುಗಳನ್ನಾಗಿ ಮಾಡಿ ಚರ್ಚಿಸುವುದು.**

**ಪಾಲಕರ ಸಲಹಾ ಪೆಟ್ಟಿಗೆ**

**ನಾವು ಉದ್ಯಾನವನ ಬಸ್ಸು ಗ್ರಂಥಾಲಯ ಆಸ್ಪತ್ರೆಗಳಿಗೆ ತೆರಳಿದಾಗ ಅಲ್ಲಿ ಸಲಹಾ ಪೆಟ್ಟಿಗೆ ಇರುವುದನ್ನು ಗಮನಿಸಿದ್ದೇವೆ. ಆದರೆ ನಾಳಿನ ಭವ್ಯ ಭಾರತದ ಪ್ರಜೆಗಳನ್ನು ತರಬೇತಿಗೊಳಿಸುತ್ತಿರುವ ಹಾಗೂ ನಮ್ಮ ಮಗು ಇಂತಹದ್ದೇ ಸೌಲಭ್ಯಗಳಿರುವ ಶಾಲೆಯಲ್ಲಿ ಕಲಿಯಬೇಕೆಂಬ ಮಹಾದಾಸಿ ಇಟ್ಟುಕೊಂಡಿರುವ ಹಾಗೂ ನನ್ನ ಮಗು ಕಲಿಯುವ ಶಾಲೆ ಅವನ ಸರ್ವತೋಮುಖ ಬೆಳವಣಿಗೆಯ ಜೊತೆಗೆ ಶಾಲೆಯಲ್ಲಿ ಸುರಕ್ಷಿತ ವಾತಾವರಣ ಇರಬೇಕ ಎಂಬ ಆಸೆ ಪ್ರತಿಯೊಬ್ಬ ಪಾಲಕರಲ್ಲಿ ಇದ್ದೇ ಇರುತ್ತದೆ ಆ ಕಾರಣದಿಂದ ಅವರ ಸೂಕ್ತ ಸಲಹೆಗಾಗಿ ಪಾಲಕರಿಗಾಗಿ ಸಲಹಾ ಪೆಟ್ಟಿಗೆ ಒಂದನ್ನು ಇಡಬೇಕು. ಈ ಸಲಹಾ ಪೆಟ್ಟಿಗೆಯು ಶಾಲಾ ಕಾರ್ಯಾಲಯದಲ್ಲಿ ಇಟ್ಟು ಪ್ರತಿ ತಿಂಗಳು ನಡೆಯುವ ಎಸ್.ಡಿ.ಎಂ.ಸಿ ಸಭೆಯಲ್ಲಿ ಎಲ್ಲರ ಸಮ್ಮುಖದಲ್ಲಿ ತೆರೆದು ಸಲಹೆಗಳಿಗೆ ಮಾರ್ಗೋಪಾಯಗಳನ್ನು ಕಂಡುಕೊಳ್ಳುವುದು ನಮ್ಮ ಶಾಲಾ ಸುರಕ್ಷತೆಯನ್ನು ಇನ್ನು ಹೆಚ್ಚಿಸಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡಬಹುದು.**

***ತರಬೇತಿ ಸಮಯದಲ್ಲಿಯೇ ಚಟುವಟಿಕೆ ಗುಂಪು ಚರ್ಚೆ**

**ಪಾಲಕರ ಸಲಹಾ ಪೆಟ್ಟಿಗೆಯನ್ನು ನಿರ್ವಹಿಸುವುದು ಹೇಗೆ ಶಿಬಿರಾರ್ಥಿಗಳಿಂದ ಗುಂಪು ಚರ್ಚೆ ಮಾಡಿಸುವುದು ಹಾಗೂ ಲಿಖಿತ ರೂಪದಲ್ಲಿ ಚರ್ಚೆಯ ಅಂಶಗಳನ್ನು ಪಡೆಯುವುದು ಹಾಗೂ ಸುಧಾರಣೆಗೆ ಸಲಹೆ ಸೂಚನೆಗಳನ್ನು ಸಂಗ್ರಹಿಸುವುದು.**

## 12. ಘೋಷವಾಕ್ಯಗಳು

- **ಸುರಕ್ಷತೆಯ ಪಾಲನೆ ಜೀವನದ ಲಾಲನೆ.**
- **ಜಾಗ್ರತೆಯಿಂದ ಬದುಕು ಅಜಾಗ್ರತೆಯಿಂದ ಸಾವು.**

- ಸುರಕ್ಷತೆಯಿಂದ ಸರ್ವ ಸಂಪತ್ತು, ಅಸುರಕ್ಷತೆಯಿಂದ ಸರ್ವ ಆಪತ್ತು.
- ಸುರಕ್ಷತೆಯು ಸರಿಯಾಗಿದ್ದರೆ, ಭವಿಷ್ಯವು ಉಜ್ವಲವಾಗಿರುತ್ತದೆ.
- ಸುರಕ್ಷತೆಯುಒಂದು ಅರ್ಥ, ಕಳೆದುಕೊಂಡರೆ ವ್ಯರ್ಥ.
- ಮಕ್ಕಳ ಸಂರಕ್ಷಣೆ ನಮ್ಮ ಕರ್ತವ್ಯ.
- ಹಿಡಿದರೆ ಸುರಕ್ಷತೆಯ ದಾರಿ, ಗೆಲ್ಲುವೆ ನಗುವ ಬೀರಿ.
- ಸಮೃದ್ಧ ಸಮಾಜ ಕಟ್ಟಲು ಮಕ್ಕಳ ಸುರಕ್ಷತೆ ಅವಶ್ಯಕ.
- ಮಕ್ಕಳ ಸುರಕ್ಷತೆ ನಮ್ಮ ಹಕ್ಕು.
- ಸುರಕ್ಷತೆಯ ಅರಿವು ಮಕ್ಕಳಲ್ಲಿ ಬೆಳೆಸಿರಿ.
- ಮಕ್ಕಳ ಸುರಕ್ಷತೆಯ ಜ್ಯೋತಿ ಬೆಳಗಿಸಲು, ನಾವೆಲ್ಲರು ಹಣತೆ, ಬತ್ತಿ ಮತ್ತು ಎಣ್ಣೆ ಆಗೋಣ.
- ಮಕ್ಕಳ ಸುರಕ್ಷತೆಗಾಗಿ ಎಲ್ಲ ಸೌಲಭ್ಯಗಳನ್ನು ಒದಗಿಸೋಣ.
- ದೇಶಕ್ಕೆ ಉತ್ತಮ ನಾಳೆ, ಮಕ್ಕಳ ಸುರಕ್ಷತೆಯೇ ಪರಿಹಾರ.
- ಮಕ್ಕಳ ಸುರಕ್ಷತೆ ನಮ್ಮ ಆದ್ಯತೆ.
- ಬಾಲ ಕಾರ್ಮಿಕತೆವಿರುದ್ದ ಹೋರಾಡಿ, ಸುಶಿಕ್ಷಿತ ಭಾರತದ ಕನಸನ್ನು ನನಸು ಮಾಡಿ.
- ಮಕ್ಕಳ ಸಾಗಾಟಕ್ಕೆ ಎಳೆಯಿರಿ ತೆರೆ, ನೀಡಿರಿ ಮಾನವಿಯತೆಯೆಂಬ ಕರೆ.
- ಮಕ್ಕಳಿಗೆ ಬೇಡ ದುಡಿತದ ಬವಣೆ, ಶಿಕ್ಷಣ ಕೊಡುವುದು ನಮ್ಮೆಲ್ಲರ ಹೊಣೆ.
- ಮಕ್ಕಳು ದೇಶದ ಸಂಪತ್ತು, ಸಾಗಣೆ ಮಾಡಿದರೆ ಬರುವುದು ಆಪತ್ತು.
- ಮಕ್ಕಳ ಜೀವನದ ಪ್ರಶ್ನೆಗೆ ಸುರಕ್ಷಿತ ಶಿಕ್ಷಣವೇ ಉತ್ತರ.
- ಮಕ್ಕಳ ಹಕ್ಕುಗಳ ರಕ್ಷಣೆ ನಮ್ಮೆಲ್ಲರ ಹೊಣೆ.
- ಮಕ್ಕಳ ಹಕ್ಕುಗಳು ಬಹಳ ಮುಖ್ಯ, ಅದು ದೇಶದ ಅಭಿವೃದ್ಧಿಯ ಅಕ್ಷ.
- ಮಕ್ಕಳ ಹಕ್ಕುಗಳನ್ನು ಪರಿಗಣಿಸಿ, ಮಕ್ಕಳ ಜೀವನದಲ್ಲಿ ಸಂತೋಷವನ್ನು ತುಂಬಿರಿ.
- ಮಕ್ಕಳ ಹಕ್ಕುಗಳ ರಕ್ಷಣೆ, ಭವ್ಯ ಭಾರತದ ರಕ್ಷಣೆ.

## ತರಬೇತಿ ಪ್ರಕ್ರಿಯೆ

| ಕ್ರ .ಸಂ | ಪ್ರಮುಖಾಂಶಗಳು | ಚಟುವಟಿಕೆಗಳು | ಸಂಪನ್ಮೂಲಗಳು ಮತ್ತು ಚಟುವಟಿಕೆಗಳು ವಿಡಿಯೋ ,ಪಿಪಿಟಿ,ಫೋಟೋ ,ಲಿಂಕ್ ಗಳು,,ಆಟಗಳು |
|---|---|---|---|
| 01 | ಮಕ್ಕಳು ಎಂದರೆ ಯಾರು ? | ತಾಳೆ ಪಟ್ಟಿ | ಚಟುವಟಿಕೆಗಳು, ಚರ್ಚೆ |
| 02 | ಮಕ್ಕಳ ಸುರಕ್ಷತೆ ಎಂದರೇನು ? | ಚರ್ಚಾ ವಿಧಾನ | ಚಿತ್ರಪಟಗಳು |
| 03 | ಮಕ್ಕಳ ಸುರಕ್ಷತಾ ಸಮಿತಿಗಳು ಮತ್ತು ಕಾನೂನುಗಳು | ಚರ್ಚೆ ಮತ್ತು ವಿವರಣಾ ವಿಧಾನ | ಪಿ ಪಿ ಟಿ ಮತ್ತು ವಿಡಿಯೋ |
| 04 | ಮಕ್ಕಳ ಸುರಕ್ಷತೆಯ ವಿಧಗಳು | ಗುಂಪು ಚರ್ಚೆ | ಪಿ ಪಿ ಟಿ ಮತ್ತು ವಿಡಿಯೋ |
| 05 | ಮಕ್ಕಳ ಸುರಕ್ಷತೆ ಎಲ್ಲಿ ? | ಗುಂಪು ಚರ್ಚೆ | ಪಿ ಪಿ ಟಿ ಮತ್ತು ವಿಡಿಯೋ ಮತ್ತು ಚಿತ್ರ ಪಟಗಳು |
| 06 | ಸುಸ್ಥಿರ ಆರೋಗ್ಯ | ಚರ್ಚಾ ವಿಧಾನ | ಪಿ ಪಿ ಟಿ ಮತ್ತು ವಿಡಿಯೋ ಮತ್ತು ಚಿತ್ರ ಪಟಗಳು |
| 07 | ಸಂತುಲಿತ ಆಹಾರ | ಚರ್ಚಾ ವಿಧಾನ | ಪಿ ಪಿ ಟಿ ಮತ್ತು ವಿಡಿಯೋ ಮತ್ತು ಚಿತ್ರ ಪಟಗಳು |
| 08 | ಅಂತರ್ಜಾಲ | ಪ್ರಾಯೋಗಿಕ ವಿಧಾನ | ಪಿ ಪಿ ಟಿ ಮತ್ತು ವಿಡಿಯೋ |
| 09 | ಮೂಢನಂಬಿಕೆಗಳು | ಗುಂಪು ಚರ್ಚೆ | ಪ್ರಾಯೋಗಿಕಚಟುವಟಿಕೆಗಳು |
| 10 | ಸ್ವ ರಕ್ಷಣಾ ತಂತ್ರಗಳು | ಗುಂಪು ಚರ್ಚೆ | ಪಿ ಪಿ ಟಿ ಮತ್ತು ವಿಡಿಯೋ ಮತ್ತು ಚಿತ್ರ ಪಟಗಳು |
| 11 | ಮಕ್ಕಳ ಸುರಕ್ಷತಾ ಪರಿಕರಗಳು | ಪ್ರಾಯೋಗಿಕ ವಿಧಾನ | ಮಾದರಿಗಳಪ್ರದರ್ಶನ |
| 12 | ಘೋಷವಾಕ್ಯಗಳು | ಗುಂಪು ಚರ್ಚೆ | ಮಿಂಚುಪಟ್ಟಿಗಳು |

## * ಆಕರ ಗ್ರಂಥಗಳು

- ಟಿಪಿಡಿ ಮಾಡ್ಯೂಲ್,2018 – 19,ರಾಜ್ಯ ಶಿಕ್ಷಣ ಮತ್ತು ತರಬೇತಿ ಇಲಾಖೆ ಬೆಂಗಳೂರು
- ಗುರುಚೇತನ ತರಬೇತಿ ಕೈಪಿಡಿ.
- ನಿಷ್ಠಾ ತರಬೇತಿ ಕೈಪಿಡಿಗಳು.






HERO

ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಶಾಲಾ ಮಟ್ಟದಲ್ಲಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ತರಲು ಶಿಕ್ಷಣಾಧಿಕಾರಿಗಳ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರಬೇಕು. ಈ ಬದಲಾವಣೆ ತರಲು ಅಗತ್ಯವಾದ ಸಾಮರ್ಥ್ಯಾಭಿವೃದ್ಧಿ ಮಾಡುವ ಸಂಸ್ಥೆ 'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ'.





ಉತ್ತಮ ನಾಯಕರು ಮತ್ತಷ್ಟು ನಾಯಕರನ್ನು ರೂಪಿಸುತ್ತಾರೆ, ಹಿಂಬಾಲಕರನ್ನಲ್ಲ. – ರಾಲ್ಫ್ ನಾಡರ್.


ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ, ಕರ್ನಾಟಕ (SISLEP)
ಡಯಟ್ ಆವರಣ, ಕಾಲೇಜು ರಸ್ತೆ, ಧಾರವಾಡ – 580008

ದೂರವಾಣಿ ಸಂಖ್ಯೆ : 0836–2441129
ಇ–ಮೇಲ್ : sislepdirector.dwd@gmail.com